ಹರದನಹಳ್ಳಿಯ ಸಾಂಸ್ಕೃತಿಕ ಅಧ್ಯಯನ

(ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ಎಂ.ಫಿಲ್ ಪದವಿಗಾಗಿ
ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕ
ಗಣೇಶಪ್ರಕಾಶ್ .ಬಿ

ಮಾರ್ಗದರ್ಶಕರು
ಎಂ.ಕೆ. ಮೃತ್ಯುಂಜಯ

ಕರ್ನಾಟಕ ಸಂಘ (ರಿ), ಮಂಡ್ಯ.
ಡಾ. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)
2007- 2008

ಹರದನಹಳ್ಳಿಯ ಸಾಂಸ್ಕೃತಿಕ ಅಧ್ಯಯನ

(ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ಎಂ.ಫಿಲ್ ಪದವಿಗಾಗಿ
ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕ
ಗಣೇಶಪ್ರಕಾಶ್ .ಬಿ

ಮಾರ್ಗದರ್ಶಕರು
ಎಂ.ಕೆ. ಮೃತ್ಯುಂಜಯ

ಕರ್ನಾಟಕ ಸಂಘ (ರಿ), ಮಂಡ್ಯ.
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)
2007- 2008

ಅಭ್ಯರ್ಥಿಯ ಪ್ರಮಾಣ ಪತ್ರ

ಹಂಪಿ ಕನ್ನಡವಿಶ್ವ ವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್.ಶ್ರೀ ಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2007–08ನೇ ಸಾಲಿಗೆ **ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ**ದ ಎಂ.ಫಿಲ್ ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **ಹರದನಹಳ್ಳಿಯ ಸಾಂಸ್ಕೃತಿಕ ಅಧ್ಯಯನದ** ವಿಷಯವನ್ನು ಆಯ್ಕೆ ಮಾಡಿಕೊಂಡು **ಎಂ.ಕೆ.ಮೃತ್ಯಂಜಯ** ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನೆಡೆಸಿ ಈ ನಿಬಂಧವನ್ನಾಗಲಿ, ನಿಬಂಧಗಳ ಅಧ್ಯಯನಗಳನ್ನಾಗಲಿ, ಬೇರೆ ಯಾವ ಗ್ರಂಥಗಳಲ್ಲಿ ಹಾಗೂ ನಿಯತಕಾಲಿಕಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸತ್ತಿದ್ದೇನೆ. ಕನ್ನಡ ವಿಶ್ವ ವಿದ್ಯಾನಿಲಯವು ನೀಡುವ ಎಂ.ಫಿಲ್ ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತಿದ್ದೇನೆ.

ದಿನಾಂಕ: 10-09-2008

ಸ್ಥಳ: ಮಂಡ್ಯ

ಅಭ್ಯರ್ಥಿಯ ಸಹಿ

(ಗಣೇಶ ಪ್ರಕಾಶ್.ಬಿ)

ದೃಢೀಕರಣ ಪತ್ರ

ಗಣೇಶ ಪ್ರಕಾಶ್.ಬಿ. ಇವರು ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ಎಂ.ಫಿಲ್. ಪದವಿ ಪರೀಕ್ಷೆ ಅಂಗವಾಗಿ ಹರದನಹಳ್ಳಿಯ ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯ ವನ್ನು **ಎಂ.ಕೆ. ಮೃತ್ಯುಂಜಯ** ಉಪನ್ಯಾಸಕರು ಇತಿಹಾಸ ವಿಭಾಗ ಶ್ರೀ ಚೆನ್ನಕೇಶವ ಪ್ರಥಮ ದರ್ಜೆಕಾಲೇಜು ಸಾಲಿಗ್ರಾಮ. ಕೆ.ಆರ್. ನಗರ ತಾಲ್ಲೂಕು ಇವರ ಮಾರ್ಗದರ್ಶನದಲ್ಲಿ ಸಂಶೋಧನಾ ನಿಬಂಧವನ್ನು ಸಿದ್ದಪಡಿಸಿದ್ದಾರೆ. ಇದನ್ನು ಈ ಮೊದಲು ಯಾವುದೇ ಬಗೆಯ ಪದವಿ ಡಿಪ್ಲೋಮಾ ಪ್ರಶಸ್ತಿಗಾಗಿ ಯಾವುದೇ ವಿಶ್ವ ವಿದ್ಯಾನಿಲಯಕ್ಕೆ ಸಲ್ಲಿಸಿಲ್ಲ ಎಂದು ದೃಢೀಕರಿಸುತ್ತೇನೆ.

ಸ್ಥಳ: ಮೈಸೂರು
ದಿನಾಂಕ: 10-9-2008

M.K. Mruthyunjaya

ಎಂ.ಕೆ. ಮೃತ್ಯುಂಜಯ

ಮಾರ್ಗದರ್ಶಕರು

M. K. Mruthyunjaya, M.A.
Lecturer
Dept. of History
Sri Channakeshava First Grade College
SALIGRAMA - 571 604

ಪರಿವಿಡಿ

1.ಪೀಠಿಕೆ

ಚಾಮರಾಜನಗರ ಜಿಲ್ಲಾ ಕೇಂದ್ರದಿಂದ ಸುಮಾರು 5.5ಕಿ.ಮೀ ಕ್ರಮಿಸಿದರೆ ನಮ್ಮ ಅಧ್ಯಯನದ ಈ ಹರದನಹಳ್ಳಿ ಕಣ್ಣೆದುರಿಗೆ ನಿಲ್ಲುತ್ತದೆ. ಕ್ರಿ.ಶ 8 ಮತ್ತು 9ನೇ ಶತಮಾನದಲ್ಲಿ ಪ್ರವರ್ದಮಾನಕ್ಕೆ ಬಂದ ಈ ಹಿಂದಿನ ಗ್ರಾಮ ವಾಣಿಜ್ಯನಗರಿ ಎಂದು ಕರೆಸಿಕೊಳ್ಳುತ್ತಿತ್ತು. ಚಾಮರಾಜನಗರದಿಂದ ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 209ನ್ನು ಹಾದು ಹೋಗುವ ಮಾರ್ಗ ಮಧ್ಯ ಈ ಗ್ರಾಮ ಸಿಗುತ್ತದೆ. ಹೊಯ್ಸಳರ ಕಾಲದ ದಿವ್ಯಲಿಂಗೇಶ್ವರ ದೇವಾಲಯ ಜಿಲ್ಲೆಯ ಪ್ರಸಿದ್ದ ದೇವಾಲಯಗಳಲ್ಲಿ ಒಂದು ಚಾಮರಾಜನಗರ ಜಿಲ್ಲೆಗೆ ಸೇರಿದ ಪ್ರಮುಖ ಗ್ರಾಮದಲ್ಲಿ ಇದು ಮುಖ್ಯವಾದುದು. ಜಿಲ್ಲಾ ಕೇಂದ್ರದಿಂದ ತುಂಬಾ ದೂರ ಕ್ರಮಿಸದೆ ಸಿಗುವಂತಹ ಐತಿಹ್ಯಗಳ ಒಂದು ದೊಡ್ಡ ಗ್ರಾಮ. ಯಡಿಯೂರು ಸಿದ್ದಲಿಂಗೇಶ್ವರರ ಹುಟ್ಟಿಗೆ, ಮಲೈ ಮಹಾದೇಶ್ವರ ಸ್ವಾಮಿ ದೀಕ್ಷೆಗೆ ಕಾರಣವಾದಂತಹ ಸಾಕ್ಷ್ಯಭೂತವಾದದ್ದು ಇದೇ ಗ್ರಾಮ.

ಕರ್ನಾಟಕ ರಾಜ್ಯದ ದಕ್ಷಿಣ ಭಾಗದ ಜಿಲ್ಲೆ ಎಂಬ ಪ್ರಸಿದ್ದಿಯನ್ನು ಪಡೆದುಕೊಂಡ ಚಾಮರಾಜನಗರ ಜಿಲ್ಲೆ, ಮೈಸೂರು ಜಿಲ್ಲೆಯಿಂದ ಬೇರಾಗಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಸರ್ಕಾರದಿಂದ ನೇಮಿಸಲ್ಪಟ್ಟ ಹೊಸ ಜಿಲ್ಲಾ ರಚನಾ ಸಮಿತಿಯಿಂದ ಇದು ಜಿಲ್ಲೆಯಾಗಿ ಮಾರ್ಪಟಿತು. ಇದರ ಇತಿಹಾಸವನ್ನು ತಿಳಿಯುತ್ತ ಹೋದರೆ ನಮಗೆ ಸರಿಯಾದಂತಹ ಸಾಕ್ಷಧಾರಗಳು ಸಮರ್ಪಕವಾಗಿ ಸಿಗುವುದಿಲ್ಲ.

ಚಾಮರಾಜನಗರ ಜಿಲ್ಲೆಯ ಪ್ರಮುಖ ಯಾತ್ರಾಸ್ಥಳಗಳೆಂದರೆ ಕೊಳ್ಳೇಗಾಲ ತಾಲೋಕಿಗೆ ಸೇರಿದ ಮಲೈ ಮಹಾದೇಶ್ವರ ಬೆಟ್ಟ, ಯಳಂದೂರು ತಾಲೋಕಿನ ಬಿಳಿಗಿರಿರಂಗನಬೆಟ್ಟ, ಗುಂಡ್ಲುಪೇಟೆ ತಾಲೋಕಿಗೆ ಸೇರಿದ ಗೋಪಾಲಸ್ವಾಮಿ ಬೆಟ್ಟ, ಪ್ರಸಿದ್ದ ಮಹದೇಶ್ವರ ಬೆಟ್ಟದಲ್ಲಿರುವ ಮಹದೇಶ್ವರರು ಈ ಭಾಗದ ಪ್ರಭಾವಿ ದೈವ; ನಂತರದ ಸ್ಥಾನ ಬಿಳಿಗಿರಿರಂಗನ ಬೆಟ್ಟದ ಬಿಳಿಗಿರಿರಂಗಸ್ವಾಮಿ, ಗೋಪಾಲಸ್ವಾಮಿ ಬೆಟ್ಟದ ಗೋಪಾಲಸ್ವಾಮಿ ಅನಂತರ ಚಾಮರಾಜನಗರದ ಚಾಮರಾಜೇಶ್ವರ ದೇವಾಲಯಗಳನ್ನು ಹೊರತು ಪಡಿಸಿದರೆ ಸುತ್ತಲಿನ ಗ್ರಾಮಗಳ ಮೇಲೆ ಗಮನವಿರುತ್ತದೆ. ಅವುಗಳಲ್ಲಿ ಮುಖ್ಯವಾದ ಗ್ರಾಮ ಹರದನಹಳ್ಳಿ ಇಲ್ಲಿನ ಮುಖ್ಯವಾದ ದೇವಾಲಯ ಶ್ರೀ ದಿವ್ಯಲಿಂಗೇಶ್ವರ ದೇವಾಲಯ. ನಾನು ಮೊದಲೇ

ತಿಳಿಸಿದಂತೆ ಚಾಮರಾಜನಗರದಿಂದ ಸತ್ಯಮಂಗಲ ರಸ್ತೆಯ 5.5ಕಿ.ಮೀ ದಕ್ಷಿಣಕ್ಕೆ ಕ್ರಮಿಸಿದರೆ ಹರದನಹಳ್ಳಿ ಎಂಬ ಗ್ರಾಮ ಸಿಗುತ್ತದೆ. ಇದರ ಇತಿಹಾಸದ ಬಗ್ಗೆ ನಮ್ಮಲ್ಲಿ ಇನ್ನು ಜಿಜ್ಞಾಸೆಯುಳಿದು ಬಂದಿದೆ. ಹೊಯ್ಸಳರ ವಾಸ್ತು ಶೈಲಿಯ ದೇವಾಲಯಗಳನ್ನು ಗಮನಿಸಿದ್ದೆ ಅದರೆ ಇದು ಹೊಯ್ಸಳರ ಕಾಲದಲ್ಲಿ ವಾಣಿಜ್ಯ ನಗರಿ ಎಂಬ ಪ್ರಸಿದ್ಧಿಯನ್ನು ಪಡೆದಿತ್ತು ಎಂಬುದು ಐತಿಹ್ಯ.

ಒಂದು ಪ್ರದೇಶದ ಜನಾಂಗದ ಬದುಕಿನ ರೀತಿನೀತಿಗಳು ಧಾರ್ಮಿಕ, ಆರ್ಥಿಕ, ಆಡಳಿತ್ಮಕ ವಿಚಾರಗಳನ್ನು, ವೇಶಭೂಷಣಗಳು, ಹಾಡುವ ಮಾತು, ಅಲ್ಲಿನ ಕ್ರೀಡೆ, ಇತ್ಯಾದಿ ವಿಚಾರಗಳನ್ನು ಸಂಸ್ಕೃತಿ ಎಂದು ಕರೆಯುತ್ತೇವೆ. ಹರದನಹಳ್ಳಿ ಇಂತಹ ಸಂಸ್ಕೃತಿಯೊಂದರಲ್ಲೇ ಬೆಳೆದು ಬಂದಿದೆ ಎಂದರೆ ತಪ್ಪಾಗಲಾರದು.

ಒಂದು ಗ್ರಾಮದ ವಾಸ್ತವ ಸಂಗಾತಿಗಳ ಜತೆ ಅಲ್ಲಿನ ದೇವಾಲಯಗಳು ವಾಸ್ತು ಶಿಲ್ಪಗಳು ಜನರ ಜೀವನಗಳೆಲ್ಲವನ್ನು ಸಾಂಸ್ಕೃತಿಕ ಅಧ್ಯಯನದಲ್ಲಿ ಹಿಡಿದಿಡುವ ಪ್ರಯತ್ನವನ್ನು ನಮ್ಮ ಅಧ್ಯಯನದಿಂದ ಸ್ವಲ್ಪ ಮಟ್ಟಿಗೆ ಮಾಡಬಹುದು. ಹರದನಹಳ್ಳಿ ಎಂಬ ಈ ಪುಟ್ಟ ಗ್ರಾಮದಲ್ಲಿ ನಾವು ಅನೇಕ ಆಚಾರ ವಿಚಾರಗಳು ಕಂಡುಬರುತ್ತದೆ.

ಹೊಯ್ಸಳರ ಕಾಲದಲ್ಲಿ ಈ ಊರು ಪ್ರಸಿದ್ಧಿ ಪಡೆದಿತ್ತು ಎಂಬುದಕ್ಕೆ ಇಲ್ಲಿ ಕುರುಹುಗಳಿವೆ. ಹರದನಹಳ್ಳಿಯ ಶ್ರೀದಿವ್ಯಲಿಂಗೇಶ್ವರ ದೇವಾಸ್ಥಾನಕ್ಕೆ ತನ್ನದೇ ಆದ ಇತಿಹಾಸವನ್ನು ಹೊಂದಿದೆ. ವೀರಶೈವ ಧರ್ಮದ ಉನ್ನತಿ ದೇವಾಲಯ ನಿರ್ಮಾಣಕ್ಕೆ ಕಾರಣವಾಗಿದೆ. ಇಲ್ಲಿ ಅನೇಕ ಪವಾಡಗಳು ನೆಡೆದಿದ್ದು ಜನರ ಮಾತಿನಲ್ಲಿ ಉಳಿದು ಬಂದಿದೆ.

ಗೋಪಾಲ ಕೃಷ್ಣ ದೇವಾಲಯ ಇಲ್ಲಿನ ವರ್ಗ ಸಂಘರ್ಷಕ್ಕೆ ಪ್ರತೀತಿಯಂತೆ ಇದೆ. ವೀರಶೈವ ಧರ್ಮದ ಹಿನ್ನೆಲೆಯಲ್ಲಿ ನಿರ್ಮಾಣಗೊಂಡಂತಹ ಗೋಸಲ ಮಠ ವಿದ್ಯಾ ಮಂದಿರವನ್ನು ಕೆಡವಿ ವೈಷ್ಣವರು ದೇವಾಲಯಕ್ಕೆ ಅಡಿಪಾಯ ಹಾಕಿದ್ದನ್ನು ಇಲ್ಲಿ ಕಾಣಬಹುದಾಗಿದೆ. ಅದ್ಭುತವಾದಂತಹ ದೇವಾಲಯದ ನಿರ್ಮಾಣ ವಿಶಾಲವಾದ ಹಜಾರಗಳು ನೋಡುಗರ ಕಣ್ಣನ್ನು ತಣಿಸುವಂತಹದ್ದು.

ಶ್ರೀ ತೋಂಟದ ಶ್ರೀ ಸಿದ್ದಲಿಂಗೇಶ್ವರ ಯತಿಗಳ ಜನ್ಮ ಸ್ಥಳ ಇದೇ ಹರದನಹಳ್ಳಿ ಎಂಬುದು ವಿಶೇಷ ಇಂದಿಗೂ ಅವರು ಜನಿಸಿದ ಮನೆ ಉಳಿದು ಬಂದಿದೆ. ಅವರು ಸ್ನಾನ ಮಾಡುತ್ತಿದ್ದಂತಹ ಕೊಳ, ಧ್ಯಾನ ಮಾಡುತ್ತಿದ್ದಂತಹ ಪ್ರದೇಶಗಳು ಕಾಣಸಿಗುತ್ತವೆ.

ಮಲೈ ಮಹದೇಶ್ವರ, ತಿಪ್ಪೇಸ್ವಾಮಿ ಮುಂತಾದವರಿಗೆ ಶ್ರೀ ದಿವ್ಯಲಿಂಗೇಶ್ವರ ದೇವಾಲಯದಲ್ಲಿ ದೀಕ್ಷೆ ಆಗಿದ್ದು ಎಂಬುದು ಇಲ್ಲಿನ ಅರ್ಚಕರಿಂದ ತಿಳಿದುಬಂದಿದೆ. ಇಲ್ಲಿ ಹಿಂದೆ ವಿದ್ಯಾಪೀಠಗಳು ಇದ್ದದ್ದಕ್ಕೆ ಇಲ್ಲಿನ ಗೋಸಲ ಮಠವೇ ಸಾಕ್ಷಿ. ಆದರೆ ಇಂದು ಇದೆಲ್ಲ ಹಾಳು ಬಿದ್ದಿರುವುದು ವಿಪರ್ಯಾಸದ ಸಂಗತಿ.

ಇತ್ತೀಚೆಗೆ ನಿರ್ಮಾಣವಾದಂತಹ ಮಾರಮ್ಮನ, ಕಾಳಮ್ಮನ ದೇವಾಲಯಗಳು ಇವೆ. ಆಧುನಿಕವಾಗಿ ನಿರ್ಮಾಣಗೊಂಡರೂ ಇಲ್ಲಿನ ಆಚಾರ ವಿಚಾರಗಳು, ಹಬ್ಬಹರಿದಿನಗಳು, ಉತ್ಸವಗಳು ತುಂಬಾನೇ ಆಕರ್ಷಣೀಯ, ದಂಡಿನ ಮಾರಮ್ಮ ಮತ್ತು ಮುಡುಕುಮಾರಮ್ಮನ ಎರಡು ವಿಗ್ರಹಗಳು ಮಾರಮ್ಮನ ದೇವಾಲಯದೊಳಗಿವೆ. ಮುಡುಕು ಮಾರಮ್ಮನೇ ಈ ಗ್ರಾಮದ ಗ್ರಾಮದೇವತೆ. ಇಲ್ಲಿಗೆ ಸುತ್ತಲಿನ ಗ್ರಾಮದ ಅನೇಕ ಭಕ್ತಾದಿಗಳು ಇಲ್ಲಿ ಬಂದು ಪೂಜೆ ಮಾಡಿಸುತ್ತಾರೆ. ಇದನ್ನು ನಾಯಕ ಜನಾಂಗದವರು ನಡೆಸಿಕೊಂಡು ಹೋಗುತ್ತಿದ್ದಾರೆ. ಕಾಳಮ್ಮ ದೇವಾಲಯ ಕೂಡ ಇಲ್ಲಿನ ಪ್ರಸಿದ್ಧ ದೇವಾಲಯಗಳಲ್ಲಿ ಒಂದು. ಇಲ್ಲೂ ಕೂಡ ಪೂಜೆ ಉತ್ಸವಗಳು ನಡೆಯುತ್ತಿರುತ್ತವೆ.

ಇಲ್ಲಿನ ಬಸವನ ಕಂಬ 15 ಅಡಿ ಎತ್ತರದ ಕಂಬದ ಮೇಲೆ ಬಸವನನ್ನು ಪ್ರತಿಷ್ಠಾಪಿಸಿದ್ದಾರೆ. ಮಳೆ ಬಾರದಿದ್ದ ಪಕ್ಷದಲ್ಲಿ ಇಲ್ಲಿ ಒಂದು ಹಬ್ಬಮಾಡುವ ಆಚರಣೆಯು ವಿಶಿಷ್ಠವಾದಂತಹದ್ದು. ಪಕ್ಕದಲ್ಲೇ ಇರುವ ಮಂಟೇಸ್ವಾಮಿ ದೇವಾಲಯವು ತನ್ನದೇ ವಿಶೇಷತೆಗಳನ್ನು ಹೊಂದಿರುವುದನ್ನು ಕಾಣುತ್ತೇವೆ. ಇಲ್ಲಿ ಪೂಜೆ, ಪುರಸ್ಕಾರಗಳು ನಡೆಯುತ್ತಿದ್ದು ಇಲ್ಲಿ ಕೊಂಡೋತ್ಸವ ಮತ್ತು ಹರಕೆ ತೀರಿಸುವಂತಹ ಆಚರಣೆಗಳು ಕಂಡುಬರುತ್ತದೆ.

ಇಲ್ಲಿನ ಮಸೀದಿ ಮುಸ್ಲಿಂ ಜನಾಂಗದವರ ಆಚಾರ ವಿಚಾರಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಇಲ್ಲಿ ಹಿಂದೂ ಮುಸ್ಲಿಂ ಜನಾಂಗವು ಸೌಹಾರ್ದಯುತವಾಗಿ ಬದುಕುತ್ತಿರುವುದು

ವಿಶೇಷ. ಹಬ್ಬಹರಿದಿನಗಳಲ್ಲಿ ಒಟ್ಟಿಗೆ ಸೇರಿ ಹಿಂದೂ–ಮುಸ್ಲಿಂ ಎಂಬ ಬೇಧವಿಲ್ಲದೇ ಆಚರಣೆಗಳು ಇಲ್ಲಿನ ಸೌಹಾರ್ದ ಬದುಕಿಗೆ ಕನ್ನಡಿಯಾಗಿದೆ.

ಇಲ್ಲಿ ಇರುವಂತಹ ಅನೇಕ ಕೆರೆಗಳು ಒಂದೊಂದು ಇತಿಹಾಸವನ್ನು ಹೇಳುತ್ತದೆ. ದೊಡ್ಡ ಕಲ್ಯಾಣಿಯಲ್ಲಿ ಸಿದ್ದಲಿಂಗಯತಿಗಳು ಸ್ನಾನ ಮಾಡುತ್ತಿದ್ದ ಪ್ರತೀತಿ ಇದೆ. ಇಂದು ಇದು ಹಾಳುಬಿದ್ದು, ದನಕರುಗಳಿಗೆ ಕುಡಿಯುವ ನೀರು ಸಂಗ್ರಹವಾಗಿದೆ. ಚಿಕ್ಕಕಲ್ಯಾಣಿಯಲ್ಲಿ ಶಿವನದೇವಾಲಯವಿದ್ದು ಇಲ್ಲಿ ಉತ್ಸವಗಳು ನಡೆಯುತ್ತದೆ.

ಮರಗದಕೆರೆ ಇಲ್ಲಿ ಹಿಂದೆ ಇದ್ದಿತು ಎನ್ನಲಾದ ಕೋಟೆಯ ಸುತ್ತ ಹರಡಿತ್ತು. ಕೆರೆಗೆ ಕರುಣೆ ಇಲ್ಲದೆ ಅನೇಕ ಅನಾಹುತಗಳನ್ನು ಮಾಡಿದ್ದರ ವಿಚಾರ ಇದರೊಳಗಿದೆ. ಮರಗದ ಕೆರೆಯಲ್ಲಿ ಇಂದು ನೀರಿಲ್ಲ ಅಂದಿನ ವೈಭವ ಇಂದು ಕಾಣಸಿಗದೆ ಎಲ್ಲವೂ ಭತ್ತಿ ಹೋಗಿದೆ.

ಇಲ್ಲಿನ ಜನಜೀವನ ಸಾಮಾನ್ಯವಾಗಿದ್ದು ಇಲ್ಲಿ ವ್ಯವಸಾಯವೇ ಪ್ರಮುಖ ಕಸುಬಾಗಿದೆ. ಇದರೊಂದಿಗೆ ಜನಜೀವನ ನಿತ್ಯ ಸಾಗುತ್ತಿದೆ. ಹಿಂದೆ ಇದು ವ್ಯಾಪಾರ ಕೇಂದ್ರವಾಗಿತ್ತು ಎಂಬುದನ್ನು ಮರೆಯುವಂತಿಲ್ಲ ಇಷ್ಟೇ ಅಲ್ಲದೆ ಮಡಿಕೆ ತಯಾರಿ ಮಾಡುವುದು, ರೇಷ್ಮೆ ನೂಲುವುದು, ಮರಗೆಲಸ, ಹಗ್ಗಹೊಸೆಯುವಿಕೆಯನ್ನು ಕೂಡ ಜನರು ತಮ್ಮ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಇದು ಚಿನ್ನದ ಆಭರಣಗಳ ತಯಾರಿಕೆಗೆ ಪ್ರಸಿಧ್ಧಿಯನ್ನು ಪಡೆದಿದೆ. ಅಷ್ಟೇ ಅಲ್ಲದೇ ಮೀನುಗಾರಿಕೆಯನ್ನು ನೆಚ್ಚಿಕೊಂಡಿದ್ದಾರೆ. ಅಡಿಕೆ, ವಿಳ್ಯದೆಲೆ ಮುಂತಾದ ವಾಣಿಜ್ಯ ಬೆಳೆಗಳನ್ನು ಕಾಣಬಹುದಾಗಿದೆ.

ಹರದನಹಳ್ಳಿ ಗ್ರಾಮದಲ್ಲಿ ಲಿಂಗಾಯಿತ, ವೈಷ್ಣವ ಮತ್ತು ನಾಯಕ ಜನಾಂಗವೇ ಬಹಳ ಪ್ರಮುಖವಾಗಿದ್ದು ಉಳಿದಂತೆ ಪರಿಶಿಷ್ಟ ಜಾತಿ, ಉಪಜಾತಿಗಳು ಅಷ್ಟಾಗಿಲ್ಲ. ಸುಮಾರು 4 ರಷ್ಟು ಜನಸಂಖ್ಯೆಯನ್ನು ಇದು ಹೊಂದಿದೆ. ಇಲ್ಲಿ ಇಂದು ವಿದ್ಯಾವಂತರ ಸಂಖ್ಯೆ ಹೆಚ್ಚಾಗಿರುವುದು ಕಂಡು ಬರುತ್ತದೆ. ಆದರೂ ಇಲ್ಲಿನ ಧಾರ್ಮಿಕ ಪದ್ದತಿಗಳು ಬದಲಾಗಿಲ್ಲ. ಸಂಪ್ರದಾಯದಂತೆ ಆಚರಣೆಗಳು ನೆಡೆದುಕೊಂಡು ಬರುತ್ತಿದೆ.

ಈ ಮೇಲೆ ತಿಳಿಸಲಾದ ಎಲ್ಲಾ ಅಂಶಗಳನ್ನು ನಾವು ಹರದನಹಳ್ಳಿಯ ಸಾಂಸ್ಕೃತಿಕ ಅಧ್ಯಯನ ಎಂಬ ಈ ಪ್ರಬಂಧದ ಒಳಗೆ ಅಧ್ಯಯನಕ್ಕೆ ಒಳಪಡಿಸಿದ್ದೇವೆ. ನಮಗನ್ನಿಸಿದ

ಸತ್ಯಗಳನ್ನು ಬೆನ್ನತ್ತಿ ಹೊರಟಾಗ ಅಲ್ಲಿನ ಅನೇಕ ಅಂಶಗಳು ಬೆಳಕಿಗೆ ಬಂದವು. ಜನಸಾಮಾನ್ಯರು, ಅರ್ಚಕರು, ಯಾತ್ರಿಗಳು, ಆಯೋಜಕರೆಲ್ಲರು ಈ ದೇವಾಲಯಗಳನ್ನು ಹಗಲಿರುಳು ಶ್ರಮವಹಿಸಿ ಪುನಶ್ಚೇತನ ಮಾಡುವ ಕಾಯಕ ನೆಡೆಯಬೇಕಿದೆ. ಇಂತಹ ದೇವಾಲಯಗಳು ಕರ್ನಾಟಕದಲ್ಲಿ ಅಪರೂಪವೇ. ಇದರೊಟ್ಟಿಗೆ ದೇವಾಲಯಗಳಿಗೆ ಸೂಕ್ತ ಭದ್ರತೆಗಳು ಇಲ್ಲ. ಇಲ್ಲಿನ ವಾಸ್ತುಶೈಲಿ ನಯನ ಮನೋಹರವಾಗಿದೆ.

ಒಂದು ಪ್ರದೇಶದ ಸಾಂಸ್ಕೃತಿಕ ಅಧ್ಯಯನ ಬಹಳ ಪ್ರಯಾಸದಿಂದಲೇ ಕೂಡಿರುವಂತಹದ್ದು. ಒಂದು ಪ್ರದೇಶದಲ್ಲಿನ ಸಂಸ್ಕೃತಿ ಅಲ್ಲಿನ ಮಾನವ ಬದುಕಿನ ಸಂಘರ್ಷಗಳು ಎಲ್ಲವನ್ನು ಅನಾವರಣಗೊಳಿಸುತ್ತದೆ. ಇಂತಹ ಪ್ರಯತ್ನ ಈ ಅಧ್ಯಯನದಿಂದ ಸ್ವಲ್ಪಮಟ್ಟಿಗೆ ನೆಡೆದಿದೆ ಎಂಬುದನ್ನು ಮುಂದಿನ ಅಧ್ಯಾಯಗಳನ್ನು ಸಾಕ್ಷ್ಯ ಇಟ್ಟು ತೋರಿಸುತ್ತಿದ್ದೇನೆ.

2. ಸಾಂಸ್ಕೃತಿಕ ಅಧ್ಯಯನ – ವ್ಯಾಪ್ತಿ, ಉದ್ದೇಶ, ಅಗತ್ಯತೆ.

ಸಾಂಸ್ಕೃತಿಕ ಅಧ್ಯಯನ: ಸಾಂಸ್ಕೃತಿಕ ಅಧ್ಯಯನ ಎಂದರೆ ಒಂದು ಪ್ರದೇಶದ ಜನಜೀವನ ಆರ್ಥಿಕವಾಗಿ ಧಾರ್ಮಿಕವಾಗಿ, ರಾಜಕೀಯವಾಗಿ ಎಲ್ಲಾ ರೀತಿಯಿಂದಲೂ ಅಧ್ಯಯನ ಮಾಡುವುದಂತಹುದು. ಸಂಪ್ರಾದಾಯ ಮತ್ತು ಸಂಸ್ಕೃತಿ ವಿಭಿನ್ನ ನಿಲುವುಗಳನ್ನು ತಾಳುತ್ತದೆ. ಸಂಪ್ರಾದಾಯ ನಾವು ಹಿಂದಿನಿಂದ ರೂಢಿಸಿಕೊಂಡು ಬಂದಿರುವ ಆಚಾರವಿಚಾರಗಳು ಕಟ್ಟುಪಾಡಿನಲ್ಲಿ ನಡೆಯುವಂತಹುದು, ಸಂಸ್ಕೃತಿ ಎಂದರೆ ಒಂದು ಜನಾಂಗ ತಲೆ ತಲೆ ಮಾರುಗಳಿಂದ ಅನೇಕ ಬದಲಾವಣೆಗಳನ್ನೊಳಗೊಂಡು ಅಂದರೆ ರಾಜಕೀಯವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ಬದಲಾವಣೆಗಳನ್ನು ಒಳಗೊಂಡು ನಿರಂತವಾಗಿ ತಮ್ಮ ಎಲ್ಲಾ ಅಂಶಗಳನ್ನು ರೂಪಿಸುತ್ತಾ, ಬೆಳೆಸುತ್ತಾ, ಬಂದಂತಹದ್ದು. ಸಂಪ್ರದಾಯ ಬದಲಾವಣೆಗೆ ಒಳಗಾಗದೇ ಇರುವುದು. ಸಂಸ್ಕೃತಿ ಎಂದರೆ ನಿರಂತರ ಬದಲಾವಣೆಗೆ ಒಳಗಾಗುವುದು ಸಂಪ್ರಾದಾಯ ಮಡಿವಂತಿಕೆಯಿಂದ ಬಂದಿದ್ದು. ಸಂಸ್ಕೃತಿ ಬದುಕುವ ಶೈಲಿಯಿಂದ ಬಂದಹುದು. ಸಂಪ್ರಾದಾಯ ಮನುಷ್ಯನ ಬೆಳವಣಿಗೆಯನ್ನು ಕುಂಠಿತಗೊಳಿಸುವುದು. ಸಂಸ್ಕೃತಿ ಮನುಷ್ಯನ ಉನ್ನತಿ ಕಲಿಸುವಂತಹದು ಅಥವಾ ಮನುಷ್ಯನ ಬದುಕನ್ನು ಉನ್ನತೀಕರಿಸುವಂತಹುದು. ಸಂಪ್ರದಾಯ ಪ್ರತಿ ಮನೆಗಳಲ್ಲೂ ಪ್ರತಿ ವ್ಯಕ್ತಿಗೂ ಸಾಮ್ಯವನ್ನು ಕಲ್ಪಿಸುತ್ತದೆ. ಆ ಧರ್ಮದ ಆ ಜಾತಿಯ ಆ ಕುಟುಂಬದ ತಲೆಮಾರುಗಳಿಂದ ಬಂದಂತಹ ಬಳುವಳಿ. ಸಂಸ್ಕೃತಿ ನಿಲುವೆ ಬೇರೆ ನಾವು ಬದುಕಿಕೊಂಡು ಬಂದಂತಹ ರೀತಿ ನೀತಿಗಳು ಮಾನವ ಜನಾಂಗದ ಬದಲಾವಣೆಗಳು, ಮಾನವನ ಜೀವನದ ಎಲ್ಲಾ ಅಂಶಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆ ಗೋಚರಿಸುತ್ತದೆ. ಸಂಸ್ಕೃತಿ ಒಂದು, ಒಬ್ಬನ, ಒಂದು ಸಮಾಜದ ಒಂದು ಕುಟುಂಬದ ಸ್ವತ್ತಲ್ಲ. ಸಂಪ್ರದಾಯದಂತೆ ಸಂಸ್ಕೃತಿಯ ಅನಿವಾರ್ಯವನ್ನು ಸಾಧಿಸುವುದಿಲ್ಲ. ನಾವು ಸಂಪ್ರದಾಯಗಳನ್ನು ದಿಕ್ಕರಿಸುವುದು ಕಷ್ಟ. ಹಾಗೇ ಸಂಸ್ಕೃತಿಯನ್ನು ಕೂಡ ಎರಡೂ ಇತಿಹಾಸವೇ, ಸಂಸ್ಕೃತಿ ಇರುವಿಕೆಯನ್ನು ಸ್ಪಷ್ಟೀಕರಿಸುತ್ತದೆ. ಸಂಪ್ರದಾಯ ಅದನ್ನು ಏರುತ್ತದೆ.

ಒಂದು ಪ್ರದೇಶದ ಜನಜೀವನ, ಜನಾಂಗದ ಇತಿಹಾಸ, ಜನರ ಬದುಕಿನ ಸಂಘರ್ಷಗಳು, ರೀತಿನೀತಿಗಳು, ಆಚಾರವಿಚಾರಗಳು,ಧಾರ್ಮಿಕ, ಆರ್ಥಿಕ, ರಾಜಕೀಯ ವ್ಯವಸ್ಥೆಗಳು, ಎಲ್ಲವನ್ನು ಒಟ್ಟಾರೆಯಾಗಿ ಸಂಸ್ಕೃತಿ ಎಂದು ಕರೆಯುತ್ತೇವೆ.

ಒಂದು ಪ್ರದೇಶದ ಜನಜೀವನ ಎಂದರೆ ಅವರ ಆಹಾರಪದ್ದತಿ, ವಸತಿ ಸೌಕರ್ಯಗಳು, ವೇಷಭೂಷಣಗಳು, ಕಸುಬು, ಎಲ್ಲೂವೂ, ಪ್ರಮುಖ ಸಾಹಿತ್ಯ, ಕಲೆ, ವಾಸ್ತುಶಿಲ್ಪ, ಮುಂತಾದ ಎಲ್ಲಾ ವಿಚಾರಗಳು ಸಂಸ್ಕೃತಿಯ ಒಳಗೆ ಸೇರುವಂತಹುದು. ಸಂಪ್ರದಾಯ ಕೂಡ ಸಂಸ್ಕೃತಿಯ ಒಳಗಡೆ ಅಡಕವಾಗಿರುವಂತಹುದು.

ಈ ಎಲ್ಲಾ ವಿಚಾರಗಳನ್ನು ಅಧ್ಯಯನಕ್ಕೆ ಒಳಪಡಿಸುವುದೇ ಸಾಂಸ್ಕೃತಿಕ ಅಧ್ಯಯನ ಎಂದು ಕರೆಸಿಕೊಳ್ಳುತ್ತದೆ.

ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿ:

ಸಂಸ್ಕೃತಿ ಎಷ್ಟು ವಿಶಾಲವೋ ಸಾಂಸ್ಕೃತಿಕ ಅಧ್ಯಯನವು ಅಷ್ಟೇ ವಿಶಾಲವಾದುದು. ಒಂದು ಸಂಸ್ಕೃತಿ ಎಂದರೆ ಭಿನ್ನಕಾಲ ದೇಶಗಳಲ್ಲಿ ಭಿನ್ನ ವ್ಯವಸ್ಥೆಗಳನ್ನು ಹೊಂದಿ ವಿಭಿನ್ನ ನಿಲುವುಗಳನ್ನು ತಳೆದಿರುತ್ತದೆ. ಪ್ರದೇಶದಿಂದ ಪ್ರದೇಶಕ್ಕೆ ಆ ಸಂಸ್ಕೃತಿ ಬೇರೆ ಬೇರೆಯಾಗಿದ್ದು ಜನಜೀವನ ವ್ಯವಸ್ಥೆ ಭಿನ್ನವಾಗಿರುವುದನ್ನು ಕಾಣುತ್ತೇವೆ. ಒಂದು ಜನಾಂಗದಿಂದ ಮತ್ತೊಂದು ಜನಾಂಗ ಅವರ ವಿಭಿನ್ನ ಸಂಸ್ಕೃತಿಗಳು ಇವೆಲ್ಲವನ್ನು ತಿಳಿಸುವುದು ಸಾಂಸ್ಕೃತಿಕ ಅಧ್ಯಯನವೇ ಸಾಂಸ್ಕೃತಿಕ ಅಧ್ಯಯನದಲ್ಲಿನ ವ್ಯಾಪ್ತಿ. ಒಬ್ಬ ವ್ಯಕ್ತಿ ಮಾತಿನಿಂದ ಹಿಡಿದು ಒಂದು ಜನಾಂಗದ, ಒಂದು ದೇಶದ ಎಲ್ಲೆಯನ್ನು ಮೀರುವಂತಹುದು.

ಒಂದು ಜನಾಂಗದ ಅಥವಾ ಒಂದು ದೇಶದ ಭಾಷೆ, ಅಲ್ಲಿನ ಜನರ ಬದುಕಿನ ವ್ಯವಸ್ಥೆಗಳು, ಆಹಾರ ವಿಚಾರಗಳು, ವಸತಿ ಸೌಕರ್ಯಗಳು, ರೀತಿನೀತಿಗಳು, ದಿರುಸು (ಬಟ್ಟೆ ಬರೆ), ಎಲ್ಲವನ್ನು ಸಾಂಸ್ಕೃತಿಕ ಅಧ್ಯಯನ ವ್ಯಾಪ್ತಿ ಒಳಗೊಂಡಿದೆ. ಅವರ ಧಾರ್ಮಿಕ ಜೀವನ, ಅವರ ಆರ್ಥಿಕ ಜೀವನವಾಗಿರಬಹುದು, ರಾಜಕಾರಣ ಜೀವನವಾಗಿರಬಹುದು ಅಲ್ಲಿನ ಹಬ್ಬ, ಹರಿದಿನಗಳು, ಮನುಷ್ಯನ ನಡೆನುಡಿಗಳಿಗೂ, ಜನಾಂಗದ ವೈಷಮ್ಯಗಳು, ಜನಾಂಗದ ಬ್ರಾತೃತ್ವ, ಸ್ನೇಹಪರತೆಗಳು, ರೀತಿ–ರಿವಾಜುಗಳು, ಕಸುಬುಗಳು, ಒಟ್ಟಾರೆಯಾಗಿ ಜನಜೀವನ

ಎಲ್ಲವನ್ನು ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿ ಆವರಿಸಿ ಬಿಟ್ಟಿದೆ. ಮನುಷ್ಯನ ಉಗಮ ಇಂದು ನೆನ್ನೆಯದಲ್ಲ ಶತಶತಮಾನಗಳಿಂದ ಅವನು ಮಾಡಿಕೊಂಡು ಬಂದಂತಹ, ನಡೆಸಿಕೊಂಡು ಬಂದಂತಹ, ಆಚಾರ ವಿಚಾರಗಳು, ಬದುಕಿನ ತಂತ್ರಗಳನ್ನು ಕೂಡ ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿ ಒಳಗೊಂಡಿದೆ.

ಸಾಂಸ್ಕೃತಿಕ ಅಧ್ಯಯನದ ಉದ್ದೇಶ:

ಒಂದು ಪ್ರದೇಶದ ಆಚಾರ ವಿಚಾರಗಳು, ಅಲ್ಲಿನ ಧರ್ಮಗಳು, ಆಡಳಿತಾತ್ಮಕ, ರಾಜಕೀಯ ವಿಚಾರಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ಸ್ವರೂಪಗಳನ್ನು ಪಡೆದಿರುತ್ತವೆ. ಇವುಗಳನ್ನು ತಿಳಿಯುವುದು ಸಾಂಸ್ಕೃತಿಕ ಅಧ್ಯಯನದ ಉದ್ದೇಶವಾಗಿರುತ್ತದೆ.

ಭಿನ್ನಕಾಲ, ದೇಶಗಳಲ್ಲಿ ಅಲ್ಲಿನ ಸಂಸ್ಕೃತಿಗಳು ಬೇಕಾಗಿರುತ್ತದೆ. ಅವುಗಳ ಅಧ್ಯಯನವೇ ನಮ್ಮ ಉದ್ದೇಶವಾಗಿದೆ.

ಮನುಷ್ಯನ ಉಗಮದೊಂದಿಗೆ ಅವನ ಸಂಸ್ಕೃತಿಯು ಹುಟ್ಟುತ್ತದೆ. ಅಂತಹ ಸಂಸ್ಕೃತಿ, ಮನುಷ್ಯ ಬೆಳೆದಂತೆ ತಾನು ಬೆಳದು ನಂತರ ಮನುಷ್ಯನ ಎಲ್ಲೆಯನ್ನೇ ಮೀರಿ ಬೆಳೆದಂತಹ ಸಂಸ್ಕೃತಿಯು ಅಧ್ಯಯನದ ಉದ್ದೇಶವಾಗಿದೆ.

ಸಾಂಸ್ಕೃತಿಕ ಅಧ್ಯಯನದ ಅಗತ್ಯತೆಗಳು:

ಇಂದು ನಾವು 21ನೇ ಶತಮಾನದ ಸಂದರ್ಭದಲ್ಲಿ ನಮ್ಮ ಬದುಕುಗಳನ್ನು ಸಂಕೀರ್ಣತೆಯ ಕಡೆ ತೆಗೆದುಕೊಂಡು ಹೋಗಿದ್ದೇವೆ. ಈ ಹಿನ್ನೆಲೆಯಲ್ಲಿ ನಮ್ಮ ಎಲ್ಲಾ ಸಂಸ್ಕೃತಿಗಳನ್ನು ಅಧ್ಯಯನ ಮಾಡುವ ಅಗತ್ಯತೆ ತುಂಬಾನೆ ಇದೆ.

ಒಂದು ಜನ ಸಮುದಾಯದ, ದೇಶದ, ಇತರ ಎಲ್ಲಾ ಅಂಶಗಳು ಸಾಂಸ್ಕೃತಿಕ ಅಧ್ಯಯನಕ್ಕೆ ಒಳಪಡುತ್ತದೆ. ನಾವು ಇಂದು ಇದೆಲ್ಲಾವನ್ನು ಅರ್ಥೈಸಿಕೊಳ್ಳಲು ಆ ಎಲ್ಲಾ ಸಂಸ್ಕೃತಿಯನ್ನು ಅಧ್ಯಯನಕ್ಕೆ ಒಳಪಡಿಸಲೇಬೇಕಾಗಿದೆ. ಭಾರತ ಒಂದು ಜ್ಯಾತ್ಯಾತೀತ ರಾಷ್ಟ್ರ ಇಲ್ಲಿ ನೂರಾರು ಸಂಸ್ಕೃತಿಗಳು ಬೆಳೆದು ನಿಂತಿವೆ. ಸಾವಿರಾರು ಸಂಪ್ರಾದಾಯಗಳು ಆಚರಣೆಯಿದೆ. ಮಾನವ ಬದುಕಿನ ವರ್ಗ ಸಂಘರ್ಷಗಳು ತಲೆ ಎತ್ತಿನಿಂತಿವೆ. ಪ್ರತಿಯೊಬ್ಬರ

ಬದುಕಿನ ಹಿನ್ನೋಟ ಮುನ್ನೋಟಗಳ ಪರಿಚಯವಾಗಬೇಕಿದೆ. ಇವೆಲ್ಲ ಅರ್ಥೈಸಲು ಸಾಂಸ್ಕೃತಿಕ ಅಧ್ಯಯನದ ಅಗತ್ಯ ಇದೆ.

1947ಕ್ಕೂ ಹಿಂದಿನ ಭಾರತ ಮತ್ತು ಈಗಿನ ಬಾರತ ಜನಜೀವನ ಭಿನ್ನವಾಗಿರುವುದನ್ನು ಕಾಣಬಹುದು. ಕಾಲಘಟ್ಟಗಳಲ್ಲಿ ಹೂತುಹೋದ ಎಷ್ಟೋ ಸಂಸ್ಕೃತಿಯ ಅವಶೇಷಗಳನ್ನು ತೆಗೆಯಲು ಸಾಂಸ್ಕೃತಿಕ ಅಧ್ಯಯನ ತುಂಬಾ ಅಗತ್ಯವಾಗಿದೆ. ಪ್ರತಿ ಸಂದರ್ಭದಲ್ಲೂ ನಾವು ನಮ್ಮ ಸಂಸ್ಕೃತಿಯನ್ನು ಆರಾಧಿಸುವ ಕೆಲಸ ನಡೆಯುತ್ತಿದ್ದು ನಮ್ಮ ಹಿಂದಿನ ಸಂಸ್ಕೃತಿ ಇಂದಿನ ಜೀವನ ವ್ಯವಸ್ಥೆಗಳೆಲ್ಲವನ್ನು ತಿಳಿಯಲು ಸಾಂಸ್ಕೃತಿಕ ಅಧ್ಯಯನ ಅತ್ಯಗತ್ಯ.

ಹರದನಹಳ್ಳಿಯ ಸಾಂಸ್ಕೃತಿಕ ಅಧ್ಯಯನ:

ಹರದನಹಳ್ಳಿ ಗ್ರಾಮದ ಜನಜೀವನ ಆರ್ಥಿಕ, ಧಾರ್ಮಿಕ, ರಾಜಕೀಯ ವಿಚಾರಗಳು, ಕಾಲಗಟ್ಟದಲ್ಲಿ ಅಡಗಿಕೊಂಡ ಆಚಾರ ವಿಚಾರಗಳನ್ನು ಹೊರಗೆ ತಂದು ತೋರಿಸುವ ಪ್ರಯತ್ನವೇ ನಮ್ಮ ಹರದನಹಳ್ಳಿ ಸಾಂಸ್ಕೃತಿಕ ಅಧ್ಯಯನವಾಗಿದೆ.

ಹರದನಹಳ್ಳಿ ಗ್ರಾಮವು ಚಾಮರಾಜನಗರ ಜಿಲ್ಲೆಗೆ ಸೇರಿದ ಒಂದು ಗ್ರಾಮ. ಇಲ್ಲಿನ ಸಂಸ್ಕೃತಿ ಚಾಮರಾಜನಗರ ಸಂಸ್ಕೃತಿಯನ್ನೇ ಹೆಚ್ಚು ಪಾಲು ಹೋಲುವಂತಹದ್ದು. ಜಿಲ್ಲೆಯ ಸುತ್ತಲಿನ ಗ್ರಾಮಗಳಂತೆ ಇಲ್ಲಿನ ಜನಜೀವನ, ಆರ್ಥಿಕ, ಧಾರ್ಮಿಕ, ರಾಜಕೀಯ ವಿಚಾರಗಳು ಸರ್ವೇಸಾಮಾನ್ಯ, ಇಲ್ಲಿ ಬೆಳೆದುನಿಂತಹ ಸಂಸ್ಕೃತಿ ಬೇರೆ ಗ್ರಾಮಗಳಂತೆ ಇದ್ದರು ಸ್ವಲ್ಪ ಮಟ್ಟಿಗೆ ಭಿನ್ನತೆ ಕಾಣುತ್ತದೆ.

ಧಾರ್ಮಿಕವಾಗಿ ಈ ಗ್ರಾಮದಲ್ಲಿ ನಡೆದ ಶೈವ ಮತ್ತು ವೈಷ್ಣವರ ಸಂಘರ್ಷಗಳು ಬೇರೆ ಗ್ರಾಮಗಳಲ್ಲಿ ಅಷ್ಟಾಗಿ ನಡೆಯಲಿಲ್ಲ. ಇಲ್ಲಿ ನಿರ್ಮಾಣಗೊಂಡಂತಹ ದಿವ್ಯಲಿಂಗೇಶ್ವರ ದೇವಾಲಯವೇ ಇಲ್ಲಿನ ಅನೇಕ ಸಾಂಸ್ಕೃತಿಕ ಅಂಶಗಳನ್ನು ಕಟ್ಟಿಕೊಟ್ಟಿತು ಎಂದರೆ ತಪ್ಪಾಗಲಾರದು.

ಹರದನಹಳ್ಳಿಯಲ್ಲೂ ಕೂಡ ವಿಭಿನ್ನ ರೀತಿಯ ಆಚಾರ ವಿಚಾರಗಳು ಬೆಳಕಿಗೆ ಬರುತ್ತವೆ. ಒಂದು ಸಂಸ್ಕೃತಿ ಎಂದರೆ ಪ್ರದೇಶದ ಎಲ್ಲಾ ಅಂಶಗಳು ಒಳಗೊಳ್ಳುತ್ತದೆ. ಹರದನಹಳ್ಳಿಯು ಸಹ ಒಂದು ಸಂಸ್ಕೃತಿಯನ್ನು ಕಟ್ಟಿಕೊಟ್ಟಿರುವುದರಿಂದಾಗಿ ಇದರ ಬಗ್ಗೆ ಸಾಂಸ್ಕೃತಿಕ ಅಧ್ಯಯನ ಮಾಡಿಕೊಳ್ಳಲಾಗಿದೆ.

ಸಂಸ್ಕೃತಿ ಎಂದರೆ ಏಕಮುಖದ ತೀರ್ಮಾನಗಳಲ್ಲ. ವಿಭಿನ್ನ ಮುಖಗಳನ್ನು ತೆರೆದಿಡುವ ಪ್ರಯತ್ನ ಅದು. ಪ್ರತಿ ಕಾಲಘಟ್ಟದಲ್ಲಿ ರೂಢಿಸಿಕೊಂಡು ಬಂದಂತಹ ಆಚಾರವಿಚಾರಗಳು ತುಂಬಿ ಈ ಗ್ರಾಮದೊಳಗೆ ಹರಿಡಿಕೊಂಡಿದೆ.

ಹರದನಹಳ್ಳಿ ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿ:

ಹರದನಹಳ್ಳಿಯು ಸುಮಾರು 13ನೇ ಶತಮಾನದಲ್ಲಿ ಹೆಚ್ಚಿನ ಪ್ರವರ್ಧಮಾನವನ್ನು ಪಡೆದುಕೊಂಡಿತುತ. ಅದು ಇಂದಿನವರೆಗೂ ತನ್ನದೇ ಆದ ವಿಶಿಷ್ಟ ನಿಲುವಿನಲ್ಲಿ ಕಂಡುಬಂದಿದೆ. ಅಧ್ಯಯನ ವ್ಯಾಪ್ತಿ ತುಂಬಾ ವಿಶಾಲವಾದದ್ದು, 13ನೇ ಶತಮಾನದಲ್ಲಿ ಶ್ರೀ ದಿವ್ಯಲಿಂಗೇಶ್ವರ ದೇವಾಲಯದ ನಿರ್ಮಾಣವನ್ನು, ಆನಂತರದ ಗೋಪಾಲಕೃಷ್ಣ ದೇವಾಲಯದ ನಿರ್ಮಾಣವನ್ನು ಒಳಗೊಂಡಂತೆ ಇಂದಿನವರೆಗಿನ ಎಲ್ಲಾ ಅಂಶಗಳಲ್ಲೂ ತನ್ನ ವ್ಯಾಪ್ತಿಯನ್ನು ಪಸರಿಸಿದೆ.

ಶ್ರೀ ದಿವ್ಯಲಿಂಗೇಶ್ವರ ದೇವಾಲಯವು ಹರದನಹಳ್ಳಿಯ ಪ್ರಸಿದ್ದ ದೇವಾಲಯ, ಈ ದೇವಾಲಯವು ಅನೇಕ ವಿಶಿಷ್ಟ ಅಂಶಗಳಿಂದ ಕೂಡಿದೆ. ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ಈ ದೇವಾಲಯ ನಕ್ಷತ್ರಾಕಾರದ ಜಗಲಿಯ ಮೇಲೆ ನಿರ್ಮಾಣ ಮಾಡಲಾಗಿದ್ದು, ಅನೇಕ ಕಂಬಗಳನ್ನು ಕೆತ್ತಲಾಗಿದೆ. ಪ್ರತಿ ಕಂಬದಲ್ಲೂ ಅನೇಕ ಚಿತ್ರಗಳನ್ನು ಕೆತ್ತಲಾಗಿದ್ದು ಒಂದೊಂದು ಇತಿಹಾಸವನ್ನು ಹೇಳುತ್ತದೆ. ಅದ್ಭುತವಾದಂತಹ ನಂದಿ ವಿಗ್ರಹ ಸ್ವಯಂ ಉದ್ಭವನಾದ ದಿವ್ಯಲಿಂಗೇಶ್ವರ ಅಧ್ಯಯನ ವ್ಯಾಪ್ತಿಗೆ ಬರುತ್ತದೆ.

ಶ್ರೀ ಗೋಪಾಲ ಸ್ವಾಮಿ ದೇವಾಲಯದಲ್ಲಿನ ವಿಚಾರ ಕುತೂಹಲಕರವಾದ್ದು, ವೀರಶೈವ ಮತ್ತು ವೈಷ್ಣವರ ವರ್ಗ ಸಂಘರ್ಷದಿಂದಾಗಿ ನಿರ್ಮಾಣಗೊಂಡಂತಹ ದೇವಾಲಯವನ್ನು ಕೂಡ ನಮ್ಮ ಅಧ್ಯಯನ ವ್ಯಾಪಿಸಿದೆ. ಪ್ರತಿ ಬದುಕಿನ ಎಲ್ಲಾ ಅಂಶಗಳನ್ನು ಇದರೊಳಗೆ ಅಡಗಿಸಿಡುವ ಪ್ರಯತ್ನ ನಮ್ಮ ಅಧ್ಯಯನದ್ದು.

ಹರದನಹಳ್ಳಿಯ ಸಾಂಸ್ಕೃತಿಕ ಅಧ್ಯಯನದ ಅಗತ್ಯತೆ:

ಹರದನಹಳ್ಳಿಯ ಬಗೆಗಿನ ಅಲ್ಲಿನ ಸಂಸ್ಕೃತಿಯ ಬಗ್ಗೆ ಅಧ್ಯಯನ ಮಾಡುವ ಅಗತ್ಯ ಇತ್ತೆ ಎಂಬ ಅಂಶವನ್ನು ಅವಲೋಕಿಸಿದರೆ, ಹೌದೆನಿಸುತ್ತದೆ. ಇಷ್ಟು ವಿಶಾಲ ವ್ಯಾಪ್ತಿಯನ್ನು ಹೊಂದಿರುವಂತಹ ಈ ಅಧ್ಯಯನವು ನಿಜವಾಗಿಯೂ ಅಗತ್ಯ ಎಂದೆನಿಸುತ್ತದೆ.

ಕಾಲಗರ್ಭದಲ್ಲಿ ಹೂತುಹೋದಂತಹ ಎಷ್ಟೋ ವಿಷಯಗಳನ್ನು ಹೊರತೆಗೆಯುವ ಪ್ರಯತ್ನ ಮಾಡಬೇಕಿದೆ. 13ನೇ ಶತಮಾನದಿಂದ ನಡೆದುಕೊಂಡ ಬಂದ ದೇವಾಲಯದ ಇತಿಹಾಸ, ವರ್ಗ ವೈಷಮ್ಯಗಳು ದೇವರ ಮಹಿಮೆಗಳು, ಹಬ್ಬಹರಿದಿನಗಳು, ಜಾತ್ರೆಗಳು, ಉತ್ಸವಗಳು, ಇವುಗಳ ಮೇಲೆ ಬೆಳಕು ಚಲ್ಲುವ ಕೆಲಸ ಮಾಡಬೇಕಿದೆ.

ತೋಂಟದ ಸಿದ್ದಲಿಂಗ ಯತಿಗಳು ಈ ಗ್ರಾಮದಲ್ಲೇ ಜನಿಸಿದರು ಎಂಬ ಅಂಶ ಕುತೂಹಲಕರ ವಾದಂತಹುದು, ಮಹದೇಶ್ವರ, ತಿಪ್ಪೇಸ್ವಾಮಿಗಳಿಗೆ ಇಲ್ಲಿ ದೀಕ್ಷೆಯಾದ ವಿಚಾರಗಳ ಬಗ್ಗೆ ಹೆಚ್ಚಿನ ಬೆಳಕು ಹರಿಸಬೇಕಾದರೆ ಇಂತಹ ಅಧ್ಯಯನಗಳು ನಡೆಯುತ್ತಿರಬೇಕಾಗುತ್ತದೆ.

ಹರದನಹಳ್ಳಿಯಲ್ಲಿನ ಇತಿಹಾಸ ಚಾಮರಾಜನಗರಕ್ಕಿಂತ ಭಿನ್ನವಾಗಿದೆ. ಇಲ್ಲಿನ ಆಡಳಿತವನ್ನು ನೋಡಿಕೊಳ್ಳುತ್ತಿದ್ದಂತಹ ವ್ಯಕ್ತಿ ಮಾದವದಣ್ಣಾಯಕ ಎಂಬುವನು. ಇವನು ಮೈಸೂರು ಅರಸರ ಆಡಳಿತ ಸಂದರ್ಭದಲ್ಲಿ ಮೈಸೂರು ಅರಸರಿಂದಲೇ ನಿಯೋಜಿಸಲ್ಪಡುತ್ತದೆ. ಮೈಸೂರಿನ ಅರಸರಿಗೆ ಈ ಪ್ರದೇಶ ಸೇರಿತ್ತು ಎಂಬುದ್ದನ್ನು ಕಾಣುತ್ತೇವೆ. ಇಲ್ಲಿಗೆ ಟಿಪ್ಪು ಸುಲ್ತಾನ್ ದಾಳಿ ಮಾಡಿದ್ದ ಎಂಬುದನ್ನು ಇಲ್ಲಿನ ಇತಿಹಾಸ ತಿಳಿಸಿಕೊಡುತ್ತದೆ. ಇಂತಹದರ ಅರಿವು ಜನ ಸಾಮಾನ್ಯರಿಗೆ ಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಹರದನಹಳ್ಳಿಯ ಸಾಂಸ್ಕೃತಿಕ ಅಧ್ಯಯನ ನೆಡೆಯಬೇಕಿದೆ.

[illegible]

[illegible]

[illegible]

[illegible]

[illegible]

3–ಹರದನಹಳ್ಳಿಯ ಇತಿಹಾಸ

ಮಾನವನ ಸಾಧನೆಗಳು, ಸೋಲುಗಳು, ಆವಿಷ್ಕಾರಗಳು, ರಚನೆಗಳು, ಕಲೆಗಳು, ಯುದ್ಧಗಳು, ರಾಜಕೀಯ, ಧಾರ್ಮಿಕ ತತ್ವಗಳು ಆತನ ಆಸೆ ಮತ್ತು ಆಸೆ ಬೀತಿಗಳ ಕಥೆಯೇ ಇತಿಹಾಸ.

ಎಂಬ ಹೇಸ್ ಮತ್ತು ಮೂನ್‌ರವರ ವ್ಯಾಖ್ಯಾನ ಒಂದು ಪ್ರದೇಶದ ಇತಿಹಾಸವನ್ನು ತಿಳಿಯುವಲ್ಲಿ ಮಹತ್ವದ್ದಾಗಿದೆ. ಮಾನವ ತನ್ನ ದಿಗ್ವಿಜಯ, ಸೋಲು, ಗೆಲುವು, ಸಂತೋಷ, ದುಃಖಗಳು, ರಾಜಾಢಳಿತ, ಆರ್ಥಿಕ ಸುಸ್ಥಿತಿ, ರಾಜಕೀಯ ಸ್ಥಿತಿಗಳು, ಧಾರ್ಮಿಕ ಆಚರಣೆಗಳು, ಆವಿಷ್ಕಾರಗಳು ಇವೆಲ್ಲವನ್ನು ನಮೂದಿಸುವ ಆಕಾಂಕ್ಷೆ ಮಾನವನಲ್ಲಿ ಸಹಜವಾಗಿ ಬೆಳೆದುಕೊಂಡು ಬಂದಿದೆ. ಕಲೆ ವಾಸ್ತುಶಿಲ್ಪಗಳ ಮೂಲಕ ಅವನ ಅಭಿರುಚಿಯನ್ನು ಗುಡಿಗೋಪುರಗಳ ಮೂಲಕ ಆತನ ಧಾರ್ಮಿಕ ಶ್ರದ್ದೆಯನ್ನು ಸಾಧನೆಗಾಗಿ ಮತ್ತು ರಾಜಕೀಯ ಆಡಳಿತವನ್ನು ವಿವರಗಳನ್ನು ಶಾಸನಗಳ ಮೂಲಕವು ಆತನ ಅಭಿರುಚಿಯನ್ನು ಗುಡಿಗೋಪುರಗಳ ಮೂಲಕ ಅತನ ಧಾರ್ಮಿಕ ಶ್ರದ್ದೆಯನ್ನು ಸಾಧನೆಗಳನ್ನು ಮತ್ತು ರಾಜಕೀಯ ಆಡಳಿತದ ವಿವರಗಳನ್ನು ಶಾಸನಗಳ ಮೂಲಕವು ಮತ್ತು ಅವನ ದಿಗ್ವಿಜಯಗಳನ್ನು ಆತನಿಗೆ ಇಷ್ಟವಾದ ಮಾದ್ಯಮದ ಮೂಲಕ ವ್ಯಕ್ತಪಡಿಸುತ್ತಿದ್ದನು. ಅಂದ ಮಾತ್ರಕ್ಕೆ ಸಾಮಾನ್ಯನೊಬ್ಬ ಈ ಕಾರ್ಯಗಳನ್ನು ಮಾಡಲು ಅಸಾಧ್ಯವಾಗಿತ್ತು. ರಾಜಮಹಾರಾಜರು ಈ ಕಾರ್ಯವನ್ನು ನಡೆಸಿಕೊಡುತ್ತಿದ್ದರು. ಇದಲ್ಲದೆ ರಾಜ್ಯ ಸಮೃದ್ದಿಯಲ್ಲಿದ್ದಾಗ ಚಿನ್ನದ ನಾಣ್ಯಗಳು, ಬೆಳ್ಳಿಯ ನಾಣ್ಯಗಳನ್ನು ಟಂಕಿಸುತ್ತಿದ್ದರು. ರಾಜದ್ಯ ದುಸ್ತಿತಿಯಲ್ಲಿದ್ದಾಗ ಸೀಸದ ನಾಣ್ಯಗಳನ್ನು ಟಂಕಿಸಿರುವಂತಹ ಉದಾಹರಣೆಗಳು ನಮ್ಮ ಇತಿಹಾಸದಲ್ಲಿದೆ. ಇವುಗಳನ್ನಿಟ್ಟುಕೊಂಡು ನಾವು ಒಂದು ಪ್ರದೇಶದ, ಒಬ್ಬ ವ್ಯಕ್ತಿಯ ಒಂದು ಸಮಾಜದ, ಒಂದು ಜನಾಂಗದ ಇತಿಹಾಸವನ್ನು ಅರ್ಥೈಸಬಹುದು. ಇತಿಹಾಸದ ನಿರ್ಮಾಣದಲ್ಲಿ ಸಾಹಿತ್ಯ ಕೃತಿಗಳು, ಕೈಪಿಯತ್ತುಗಳು, ಜಾನಪದ, ಸಾಹಿತ್ಯ, ಮಾಸ್ತಿಗಲ್ಲು, ವೀರಗಲ್ಲುಗಳು ಕೂಡ ಪ್ರಮುಖ ಪಾತ್ರವನ್ನು ವಹಿಸುತ್ತದೆ ಹಾಗೇ ಮೇಲೆ ನೋಡಿದ ಅಂಶಗಳ ಮೂಲಕ ಇತಿಹಾಸವನ್ನು ರಚಿಸಬಹುದು. ಸದ್ಯ ಚಾಮರಾಜನಗರದ

[illegible]

ಹರದನಹಳ್ಳಿಯ ಸಾಂಸ್ಕೃತಿಕ ಇತಿಹಾಸವನ್ನು ಅಧ್ಯಯನ ಮಾಡಲು ಇಂತಹ ವಿಷಯಗಳು ಹೆಚ್ಚಿನ ಪಾತ್ರವನ್ನು ವಹಿಸುತ್ತದೆ.

ಕ್ರಿ.ಶ. 1316ರಲ್ಲಿ ಮಾದವ ದಣ್ಣಾಯಕ ಇಂದು ಪಾಳುಬಿದ್ದ ಶ್ರೀ ದಿವ್ಯಲಿಂಗೇಶ್ವರ ದೇವಾಲಯವನ್ನು ನಿರ್ಮಿಸಿದ್ದನು ಎಂಬುದನ್ನು ಇಲ್ಲಿನ ಶಾಸನಗಳನ್ನು ಅಧ್ಯಯನ ಮಾಡುವುದರ ಮೂಲಕ ತಿಳಿಯಬಹುದು. ಮಾದನ ದಣ್ಣಾಯಕನ ಕೇಂದ್ರಸ್ಥಳ ಹೆಡತಲೆ ಆ ಕಾರಣದಿಂದಾಗಿ ಮಾರಗೌಡ ಎಂಬಾತನಿಗೆ ಶ್ರೀ ದಿವ್ಯಲಿಂಗೇಶ್ವರ ದೇವಾಲಯದ ನಿರ್ಮಾಣದ ಕಾರ್ಯವನ್ನು ವಹಿಸಿಕೊಟ್ಟಿದ್ದನು ಎಂಬುದು ಕೂಡ ಶಾಸನದಿಂದ ತಿಳಿದುಬರುತ್ತದೆ. ಅಂದರೆ ಕ್ರಿ.ಶ ಹನ್ನೆರಡು ಮತ್ತು ಹದಿಮೂರನೇ ಶತಮಾನದಲ್ಲಿ ಹರದನಹಳ್ಳಿ ಗ್ರಾಮ ಪ್ರಸಿದ್ಧಿಯಾಗಿತ್ತು ಎಂದು ತಿಳಿದುಬರುತ್ತದೆ. ಅಂದರೆ ಹೊಯ್ಸಳರ ಕಾಲದಲ್ಲಿ ಹೊಯ್ಸಳ ರಾಜ್ಯ ಚಾಮರಾಜನಗರದ ಹರದನಹಳ್ಳಿಯವರೆಗೆ ಹಬ್ಬಿತೆಂದು ಸ್ಪಷ್ಟವಾಗುತ್ತದೆ.

ಹರದನಹಳ್ಳಿ ಹಿಂದೊಮ್ಮ ಹೊಯ್ಸಳರ ಉಪರಾಜಧಾನಿಯಾಗಿತ್ತು ಎಂಬುದಕ್ಕೆ ಇಲ್ಲಿನ ಜನರ ಮಾತುಗಳಿಂದ ತಿಳಿಯುತ್ತದೆ. ವಿಜಯನಗರ ಅರಸರು ಮತ್ತು ಮೈಸೂರು ರಾಜರ ಆಡಳಿತಕ್ಕೆ ಸಹ ಈ ಪ್ರದೇಶ ಒಳಗಾಗಿತ್ತು. ಮಗ್ಗೆಯ, ಮಾರ್ಗೆಯ, ವಾಣಿಜ್ಯಪುರಿ, ವಾಣಿಜ್ಯಪುರ ಎಂಬ ಸ್ಥಳನಾಮಗಳನ್ನು ಹೊಂದಿದ್ದು ವಾಣಿಜ್ಯಪುರಿ ಎಂಬ ಸಂಸ್ಕೃತ ಪದ ಕನ್ನಡದಲ್ಲಿ ಹರದನಹಳ್ಳಿ ಎಂದಾಗಿದೆ. ವಣಿಜ, ವ್ಯಾಪಾರ ಎಂಬ ಅರ್ಥವನ್ನು ಇದು ಒಳಗೊಂಡಿದೆ. ತಮಿಳುನಾಡಿಗೂ ಕರ್ನಾಟಕಕ್ಕೂ ನಡುವೆ ಸಿಗುವ ಗ್ರಾಮವಾದ್ದರಿಂದ ಅಂದಿನ ಕಾಲದಲ್ಲಿ ಇದು ವ್ಯಾಪಾರಕ್ಕೆ ಹೆಸರಾದ ಪ್ರದೇಶವಾಗಿದ್ದಿರಬಹುದು ಕಾರಣ ಹೆಸರು ಸೂಚಿಸುವಂತೆ ಇದು ವಾಣಿಜ್ಯಪುರ. ಮತ್ತೊಂದು ವಾದದಂತೆ ಇದು ಪ್ರಸಿದ್ದವಾದ ವ್ಯಾಪಾರ ಕೇಂದ್ರವಾಗಿತ್ತು.

ಹರದನಹಳ್ಳಿ ಕೋಟೆ ಪ್ರದೇಶವಾಗಿದ್ದು, ಗ್ರಾಮದ ಸುತ್ತು ಇದ್ದಂತಹ ಕೋಟೆ ಇಂದು ಕಣ್ಮರೆಯಾಗಿದೆ. ಈ ಕೋಟೆಗೆ 4 ಬಾಗಿಲುಗಳಿದ್ದು ಜನರು ಸಂಚಾರಕ್ಕೆ ಯೋಗ್ಯವಾಗಿತ್ತು. ಕೋಟೆಯ ಸುತ್ತಲು ನೀರು ಸದಾಕಾಲ ತುಂಬಿರುತ್ತಿತ್ತು. ಅದಕ್ಕೆ ಸಾಕ್ಷಿ ಎಂಬಂತೆ ನೀರಿಲ್ಲದೆ ಬತ್ತಿರುವ ಮರಗದ ಕೆರೆ.

ಆಗಿನ ಕಾಲದಲ್ಲಿ ಈ ಕೆರೆ ಬಹಳ ಅನಾಹುತಗಳನ್ನು ಮಾಡಿದ ಕಥೆಗಳು ಜನರ ಬಾಯಲ್ಲಿ ಇನ್ನೂ ಹರಿದಾಡುತ್ತದೆ. ಬಹಳ ವಿಶಾಲತೆಯನ್ನು ಹೊಂದಿದ್ದು ಕೆರೆ ಪ್ರವಾಹಗಳಲ್ಲಿ ಅನೇಕ ನಷ್ಟಗಳನ್ನು ತಂದು ಒಡ್ಡುತ್ತಿದ್ದು ಆ ಕಾರಣದಿಂದ ಇದಕ್ಕೆ ಮರುಗದ ಕೆರೆ ಎಂದು ಹೆಸರು ಬಂದಿತು. ಹರದನಹಳ್ಳಿಯ ಕೋಟೆ ಬಾಗಿಲುಗಳು ಉತ್ತರ ದಿಕ್ಕಿಗೆ ನಿರ್ಮಿಸಿದ ಕೋಟೆಯ ಬಾಗಿಲು ಇತರ ಮೂರು ಕೋಟೆಯ ಬಾಗಿಲುಗಳಿಗಿಂತ ಅಗಲ ಮತ್ತು ಎತ್ತರವಾಗಿತ್ತು. ಇದು ಸುಮಾರು ಇಪ್ಪತ್ತೈದು ಅಡಿ ಎತ್ತರ ಹಾಗೂ ನಲವತ್ತು ಅಡಿ ಅಗಲವಾಗಿದ್ದು ಹರದನಹಳ್ಳಿಗೆ ಯಾರೇ ಪ್ರವೇಶಿಸಬೇಕಾದರು ಊರಿನ ಸಂಪ್ರದಾಯದಂತೆ ಉತ್ತರದ ಕೋಟೆಯ ಬಾಗಿಲಿನಿಂದ ಮಾತ್ರ ಪ್ರವೇಶಿಸಬೇಕಾಗಿತ್ತು. ಒಮ್ಮೆ ಮೈಸೂರು ಒಡೆಯರಾದ ಜಯಚಾಮರಾಜ ಒಡೆಯರು ಹರದನಹಳ್ಳಿಗೆ ಆಗಮಿಸಿದಾಗ ಕೋಟೆಯ ಉತ್ತರದ ಬಾಗಿಲಿನಿಂದ ಶ್ರೀ ಗೋಪಾಲಕೃಷ್ಣ ಸ್ವಾಮಿ ದೇವಾಲಯದ ತನಕ ಹೂವಿನ ರಸ್ತೆ ನಿರ್ಮಿಸಿ ಸ್ವಾಗತಿಸಿದ ಪ್ರತೀತಿಯಿದೆ.

ಹರದನಹಳ್ಳಿ ಕೋಟೆಯ ದಕ್ಷಿಣ ಬಾಗಿಲಿನಿಂದ ಬಂಡಿಕೆರೆ, ತಮಿಳುನಾಡಿಗೆ ಹೋಗುತ್ತಿದ್ದರು. ಈ ದ್ವಾರದ ಬಲಭಾಗದಲ್ಲಿ ಒಂದು ಚಾವಡಿಯನ್ನು ನಿರ್ಮಿಸಿದ್ದರು. ಈ ಚಾವಡಿಯು ಕೋಟೆ ಬಾಗಿಲನ್ನು ಕಾಯುತ್ತಿದ್ದ ದ್ವಾರಪಾಲಕರು ಮಲಗಲು ಮತ್ತು ಸಭೆ ಸೇರಲು ಉಪಯೋಗಿಸಲಾಗುತ್ತಿತ್ತು.

ಪೂರ್ವ ಕೋಟೆಯ ಬಾಗಿಲಿನ ಮುಂಭಾಗದಲ್ಲಿ ಶ್ರೀ ದಿವ್ಯಲಿಂಗೇಶ್ವರ ದೇವಾಲಯವನ್ನು ನಿರ್ಮಿಸಲಾಗಿದ್ದು, ಈ ದೇವಸ್ಥಾನದ ಜಾತ್ರೆ ಮಹೋತ್ಸವದ ಸಂದರ್ಭದಲ್ಲಿ ಹರದನಹಳ್ಳಿಯ ಪ್ರಾಂತ್ಯಾಧಿಕಾರಿ, ಆಡಳಿತಗಾರರನ್ನು ಈ ದ್ವಾರದಿಂದ ಗೌರವದಿಂದ ಬರಮಾಡಿಕೊಳ್ಳುತ್ತಿದ್ದರು. ಕೋಟೆಯ ಪಶ್ಚಿಮ ದ್ವಾರವು ಅಮಚವಾಡಿ ಗ್ರಾಮ ಮತ್ತು ಕೊಂಗಳ್ಳಿ ಮಲ್ಲಿಕಾರ್ಜುನ ಗದ್ದಿಗೆಗೆ ಹೋಗುವ ರಸ್ತೆಯ ಮಾರ್ಗವಾಗಿತ್ತು. ಮೈಸೂರು ಒಡೆಯರ ಸಂಬಂಧಿಗಳು ಕುಟುಂಬ ಅಮಚವಾಡಿಯಲ್ಲಿ ನೆಲೆಸಿದ್ದು ಅವರೂ ಸಹ ಈ ದ್ವಾರದ ಮೂಲಕ ಪ್ರವೇಶ ಮಾಡುತ್ತಿದ್ದರು. ಕೋಟೆಯ ನಾಲ್ಕು ಬಾಗಿಲಲ್ಲೂ ದ್ವಾರಪಾಲಕರು ಕೋಟೆಯನ್ನು ಕಾವಲು ಕಾಯುತ್ತಿದ್ದರು ಈ ಕೋಟೆಯ ಉಸ್ತುವಾರಿಯನ್ನು ಒಬ್ಬ ಪಾಳೆಗಾರನಿಗೆ ವಹಿಸುವ ರೂಢಿಯಲ್ಲಿತ್ತು. ದಿವ್ಯಲಿಂಗೇಶ್ವರ ದೇವಾಲಯದಲ್ಲಿ ದೇವರಿಗೆ

ವಜ್ರದ ಕಿರೀಟ, ಚಿನ್ನ, ಬೆಳ್ಳಿಯ ಆಭರಣಗಳನ್ನು ಯಥೇಚ್ಛವಾಗಿ ಇದ್ದುದರ ಪರಿಣಾಮವಾಗಿ ಡಕಾಯಿತರ ಮುತ್ತಿಗೆಗೆ ಈ ದೇವಾಲಯ ಕಾರಣವಾಯಿತು. ಈ ಡಕಾಯಿತರ ಭಯಭೀತಿಯಿಂದ ಇಲ್ಲಿನ ಜನರು ಕಂಗೆಟ್ಟಿದ್ದರು. ಒಮ್ಮೆ ಮೈಸೂರು ಅರಸರಿಗೆ ಇಲ್ಲಿನ ಪ್ರಜೆಗಳು ಡಕಾಯಿತರ ವಿಷಯವನ್ನು ನಿವೇಧಿಸಿದಾಗ ಹರಪ್ಪನಾಯಕ ಎಂಬ ಪಾಳೇಗಾರನನ್ನು ಹರದನಹಳ್ಳಿಯ ಆಡಳಿತಕ್ಕಾಗಿ ನಿಯೋಜಿಸಲಾಯಿತು. ಹರಪ್ಪನಾಯಕ ಹರದನಹಳ್ಳಿಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಊರಿನ ಕೋಟೆಯ ದಕ್ಷಿಣ ದ್ವಾರದಿಂದ ಡಕಾಯಿತರು ಊರಿಗೆ ಪ್ರವೇಶಿಸಿ ಸುಲಿಗೆ ಮಾಡಲು ಯತ್ನಿಸುತ್ತಿದ್ದಾಗ ಹರಪ್ಪನಾಯಕ ಸೈನ್ಯದೊಂದಿಗೆ ಡಕಾಯಿತರನ್ನು ಕೊಂದು ಕೋಟೆಯ ನಾಲ್ಕು ಬಾಗಿಲಿಗೆ ನೇತು ಹಾಕಿದ್ದನಂತೆ ಅಂದಿನಿಂದ ವಾಣಿಜ್ಯಪುರಿ ಎಂದು ಕರೆಸಿಕೊಳ್ಳುತ್ತಿದ್ದ ಈ ಗ್ರಾಮ ಹರಪ್ಪನಹಳ್ಳಿ ಎಂದು ನಾಮಾಂಕಿತವಾಯಿತು. ಅಂದಿನ ಹರಪ್ಪನ ಹಳ್ಳಿಯೇ ಜನಭಾಷೆಯ ಸೌಕರ್ಯದಿಂದ ಹರದನಹಳ್ಳಿ ಎಂದಾಗಿದೆ. ಹರದನಹಳ್ಳಿ ಮೊದಲೇ ಹೇಳಿದಂತೆ ವ್ಯಾಪಾರಕೇಂದ್ರವಾಗಿದ್ದರಿಂದ ಇಲಿಗೆ ಹೊರ ರಾಜ್ಯದಿಂದ ಮತ್ತು ಚಾಮರಾಜನಗರ ಜಿಲ್ಲೆಯ ತೆರಕಣಾಂಬಿ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಇನ್ನು ಮುಂತಾದ ಕಡೆಯಿಂದ ವ್ಯಾಪಾರಸ್ಥರು ಬಂದು ಈ ಗ್ರಾಮದಲ್ಲಿ ತಂಗುತ್ತಿದ್ದರು. ಈ ಒಂದು ಕಾರಣವು ಸಹ ಡಕಾಯಿತರ ಮುತ್ತಿಗೆಗೆ ಸಹಾಯವಾಗಿತ್ತು. ಟಿಪ್ಪುವಿನ ಆಳ್ವಿಕೆಯ ಕಾಲದಲ್ಲಿ ಮುತ್ತಿಗೆ ಹಾಕಿ ಗುಡಿಯಲ್ಲಿ ಸಂಪತ್ತನ್ನು ದೋಚಿಕೊಂಡು ಹೋದ ವಿಷಯ ಕಡತದಿಂದ ತಿಳಿದುಬರುತ್ತದೆ. ಹರಪ್ಪನಾಯಕನ ಆಳ್ವಿಕೆಯಿಂದಲೇ ಇಲ್ಲಿ ಪಾಳೆಗಾರರ ಆಡಳಿತ ಪ್ರಾರಂಭವಾಗಿರಬಹುದು. ಹರಪ್ಪನಾಯಕನ ಸಂತತಿ ಕ್ರಮೇಣ ಇಲ್ಲಿ ಬೆಳೆದಿದ್ದರಿಂದ ಈ ಹಳ್ಳಿಯಲ್ಲಿ ನಾಯಕ ಜನಾಂಗವೇ ಪ್ರಾಬಲ್ಯ ಪಡೆದಿರುವುದನ್ನು ಗುರುತಿಸಬಹುದು. ಹರನದಹಳ್ಳಿಯಲ್ಲಿ ಪ್ರಾಚೀನ ವಿದ್ಯಾಪೀಠವಾದ ಗೋಸಲ ಪೀಠ ಕೂಡ ಬಹುಮುಖ್ಯವಾಗಿರುವುದು. 16ನೇ ಶತಮಾನದಲ್ಲಿ ತೋಂಟದ ಸಿದ್ದಲಿಂಗೇಶ್ವರರು ಈ ಮಠವನ್ನು ಸ್ಥಾಪಿಸಿದರೆಂದು ತಿಳಿದುಬರುತ್ತದೆ. ಜಯಚಾಮರಾಜೇಂದ್ರ ಒಡೆಯರು ಹರದನಹಳ್ಳಿಯಲಿರುವ ಶ್ರೀ ಗೋಪಾಲಕೃಷ್ಣ ಸ್ವಾಮಿ ದೇವಾಲಯದ ನಿರ್ಮಾಣಕ್ಕೆ ಕಾರಣಕರ್ತರಾಗಿದ್ದರೆ, ಇಷ್ಟು ದಾಖಲೆಗಳನ್ನು ಬಿಟ್ಟರೆ ಅಂತಹ ಹೇಳಿಕೊಳ್ಳುವ ಆಧಾರಗಳು ಇಲ್ಲಿ ಲಭ್ಯವಿಲ್ಲ. ಈ ಆಧಾರವನ್ನಿಟ್ಟಿಕೊಂಡು ನಾವು ಮುಂದಿನ ಅಧ್ಯಯನಗಳನ್ನು ರೂಪಿಸಿಕೊಳ್ಳಬಹುದಾಗಿದೆ.

4–ಹರದನಹಳ್ಳಿಯ ದೇವಾಲಯಗಳು

ಶ್ರೀ ದಿವ್ಯಲಿಂಗೇಶ್ವರ ದೇವಾಲಯವು ವಿಜಯನಗರ ಸಾಮ್ರಾಜ್ಯದ ರಾಯಗೋಪುರ ಮತ್ತು ಹೊಯ್ಸಳ ಶೈಲಿಯಲ್ಲಿ ರಚನೆಗೊಂಡ ಕರ್ನಾಟಕದ ದೇವಾಲಯಗಳಲ್ಲಿ ಇದೂ ಕೂಡ ಒಂದು. ಆದರೆ ಅಷ್ಟು ಮುಖ್ಯವಾಗಿಲ್ಲ. ನಕ್ಷತ್ರಾಕಾರದ ಜಗುಲಿಯ ಮೇಲೆ ನಿಂತಿರುವ ಈ ದೇವಾಲಯ ಇಂದು ಶಿಥಿಲಾವಸ್ಥೆಯನ್ನು ತಲುಪಿದೆ. ಕ್ರಿ. ಶ 1316ರಲ್ಲಿ ಮಾಧವ ದಣ್ಣಾಯಕ ಎಂಬುವವನಿಂದ ಈ ದೇವಾಲಯ ನಿರ್ಮಾಣಗೊಂಡಿತ್ತು. ಈ ನಿರ್ಮಾಣದ ಕೆಲಸವನ್ನು ನಿರ್ವಹಿಸಿದವರು ಪುರುಷಗೌಡರ ಮಗನಾದ ಮಾರಗೌಡ.



****ಶ್ರೀ ದಿವ್ಯಲಿಂಗೇಶ್ವರ ದೇವಾಲಯದ ಚಿತ್ರ****

ದಿವ್ಯ ಲಿಂಗೇಶ್ವರ ದೇವಾಲಯದ ಹಿಂದಿನ ಹೆಸರು ಅಣಿಲೇಶ್ವರ, ಅಮೃತೇಶ್ವರ ಮತ್ತು ಆಳಲೇಶ್ವರ ಎಂಬ ಹೆಸರಿನಿಂದ ಕರೆಯುತ್ತಾರೆ. ದಿವ್ಯ ಲಿಂಗೇಶ್ವರ ದೇವಾಲಯ ಬೆಳಕಿಗೆ ಬಂದುದರ ಬಗ್ಗೆ ಒಂದು ಐತಿಹ್ಯವಿದೆ. ಇಂದು ನಾವು ನೋಡುವ ಈ ದೇವಾಲಯದ ಸ್ಥಳದಲ್ಲಿ ಗಿಡಮರಗಳಿಂದ ಕೂಡಿದ ಪ್ರದೇಶವಾಗಿದ್ದು, ಒಂದು ಹಸು ಕಾಡಿಗೆ ಮೇಯಲು ಬಂದಾಗ ಅದು ಒಂದು ಕಲ್ಲಿಗೆ ಹಾಲನ್ನು ಸುರಿಸಿ ಹೋಗುತ್ತದೆ. ಇದನ್ನು ನೋಡಿದ ಗೊಲ್ಲ ಹಸು ಹಾಲು ಸುರಿಸಿದ ಕಲ್ಲನ್ನು ಕಬ್ಬಿಣದ ಸಲಕೆಯಿಂದ ಹೊಡೆದಾಗ ಆ ಕಲ್ಲಿನಲ್ಲಿ ಒಂದು ದಿವ್ಯವಾದದಂತಹ ಬೆಳಕು ಪ್ರಜ್ವಲಿಸಿತು. ಗೊಲ್ಲ ಅದನ್ನು ಕಂಡು ಮೂರ್ಛೆ



ಹೋದನು. ಸ್ವಲ್ಪ ಸಮಯದ ನಂತರ ಗೊಲ್ಲ ಕಲ್ಲಿನ ವಿಷಯವನ್ನು ಊರಿನವರಿಗೆ ತಿಳಿಸುತ್ತಾನೆ. ಊರಿನ ಜನರು ಆ ಸ್ಥಳವನ್ನು ನೋಡಿದಾಗ ಇದು ದೇವರು ನೆಲೆನಿಂತಿರುವ ಲಿಂಗಸ್ಥಳವೆಂದು ತಿಳಿದು ಅಲ್ಲಿದ್ದ ಗಿಡಮರಗಳನ್ನು ತರಿದು ಒಂದು ಸಣ್ಣದಾದ ದೇವಾಲಯ ನಿರ್ಮಿಸಿದರು ಇದೇ ಶ್ರೀ ದಿವ್ಯಲಿಂಗೇಶ್ವರ ದೇವಾಲಯ.

ಶ್ರೀ ದಿವ್ಯಲಿಂಗೇಶ್ವರ ದೇವಾಲಯದ ಬಗ್ಗೆ ಇರುವ ಮತ್ತೊಂದು ಐತಿಹ್ಯವೆಂದರೆ ಹರದನಹಳ್ಳಿ ಅಥವಾ ಮಗ್ಗೆಯ ಹಿಂದೊಮ್ಮೆ ನೀರಿನಿಂದ ಅವೃತವಾಗಿದ್ದು, ಹಲವು ಭಾಗ ಗಿಡಮರಗಳಿಂದ ಕೂಡಿದ್ದ ಕತ್ತಲು ಪ್ರದೇಶವಾಗಿದ್ದು, ವ್ಯಾಪಾರಸ್ಥರು ಅರಿಕುಟಾರ (ಚಾಮರಾಜನಗರ)ದಿಂದ ತಮಿಳುನಾಡಿನ ಸತ್ಯಮಂಗಲಕ್ಕೆ ಹರದನಹಳ್ಳಿಯ ಮಾರ್ಗವಾಗಿ ಹೋಗುತ್ತಿದ್ದರು. ಇಲ್ಲಿನ ವಿಳ್ಯದೆಲೆ, ಅಡಿಕೆಗೆ ತಮಿಳುನಾಡಿನ ಮದುರೈ, ಈರೋಡ್ ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆಯಿತ್ತು. ಅದನ್ನು ಮಾರಲು ತಮಿಳುನಾಡಿಗೆ ಹೋಗುತ್ತಿರುವಾಗ ಮಾರ್ಗ ಮದ್ಯದಲ್ಲಿ ಸಿಕ್ಕಿದ ಹರದನಹಳ್ಳಿಯಲ್ಲಿ ತಂಗುತ್ತಿದ್ದರು. ರಾತ್ರಿಯ ಊಟಕ್ಕಾಗಿ ಅಡಿಗೆ ಮಾಡಲು ಒಲೆಯನ್ನು ನಿರ್ಮಿಸಿ ಬೆಂಕಿ ಹಾಕಿದಾಗ ಇದ್ದಕ್ಕಿದ್ದಹಾಗೆ ಒಲೆಯಲ್ಲಿನ ಪಾತ್ರೆಯಿಂದ ಹಾಲು ಉಕ್ಕಲು ಪ್ರಾರಂಭಿಸಿತು. ಇದರಿಂದ ಗಾಬರಿಗೊಂಡ ವ್ಯಾಪಾರಸ್ಥರು ಬೆಂಕಿಯನ್ನು ಹಾರಿಸಿ ನೋಡಿದರೆ ಒಂದು ಚಿಕ್ಕದಾದ ಉದ್ಭವಲಿಂಗ ಕಂಡುಬಂತು. ತಕ್ಷಣ ಎಲ್ಲರೂ ಆ ಲಿಂಗಕ್ಕೆ ಕೈ ಮುಗಿದು ತಪ್ಪು ಕಾಣಿಕೆಯನ್ನು ಕಟ್ಟಿ ಬೇರೆ ಕಡೆಗೆ ಅಡಿಗೆ ಮಾಡಿ ಊಟ ಮಾಡುತ್ತಾರೆ. ಊಟವಾದ ನಂತರ ಎಲೆ ಹಾಕಿಕೊಳ್ಳಲು ಅಡಿಕೆಯನ್ನುತರಲು ಎತ್ತಿನಗಾಡಿಯ ಬಳಿಗೆ ಬಂದು ಒಂದು ಮೂಟೆಗೆ ಕೈಹಾಕಿದರೆ ಅಡಿಕೆಯಲ್ಲ ಅಳಲೆಕಾಯಿಯಾಗಿರುತ್ತದೆ. ಇದರಿಂದ ಆಶ್ಚರ್ಯರಾದ ವ್ಯಾಪಾರಸ್ಥರು ತಮ್ಮ ತಪ್ಪನ್ನು ಅರಿತು ಲಿಂಗದ ಮುಂದೆ ಹೀಗೇ ಪ್ರಾರ್ಥಿಸಿಕೊಳ್ಳುತ್ತಾರೆ. "ಅಳಲೆಕಾಯಲ್ಲ ಮೊದಲಿನಂತೆ ಅಡಿಕೆಯಾದರೆ" ಬಂದ ಲಾಭದಿಂದ ಒಂದು ಗುಡಿಯನ್ನು ನಿರ್ಮಿಸುವುದಾಗಿ ಪ್ರಾರ್ಥಿಸಿಕೊಳ್ಳುತ್ತಾರೆ. ನಂತರ ಹೋಗಿ ಎತ್ತಿನಗಾಡಿಯ ಮೂಟೆಗಳನ್ನು ನೋಡಿದಾಗ ಅಳಲೆಕಾಯಿಯು ಅಡಿಕೆಯಾಗಿರುತ್ತದೆ. ಅದನ್ನು ಮಾರುಕಟ್ಟೆಯಲ್ಲಿ ಮಾರಿದಾಗ ಹಿಂದಿನ ಲಾಭಕ್ಕಿಂತ 3 ಪಟ್ಟು ಹೆಚ್ಚು ಲಾಭ ದೊರೆಯುತ್ತದೆ. ಬಂದ ಲಾಭದ ಹಣದಿಂದ ಒಂದು ಚಿಕ್ಕ ಗುಡಿಯನ್ನು ನಿರ್ಮಿಸಿದರು. ಈ ಗುಡಿಯನ್ನು ಕೆಲವರು ಹಾಲಿನ ಅಭಿಷೇಕದಿಂದ

ಪೂಜೆ ಮಾಡುತ್ತಿದ್ದರಿಂದ ಅಮೃತೇಶ್ವರ ಎಂಬ ಹೆಸರು ಬಂದಿತೆಂದು, ಅಡಿಕೆಕಾಯಿಗಳು ಅಳಲೆ ಕಾಯಿಯಾಗಿದ್ದರಿಂದ ವ್ಯಾಪಾರಸ್ಥರು ಅಳಲೇಶ್ವರ ಎಂದು ಕರೆದರು.

ಶ್ರೀ ದಿವ್ಯಲಿಂಗೇಶ್ವರ ಮಹಿಮೆ ಎಲ್ಲಾ ಭಾಗಕ್ಕೂ ಪ್ರಚಲಿತವಾದ್ದರಿಂದ ಈ ಗುಡಿಗೆ ಬರುವ ಭಕ್ತರು ಹೆಚ್ಚಾದಂತೆ ವ್ಯಾಪಾರವು ಹೆಚ್ಚಾಯಿತು. ಈ ಗುಡಿಯ ಮುಂಭಾಗದಲ್ಲಿ ವ್ಯಾಪಾರದ ಸಂತೆ ಪ್ರಾರಂಭವಾಗುತ್ತದೆ. ಪ್ರಾರಂಭದಲ್ಲಿ ವಣಿಜರು, ನಂತರ ಬ್ರಾಹ್ಮಣರು, ಮಾರಾಟ ಮಾಡುತ್ತಿದ್ದು ಇವರನ್ನು ಹಾಗೂ ವ್ಯಾಪಾರ ಕೇಂದ್ರವನ್ನು ನೋಡಿಕೊಳ್ಳಲು ಒಬ್ಬ ನಾಯಕನಿದ್ದನು. ಈ ವಿಷಯವು ಹರದನಹಳ್ಳಿಯನ್ನು ಆಳ್ವಿಕೆ ಮಾಡುತ್ತಿದ್ದ ಅಧಿಕಾರಿಗಳಿಗೆ, ಸಾಮಂತ ರಾಜರುಗಳಿಗೆ ತಿಳಿದಾಗ ಈ ದೇವಾಲಯದ ಜೀರ್ಣೋದ್ಧಾರ ಕಾರ್ಯ ಪ್ರಾರಂಭವಾಗುತ್ತದೆ.

ಅಮೃತೇಶ್ವರ ಎಂಬ ಗುಡಿ ಒಂದು ದೇವಾಲಯವಾಗಿ ನಿರ್ಮಾಣವಾದದ್ದು 1316ರಲ್ಲಿ ಮಾದವ ದಂಡನಾಯಕ ಶ್ರೀ ದಿವ್ಯಲಿಂಗೇಶ್ವರ ದೇವಾಲಯಕ್ಕೆ ಒಂದು ಹೊಸ ರೂಪಕೊಟ್ಟನು. ಈ ದೇವಾಲಯಕ್ಕೆ ಕಂಬಗಳನ್ನು ಊರಿನ ಪ್ರಮುಖ ವ್ಯಕ್ತಿಗಳಿಂದ ಮಾಡಿಸಿ ಒಂದ ವ್ಯವಸ್ಥಿತವಾದ ದೇವಾಲಯವನ್ನು ನಿರ್ಮಾಣ ಮಾಡಿದನು. ವಿಜಯನಗರದ ಅರಸನಾದ ಕೃಷ್ಣದೇವರಾಯನ ಕಾಲದಲ್ಲಿ ಅನೇಕ ಸಾಮಂತರ ರಾಜರು, ಈ ದೇವಾಲಯದ ಪೂಜೆಗಾಗಿ ದೇವರ ವಿಗ್ರಹ, ಆಭರಣಕ್ಕಾಗಿ ಭೂಮಿಯನ್ನು ದಾನ ಮಾಡಿದರೆಂದು ಬಂಡಿಗೆರೆ ಶಾಸನ ತಿಳಿಸುತ್ತದೆ.

1500 ವರ್ಷಗಳ ಇತಿಹಾಸ ಹೊಂದಿರುವ ಶ್ರೀ ದಿವ್ಯಲಿಂಗೇಶ್ವರ ದೇವರ ಹಿಂದಿನ ಹೆಸರು ದಿಬ್ಯಲಿಂಗೇಶ್ವರ ಎಂದು, ದಿಬ್ಯ ಎಂದರೆ ಕಬ್ಬಿಣದ ಸಲಾಕೆಯನ್ನು ಹಿಡಿದು ಸತ್ಯವನ್ನು ತಿಳಿಯುವುದು ಎಂದರ್ಥ, ಹಿಂದಿನ ಕಾಲದಲ್ಲಿ ಸುತ್ತಮುತ್ತಲಿನ ಹಳ್ಳಿಯ ಜನರು ನ್ಯಾಯ ತೀರ್ಮಾನ ಮಾಡುತ್ತಿದ್ದು ತಪ್ಪಿತಸ್ಥರೆಂದು ಕಂಡು ಬಂದರೆ ತಾವು ಪ್ರಾಮಾಣಿಕರೆಂದು ದೃಡಪಡಿಸಲು ಈ ಪರೀಕ್ಷೆ ಮಾಡಿಸುತ್ತಿದ್ದರೆಂದು ಹೇಳಲಾಗಿದೆ. ದಿಬ್ಯ ಲಿಂಗೇಶ್ವರ ಎಂಬುದು ಜನರ ಆಡು ಬಾಷೆಯಲ್ಲಿ ದಿವ್ಯಲಿಂಗೇಶ್ವರವಾಗಿದೆ.

ದಿವ್ಯಲಿಂಗೇಶ್ವರ ದೇವಾಲಯದಲ್ಲಿ ಕಳೆದ 50 ವರ್ಷಗಳಿಂದಲೂ ನವೆಂಬರ್ ತಿಂಗಳಲ್ಲಿ ವಿಜೃಂಭಣೆಯ ದಿವ್ಯಲಿಂಗೇಶ್ವರ ರಥೋತ್ಸವ ನಡೆಯುತ್ತಿದ್ದು ಊರಿನ ಪ್ರಮುಖ ಬೀದಿಗಳಲ್ಲಿ ವಾದ್ಯ, ಕಂಸಾಳೆ, ಸತ್ತಿಗೆ, ಮುಂತಾದ ನೃತ್ಯಗಳ ಜೊತೆಗೆ ಶಿವನ ಮೂರ್ತಿ, ಕಾಮಾಕ್ಷಿದೇವಿಯ ಮೂರ್ತಿಯನ್ನು ಚಿನ್ನದ ಪಲ್ಲಕ್ಕಿಯ ಮೇಲೆ ಇರಿಸಿ ಅದನ್ನು ರಥದ ಮೇಲಿಟ್ಟುಕೊಂಡು ಹೋಗುತ್ತಿದ್ದರು. 1.ಕ್ರಮೇಣವಾಗಿ ದಿವ್ಯಲಿಂಗೇಶ್ವರ ದೇವಾಲಯದ 42 ಅಡಿ ಎತ್ತರದ ಏಕಶಿಲೆಯ ಗರುಡಕಂಬ ಮಳೆಯಿಂದ ಕೆಳಗೆ ಬಿದ್ದು ಅವನತಿ ಹೊಂದಿತು. ಇದರ ಬಗ್ಗೆ 1922ರಲ್ಲಿ ನಂಜನಗೂಡಿನ ಅರ್ಚಕರೊಬ್ಬರು ತಮಿಳುನಾಡಿಗೆ ಹೋಗುತ್ತಿರುವಾಗ ಮಾರ್ಗ ಮಧ್ಯದಲ್ಲಿ ಸಿಗುವ ಶ್ರೀ ದಿವ್ಯಲಿಂಗೇಶ್ವರ ದೇವಾಲಯದ ಮುಂದಿರುವ ಗರುಡಗಂಬಕ್ಕೆ ಕೈಮುಗಿದು ಹೋಗಿದ್ದು ಆವರು ಹಿಂದಿರುಗಿ ಬರುವ ವೇಳೆ ಮಳೆಗೆ ಸಿಕ್ಕಿ ಆ ಗರುಡಗಂಬ ಕೆಳಕ್ಕೆ ಬಿದ್ದಿತ್ತೆಂದು ಅರ್ಚಕರು ತಮ್ಮ ದಿನಚರಿಯ ಪುಸ್ತಕದಲ್ಲಿ ದಾಖಲಿಸಿದ್ದಾರೆ.1


ದಿವ್ಯಲಿಂಗೇಶ್ವರ ದೇವಾಲಯದ ಜೀರ್ಣೋದ್ಧಾರ ಕೆಲಸ ನಡೆಯುತ್ತಿದ್ದು 1999ರಲ್ಲಿ ದೇವಾಲಯದ ಮೇಲ್ಭಾವಣಿಯಲ್ಲಿರುವ ಬಸವನ ಮೂರ್ತಿ ವಿಗ್ರಹವನ್ನು ಜೀರ್ಣೋದ್ಧಾರ ಮಾಡಲಾಗಿದೆ. 2001ರಲ್ಲಿ ತಮಿಳುನಾಡಿನ ಸತ್ಯಮಂಗಲದ ಪರಿಯಕಟ್ಟಿ, ರಾಜನಗರ, ವೀರಕಟಾವು, ಪನಾಯಂಬಳ್ಳಿಯ ತಮಿಳು ಭಕ್ತರು 32 ಅಡಿ ಉದ್ದದ ಏಕಶಿಲೆಯ ಕಲ್ಲನ್ನು ದೊಡ್ಡಬಳ್ಳಾಪುರದ ಮನುಗೊಂಡವನ ಹಳ್ಳಿಯಿಂದ ಹರದನಹಳ್ಳಿಗೆ ತಂದು ಸತತವಾಗಿ ಕೆತ್ತನೆ ಮಾಡಿ ಶಂಕುಸ್ಥಾಪನೆ ಮಾಡಿದರು. ದಿವ್ಯಲಿಂಗೇಶ್ವರ ಜಾತ್ರೆಯ ವಿಶೇಷವೆಂದರೆ ರಥೋತ್ಸವ ನಡೆಯುವ ಐದು ದಿನದ ಹಿಂದಿನ ದಿನದಿಂದಲೇ ಊರಿನ ಭಕ್ತನೊಬ್ಬನ ಮೇಲೆ ದೇವರು ಬಂದು ಅವನು ತ್ರಿಶೂಲ ಹಿಡಿದುಕೊಂಡು ಮೆರವಣಿಗೆಯಲ್ಲಿ ಭಾಗವಹಿಸುತ್ತಿದ್ದನು. ಅಲ್ಲದೆ ನಟರಾಜಮೂರ್ತಿಯ ವಿಗ್ರಹದ ಮೆರವಣಿಗೆಯನ್ನು ಸಹ ಮಾಡಲಾಗುತ್ತಿತ್ತು.

"ಶ್ರೀ ದಿವ್ಯಲಿಂಗೇಶ್ವರ ದೇವಾಲಯದ ವಿಶಿಷ್ಟ ಆಕಾರಗಳು"




ದಿವ್ಯಲಿಂಗೇಶ್ವರ ದೇವಾಲಯದ ಒಳ ಚಿತ್ರ

ದಿವ್ಯಲಿಂಗೇಶ್ವರ ದೇವಾಲಯದ ಹೊರಾಂಗಣವು ವಿಶಾಲವಾಗಿದ್ದು ದೇವಾಲಯದ ಪೂರ್ವದಿಕ್ಕಿಗೆ ಬಾಗಿಲನ್ನು ಹೊಂದಿದ ಗರುಡ ಕಂಬವಿರುತ್ತದೆ. ಇದರ ನಾಲ್ಕು ಮುಖಗಳಲ್ಲಿಯೂ ನಂದಿ, ಶಿವಲಿಂಗ, ತ್ರಿಶೂಲ ಮತ್ತು ಗಣಪತಿ ಚಿತ್ರಗಳಿವೆ.









ಗರುಡ ಕಂಬದ ಚಿತ್ರ

ಈ ದೇವಸ್ಥಾನದಲ್ಲಿ ಎಡ ಮತ್ತು ಬಲಭಾಗದಲ್ಲಿ ಎರಡು ಮಂಟಪಗಳಿಗೆ ದಿವ್ಯಲಿಂಗೇಶ್ವರ ದೇವಾಲಯದ ಗೋಪುರವು 5 ಮಹಡಿಗಳನ್ನು ಹೊಂದಿದು 50 ಅಡಿ ಎತ್ತರವಿದೆ. ಈ 5 ಮಹಡಿಯಲ್ಲಿ ವಿವಿಧ ಆಕೃತಿಗಳಿಂದ ಮರದ ಜೋಡಣೆಯು ಮನಸ್ಸು ಆಕರ್ಷಿಸುತ್ತಿದೆ.





ದೇವಾಲಯದ ಒಳಚಿತ್ರ

ದೇವಾಲಯದ ಹೊರಗೋಡೆಯ ಗೋಪುರವು ಕಲಾತ್ಮವಾಗಿದ್ದು ಅನೇಕ ಚಿತ್ರಗಳನ್ನು ಇಟ್ಟಿಗೆಯಿಂದ ನಿರ್ಮಿಸಿದ್ದಾರೆ. ಇದರ ಗೋಪುರ ನಿರ್ಮಾಣಕ್ಕಾಗಿಯೇ ವಿಶೇಷವಾದ ಇಟ್ಟಿಗೆ ಬಳಸಿ ನಿರ್ಮಿಸಿದ್ದಾರೆ. ಈ ಗೋಪುರದ ಮೇಲೆ 2 ಕಳಸ ಗೋಪುರಗಳಿವೆ. ಗೋಪುರದ ತಳಭಾಗದ 2 ಕಡೆ ತೆರೆದ ಭಾಗವಿದ್ದು ಅದನ್ನು ಪ್ರಸಾದ ವಿತರಿಸಲು ಉಪಯೋಗಿಸುತ್ತಿದ್ದರು ಎನ್ನಲಾಗಿದೆ.

ದಿವ್ಯಲಿಂಗೇಶ್ವರ ದೇವಾಲಯದ ಬಲಭಾಗಕ್ಕೆ ಯಾಗಶಾಲೆಯಿದ್ದು ಅದರ ಎಡಕ್ಕೆ ಅಡಿಗೆ ಮನೆಯಿದೆ. ಹಬ್ಬ, ವಿಶೇಷ ಪೂಜೆಗಳಲ್ಲಿ ಅನ್ನ ಸಂತರ್ಪಣೆ ಮಾಡಲು ಇದನ್ನು ನಿರ್ಮಿಸಿದ್ದರು. ಅಡಿಗೆ ಮನೆ ಪಕ್ಕದಲ್ಲಿ 16 ನಾಗರಕಲ್ಲನ್ನು ಪ್ರತಿಷ್ಠಾಪನೆ ಮಾಡಿದ್ದು ಮಕ್ಕಳಾಗದವರು ಹರಕೆ ಹೊತ್ತು ಮಕ್ಕಳಾದ ನಂತರ ನಾಗರ ಕಲ್ಲನ್ನು ಪ್ರತಿಷ್ಠಾಪನೆ ಮಾಡುವುದು ಪ್ರತೀತಿಯಿದೆ.





ನಾಗರ ಕಲ್ಲಿನ ಚಿತ್ರ

ಅದರ ಮುಂದೆ ಶಿವಲಿಂಗಕ್ಕೆ ನೇರವಾಗಿ ನಂದೀಶನ ಕಲಾತ್ಮಕವಾದ ವಿಗ್ರಹವಿದೆ. ಸುಮಾರು 105 ಅಡಿ ಸಮೀಪದಲ್ಲಿ ನಂದಿಶನ ವಿಗ್ರಹ ಪ್ರತಿಷ್ಠಾಪನೆ ಮಾಡಿದ್ದಾರೆ.



ಬಸವನ ವಿಗ್ರಹ





ಮುಂದೆ ಎಡಗಡೆಗೆ ವೀರಭದ್ರಸ್ವಾಮಿ ಗುಡಿ, ಬಲಭಾಗಕ್ಕೆ ಕಾಳಭೈರವ ದೇವರ ಗುಡಿಯಿದೆ. ಇದರ ಪಕ್ಕದಲ್ಲಿ 2 ಕಡೆ ದ್ವಾರಪಾಲಕರ ವಿಗ್ರಹವಿದ್ದು ಇದು ದಿವ್ಯಲಿಂಗೇಶ್ವರ ದೇವಾಲಯದ ಎರಡನೇ ಪ್ರವೇಶ ದ್ವಾರವಾಗಿದ್ದು ಅದರ ಮುಂದೆ ನೂತನವಾಗಿ ನಿರ್ಮಿಸಿರುವ ಅಯ್ಯಪ್ಪಗುಡಿ, ಅದರ ಎಡಗಡೆ ಗಣಪತಿ ವಿಗ್ರಹ, 3ನೇ ದ್ವಾರ ಪ್ರವೇಶಿಸಿದರೆ ಖಾಲಿಕೊಠಡಿ, 5ನೇ ಪ್ರವೇಶದ್ವಾರದ ನಂತರ ದಿವ್ಯಲಿಂಗೇಶ್ವರ ಮೂರ್ತಿಯು ಲಿಂಗದ ರೂಪದಲ್ಲಿರುವುದು ಕಂಡುಬರುತ್ತದೆ.

[2]ದಿವ್ಯಲಿಂಗೇಶ್ವರ ದೇವಾಲಯದ ಒಳಾಂಗಣದ ಬಲಭಾಗದಲ್ಲಿ ಸರಸ್ವತಿ ಗುಡಿಯಿದ್ದು ಈ ಗುಡಿಯ ಹಿಂದೆ ಒಂದು ಶಿಲಾಶಾಸನವಿದ್ದು ಅದರಲ್ಲಿ ಶಕವರುಷ 1406 **(1485)** ಇಮ್ಮಡಿರಾಯ ಒಡೆಯರ ಕುಮಾರ ದೇಂಪಣ್ಣ ಒಡೆಯರು ದಿವ್ಯಲಿಂಗೇಶ್ವರ ದೇವರಿಗೆ ಪೂಜೆ ಸಲ್ಲಿಸಿ ಯಂಣ್ಣೆನಾಡು ಅಥವಾ ಹರದನಹಳ್ಳಿಯನ್ನು ದಾನವನ್ನಾಗಿ ನೀಡಿದ ವಿಷಯವನ್ನು ತಿಳಿಸುತ್ತದೆ[2].

ಸರಸ್ವತಿ ಗುಡಿಯ ಸಮೀಪದಲ್ಲಿ ಕಾಮಾಕ್ಷಿ ದೇವಿಯ ವಿಗ್ರಹವಿದ್ದು, ಇದರ ಎಡಭಾಗದಲ್ಲಿ ಸುರಂಗ ಮಾರ್ಗವಿದ್ದು ಇದನ್ನು ಪ್ರವೇಶದ್ವಾರದಿಂದ 5 ಮನೆ ಸುತ್ತು ಹೋದರೆ ಸುರಂಗ ಮಾರ್ಗದ ದಾರಿ ಕಾಣುತ್ತದೆ. ದಂತ ಕಥೆಯ ಪ್ರಕಾರ ಇದು ಚಾಮರಾಜನಗರ ಸಮೀಪ ಹರಳುಕೋಟೆಗೆ ಸಂಪರ್ಕ ಕಲ್ಪಿಸುತ್ತದೆ.

ದಿವ್ಯಲಿಂಗೇಶ್ವರ ದೇವಾಲಯದ ಹಿಂದಕ್ಕೆ ಹೋದರೆ ಎಂಟು ಲಿಂಗಗಳನ್ನೊಂಳಗೊಂಡ ವಿಶಾಲವಾದ ಗುಡಿಯಿದ್ದು ಈ ಲಿಂಗಗಳು ವಿಶಿಷ್ಟ ರೀತಿಯ ಬೇರೆ ಬೇರೆ ಆಕಾರವಾಗಿವೆ. ಈ ಗೋಡೆಯ ಮೇಲ್ಭಾವಣಿಯಲ್ಲಿ ಇತಿಹಾಸ ಪ್ರಸಿದ್ದವಾದ ಚಿತ್ರಕಲೆಗಳಿದ್ದು ಪ್ರಕೃತಿ ವಿಕೋಪದಲ್ಲಿ ಈ ಚಿತ್ರಗಳು ಕಣ್ಮರೆಯಾಗಿವೆ.



ಅಷ್ಟಲಿಂಗಗಳ ಚಿತ್ರ

ದಿವ್ಯಲಿಂಗೇಶ್ವರ ದೇವಾಲಯದ ಕೈಸಾಲೆಯಲ್ಲಿ 9 ಅಂಕಣಗಳಿದ್ದು ಆ ಅಂಕಣಗಳಲ್ಲಿ ಶಿವನು ಪದ್ಮಾಸನದಲ್ಲಿರುವ ಚಿತ್ರವಿದ್ದು ಶಿವನಿಗೆ 5 ಮುಖ, 10 ಹಸ್ತಗಳಿರುವುದು, ಇಲ್ಲಿನ ವಿಶೇಷ, ಶಿವನ ಸುತ್ತಲೂ ಗಿಡ, ಹೂ, ಬಳ್ಳಿ, ಹಂಸ, ಆನೆಗಳ ಸಾಲು, ತೊಲೆಯಲ್ಲಿ ನೀಳಜಂತು, ಅಲಂಕಾರ ಗೋಪಿಕೆಯೊಬ್ಬಳು ಮೋಹಕ ಭಂಗಿಯಲ್ಲಿ ನಿಂತು ಮೊಸರು ಕಡೆಯುತ್ತಿರುವುದು ಮತ್ತು ಅವಳನ್ನು ರೇಗಿಸುತ್ತಿರುವ ಕೃಷ್ಣ, ಗಜಲಕ್ಷ್ಮಿ, ಗಣಪ, ಲಕ್ಷ್ಮಿನಾರಾಯಣ, ಮತ್ತೊಂದು ಕಡೆ ಭಕ್ತನೊಬ್ಬನ ಬಿಳಿಯ ಉದ್ದನಾದ ಕೋಟು, ಟೋಪಿ ಧರಿಸಿರುವ ಚಿತ್ರ, ಅಷ್ಟದಿಕ್ಪಾಲಕರು ಲಿಂಗ ಪೂಜಿಸುತ್ತಿರುವುದು, ಅಸುರರು ಹಾವನ್ನು ಹಗ್ಗವನ್ನಾಗಿ ಮಾಡಿಕೊಂಡು ಸಮುದ್ರಮಥನ ಮಾಡಿತ್ತಿರುವುದು ಸಂಗೀತಗಾರರು, ಮೃದಂಗ, ಡಮರುಗ ಬಾರಿಸುತ್ತಿರುವ ವಾದ್ಯಗಾರರು, ಗ್ರಾಮದ ಮುಖಂಡನ ಪತ್ನಿ ಮಕ್ಕಳ ಸಮೇತ ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವುದು ಕಂಡುಬರುತ್ತದೆ. ಹಾವಾಡಿಗನೊಬ್ಬ ಪುಂಗಿಯನ್ನು ಊದುತ್ತಿರುವುದು, ಆತನ ಎದುರಿಗೆ ಎಡೆಬಿಟ್ಟಂತ ಸರ್ಪ ನಾದಸ್ವರಕ್ಕೆ ತಕ್ಕಂತೆ ತಲೆ ಎತ್ತಿ ನಿಂತಿರುವುದು, ಕೋತಿಯೊಂದು ಈ ದೃಶ್ಯವನ್ನು ಹಿಂಗಾಲುಗಳ ಮೇಲೆ ನಿಂತು ತದೇಕ ಚಿತ್ತದಿಂದ ನೋಡುತ್ತಿರುವ ಚಿತ್ರಗಳಿವೆ.



ಮುಂದಿನ ಸಾಲಿನಲ್ಲಿ ಬೃಹತ್ ಕಮಲ ಮತ್ತು ವೀರಭದ್ರನ ಚಿತ್ರಗಳಿವೆ. ನಾರಾಯಣನು ತನ್ನ ಪತ್ನಿ ಲಕ್ಷ್ಮಿಯನ್ನು ತೊಡೆಯ ಮೇಲೆ ಕೂರಿಸಿಕೊಂಡು ಸಿಂಹಾಸನದಲ್ಲಿರುವ ಚಿತ್ರ, ಇಲ್ಲಿ ವಿಷ್ಣುವಿಗೆ ಚತುರ್ಭುಜಗಳಿದ್ದು ಮೇಲಿನ 2 ಕೈಗಳಲ್ಲಿ ಚಕ್ರ ಮತ್ತು ಶಂಖ ಹಿಡಿದಿರುವನು. ಕೆಳಗಿನ ಬಲಗೈಯಲ್ಲಿ ಅಭಯ ಮುದ್ರೆ, ಎಡಗೈಯನ್ನು ಲಕ್ಷ್ಮಿಯ ತೊಡೆಯ ಮೇಲಿಟ್ಟಿರುವನು. ಇಬ್ಬರು ಆಭರಣ ಧರಿಸಿದ್ದಾರೆ ನಾರಾಯಣನ ಹಣೆಯ ಮೇಲೆ ವೈಷ್ಣವ ಧರ್ಮದ ಚಿಹ್ನೆಯಾದ ನಾಮ ಎದ್ದು ಕಾಣುತ್ತದೆ. ಕೆಳಭಾಗದಲ್ಲಿ ಭುಜದ ಮೇಲೆ ಧನುಸ್ಸು ಏರಿಕೊಂಡು ಕೈ ಮುಗಿಯುತ್ತಿರುವ ಭಕ್ತನಿದ್ದಾನೆ. ಅವನ ಪಾದಗಳನ್ನು ಸ್ವಲ್ಪ ಮುಂದೆ ವಾಲಿದಂತೆ ಬಿಡಿಸಿದ್ದಾರೆ.

ಕೊನೆಯ ಅಂಕಣದಲ್ಲಿ ನಂದಿಯ ಮೇಲೆ ಕುಳಿತ ಶಿವ ಪಾರ್ವತಿಯರ ಚಿತ್ರ, ಸುತ್ತಲು ಸೇವಕರು ಗೋಪಿಕಾ ವಸ್ತ್ರಾಭರಣ, ವೀಣೆ ನುಡಿಸುತ್ತಿರುವ ಭಕ್ತರು ಸ್ತ್ರೀಯರು ಇರುವುದನ್ನು ತಿಳಿಸುತ್ತದೆ.


ಶ್ರೀ ಗೋಪಾಲಕೃಷ್ಣಸ್ವಾಮಿ ದೇವಾಲಯ



ಗೋಪಾಲಸ್ವಾಮಿಯ ಚಿತ್ರ

3ಹರದನಹಳ್ಳಿಯ ಶ್ರೀ ಗೋಸಲ ಮಠ ಅಥವಾ ನಿರಂಜನ ಮಠವನ್ನು ಚಿಕ್ಕದೇವರಾಜ ಒಡೆಯರು ಮಠವನ್ನು ನಾಶ ಮಾಡಿ ಅದೇ ಸ್ಥಳದಲ್ಲಿ ಶ್ರೀಗೋಪಾಲಕೃಷ್ಣಸ್ವಾಮಿ ದೇವಾಲಯ ನಿರ್ಮಿಸಿದ್ದಾರೆ. ಮೈಸೂರು ಪ್ರಾಂತ್ಯವನ್ನು ಆಳುತ್ತಿದ್ದ ಒಡೆಯರ ಆಳ್ವಿಕೆಯ ಕಾಲದಲ್ಲಿ ವಿಶಾಲಾಕ್ಷಿ ಪಂಡಿತನ ಸಹಾಯದಿಂದ ಚಿಕ್ಕದೇವರಾಜ ಒಡೆಯರು ಮಹಾರಾಜರಾಗುತ್ತಾರೆ. ಮಂತ್ರಿಯಾಗಿದ್ದ ವಿಶಾಲಾಕ್ಷಿ ಪಂಡಿತರು ಜೈನದರ್ಮಕ್ಕೆ ಸೇರಿದವನಾಗಿದ್ದು, ಹಾಗೆಯೇ ತಿರುಮಲಾರ್ಯ, ಷಡಕ್ಷರರು ಸಹ ಮಂತ್ರಿಗಳಾಗಿದ್ದು ಇವರು ಚಾಮರಾಜನಗರ ಜಿಲ್ಲೆಯ ಯಳಂದೂರಿನವರಾಗಿದ್ದು ಬ್ರಾಹ್ಮಣ, ಮತ್ತು ವೀರಶೈವ ದರ್ಮಕ್ಕೆ ಸೇರಿದ್ದವರಾಗಿದ್ದರು.

ಚಿಕ್ಕದೇವರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ಹಣದ ಸಮಸ್ಯೆ ಎದುರಾಗಿದ್ದು ರಾಜನಿಗೆ ಹಣದ ಸಂಗ್ರಹಿಸುವ ಸುಲಭದ ಮಾರ್ಗವನ್ನು ವಿಶಾಲಾಕ್ಷ ಪಂಡಿತನು ರಾಜನಿಗೆ



ಹೇಳಿಕೊಟ್ಟನು. ಆ ಮಾರ್ಗವೆಂದರೆ ಮೈಸೂರು ಪ್ರಾಂತ್ಯದ ರೈತರು ಶ್ರೀಮಂತರಾಗಿದ್ದು ವೀರಶೈವ ಧರ್ಮದವರೇ ಹೆಚ್ಚಾಗಿರುವ ರೈತರ ಮೇಲೆ ಹೆಚ್ಚು ತೆರಿಗೆ ವಿಧಿಸುವಂತೆ ಹೇಳಿಕೊಡುತ್ತಾನೆ. ಆಗ ರಾಜನು ಸುಮಾರು 21 ರೀತಿಯ ತೆರಿಗೆಯನ್ನು ರೈತರ ಮೇಲೆ ಹಾಕಿದನು. ಪ್ರಮುಖ ಮುಖ್ಯ ತೆರಿಗೆಗಳೆಂದರೆ ಜೋಳದ ಕಡ್ಡಿ, ಬಾಗಿಲು, ನೇಗಿಲು, ಮದುವೆ, ಜನನ, ಮರಣ, ದನಕರು ಇನ್ನು ಮುಂತಾದವಾಗಿದ್ದವು. ಪ್ರಾರಂಭದಲ್ಲಿ ಹೆಚ್ಚು ತೆರಿಗೆಯನ್ನು ಕೊಡುತ್ತಿದ್ದ ರೈತರು ಕ್ರಮೇಣ ಕೃಷಿ ಉಪಯೋಗಿ ವಸ್ತುಗಳನ್ನು ಕೊಂಡೊಯ್ದು ಕೆರೆಗೆ ಹಾರಿ ಬಿದ್ದು ಮರಣ ಹೊಂದಿದರು.

ಮನೆ ಆಸ್ತಿಯನ್ನು ಕಳೆದುಕೊಂಡ ವಿವಿಧ ವರ್ಗದವರು ಆಹಾರ ಮತ್ತು ವಾಸಕ್ಕಾಗಿ ವೀರಶೈವರ ಮಠಗಳಿಗೆ ಹೋಗಿ ಸೇರಿಕೊಳ್ಳುತ್ತಾರೆ. ಮತ್ತೊಮ್ಮೆ ರಾಜರಿಗೆ ಮಂತ್ರಿಯಾದ ವಿಶಾಲಾಕ್ಷಿ ಪಂಡಿತ ರೈತರ ಸಂಪತ್ತು ಮಠದಲ್ಲಿದೆ ಎಂದು ಹೇಳಿದಾಗ ರಾಜನು ಮಠಗಳ ಮೇಲೆ ಹೆಚ್ಚು ತೆರಿಗೆ ವಿಧಿಸಿದನು.

ರಾಜನ ಈ ಸಾರ್ವಬೌಮತ್ವವನ್ನು ತಡೆದು ನಾವು ರಾಜ್ಯಾಡಳಿತ ನಡೆಸುವುದು ಸರಿ ಎಂದು ತೀರ್ಮಾನಿಸಲು ನಂಜನಗೂಡು ತಾಲ್ಲೂಕು ಕವಲಂದೆ ಮತ್ತು ತಾಯೂರು ಗ್ರಾಮದಲ್ಲಿ ರೈತರೆಲ್ಲರು ಸಭೆ ಸೇರಿದರು. ಈ ವಿಷಯ ತಿಳಿದ ಮಂತ್ರಿ ಪಂಡಿತನು ಮಠದ ಸ್ವಾಮೀಜಿ, ರೈತರ ಪರವಾಗಿ ಬಿಟ್ಟರೆ ಸಮಸ್ಯೆಂಯಾಗುತ್ತದೆ ಎಂದು ತಿಳಿದು. ಒಂದು ಸುತ್ತೋಲೆ ಹೊರಡಿಸಿದನು. ನಿಮ್ಮ ಸಮಸ್ಯೆಗಳನ್ನು ಬಗೆಹರಿಸಲು ಮಹಾರಾಜರೇ ನಿಮ್ಮನ್ನು ನೋಡಲು ಬರುವರು ಎಂದು ಕರೆ ನೀಡಿದನು. ಸುತ್ತೋಲೆಯ ಆದೇಶದಂತೆ ನಂಜನಗೂಡು ಸಮೀಪದ ದಳವಾಯಿ ತೋಟ ಅಥವಾ ವಿದ್ಯಾಪೀಠದ ಮುಂಭಾಗ (ಸಂತೇಮಾಳ)ದಲ್ಲಿ ಸಭೆ ಸೇರುತ್ತಾರೆ. ಪಂಡಿತನ ಉದ್ದೇಶ ಚಳುವಳಿಯ ನಾಯಕತ್ವ ವಹಿಸಿಕೊಂಡಿದ್ದ ಸ್ವಾಮಿಜಿಗಳನ್ನು ಕೊಲೆ ಮಾಡುವುದು ಮತ್ತು ಅಲ್ಲಿ ಪಾಲ್ಗೊಂಡಿದ್ದ ರೈತರನ್ನು ಕೊಲೆ ಮಾಡುವುದು. ಇದನ್ನು ತಿಳಿದ ರೈತರೆಲ್ಲರೂ ಮಂತ್ರಿಯಾದ ಪಂಡಿತನನ್ನು ಕೊಲೆ ಮಾಡಿದರು ನಂತರ ಬ್ರಾಹ್ಮಣ ಸಮುದಾಯದ ತಿರುಮಲಾರ್ಯ ಚಿಕ್ಕದೇವರಾಜ ಒಡೆಯರಿಗೆ ಮಂತ್ರಿಯಾಗಿ ಬಂದ ನಂತರ ಬ್ರಾಹ್ಮಣರ ಪ್ರಾಬಲ್ಯ ಹೆಚ್ಚಾಗಿ ಗೋಸಲು ಮಠವನ್ನು ಕೆಡದು ಅದರ ಕಲ್ಲುಗಳಿಂದ ಗೋಪಾಲಕೃಷ್ಣಸ್ವಾಮಿ ದೇವಾಲಯವನ್ನು

ನಿರ್ಮಿಸುತ್ತಾರೆ. ಚಿಕ್ಕದೇವರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ಗೋಪಾಲಸ್ವಾಮಿ ದೇವಾಲಯವನ್ನು ಕ್ರಿ.ಶ. 1684–1704ರ ಅವಧಿಯಲ್ಲಿ ನಿರ್ಮಿಸಲಾಯಿತು. ಗೋಪಾಲಕೃಷ್ಣ ದೇವಾಲಯದಲ್ಲಿ ವಿಶಿಷ್ಟವಾದ ಪೂಜೆಯನ್ನು ಗೋಕುಲಾಷ್ಟಮಿ ಹಬ್ಬದ ದಿನದಂದು ನಡೆಸಲಾಗುವುದು. ಈ ಉತ್ಸವದ ವಿಶೇಷತೆ ಎಂದರೆ ಒಂದು ಹಗ್ಗಕ್ಕೆ ಒಂದು ತೆಂಗಿನಕಾಯಿ ಕಟ್ಟಿ ಆ ಹಗ್ಗವನ್ನು ಒಬ್ಬ ವ್ಯಕ್ತಿ ತಿರುಗುಸುತ್ತಿದ್ದು ಅಲ್ಲಿಗೆ ಬರುವ ಭಕ್ತಾದಿಗಳು ದೊಣ್ಣೆಯಿಂದ ಕಾಯನ್ನು ಹೊಡೆಯುತ್ತಾರೆ. ನಂತರ ಪೂಜೆ ಮಾಡಿ ಉತ್ಸವ ಮೂರ್ತಿಯನ್ನು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾರೆ. ಮೆರವಣಿಗೆ ಮುಗಿದ ನಂತರ ಅಲ್ಲಿ ಸೇರಿದ ವಿವಿಧ ಗ್ರಾಮದ ಭಕ್ತಾದಿಗಳಿಗೆ ದೇವರ ಪ್ರಸಾದವನ್ನು ಹಂಚುತ್ತಿದ್ದರು. ಈ ಪದ್ದತಿ ಇಂದು ಸಹ ರೂಢಿಯಲ್ಲಿರುವುದನ್ನು ಕಾಣುತ್ತೇವೆ.



ಗೋಪಾಲಕೃಷ್ಣಸ್ವಾಮಿ ದೇವಾಲಯದ ಸುತ್ತಲಿನ ಹಜಾರದ ಚಿತ್ರ



ಹರದನಹಳ್ಳಿಯ ಇತರ ದೇವಾಲಯಗಳು:

ಮಂಟೇಸ್ವಾಮಿ ದೇವಾಲಯ:

ಹರದನಹಳ್ಳಿಯ ಇತರ ಪ್ರಮುಖ ದೇವಾಲಯಗಳಲ್ಲಿ ಮಂಟೇಸ್ವಾಮಿ ದೇವಾಲಯವು ಒಂದು. ಇಲ್ಲಿಯ ಜನರು ಸ್ವಾತಂತ್ರ್ಯ ಪೂರ್ವದಿಂದಲೂ ಭಕ್ತಿಯಿಂದ ಮಂಟೇಸ್ವಾಮಿಯ ಕೊಂಡೋತ್ಸವವನ್ನು ಆಚರಿಸುತ್ತಾರೆ. ಈ ಕೊಂಡೋತ್ಸವದಲ್ಲಿ 20 ಅಡಿ ಉದ್ದದ ಬೆಂಕಿಯ ಕೆಂಡದ ಮೇಲೆ ಭಕ್ತರು ಕಾಲ್ನಡಿಯಲ್ಲಿ ಹಾಯುತ್ತಾರೆ.



ಮಂಟೇಸ್ವಾಮಿ ದೇವಾಲಯದ ಚಿತ್ರ

ಒಮ್ಮೆ ಮಂಟೇಸ್ವಾಮಿ ಕೊಂಡೋತ್ಸವ ಬಹಳ ವಿಜೃಂಭಣೆಯಿಂದ ನಡೆಯುತ್ತಿದ್ದು ಅಲ್ಲಿಗೆ ಬಂದಿದ್ದ ಜನರು ಕೊಂಡವನ್ನು ನೋಡುತ್ತಿದ್ದಂತೆ ಬೆಂಕಿಯ ಕೆಂಡದ ಮೇಲೆ ಯಾರೂ ನಡೆದು ಹೋದಂತೆ ಗೋಚರಿಸಿದ್ದು. ಆ ಕೆಂಡದ ಮೇಲೆ ಹುಲಿಯ ಕಾಲಿನ ಪಾದದ ಗುರುತು ಕಾಣಿಸಿಕೊಂಡಿತು. ಇದನ್ನು ನೋಡಿದ ಜನರು ಎದುರಿಕೊಂಡು ಮನೆಗೆ



ಹಿಂದಿರುಗಿದರು. ಅಲ್ಲಿಯ ಭಕ್ತನೊಬ್ಬನಿಗೆ ಮೈಮೇಲೆ ದೇವರು ಬಂದಾಗ ಅಲ್ಲಿಯ ಜನರಿಗೆ ನಾವು ಶ್ರದ್ದೆಯಿಂದ ಸಂಪ್ರದಾಯವಾಗಿ ಆಚರಿಸಿಲ್ಲ ಆದ್ದರಿಂದ ದೇವರಿಗೆ ಕೋಪ ಬಂದುದರ ಪರಿಣಾಮ ಈ ರೀತಿಯಾಗಿದೆ ಎಂದನು. ಅಂದಿನಿಂದ ಇಲ್ಲಿಯವರೆಗೆ ಮಂಟೇಸ್ವಾಮಿ ಕೊಂಡೋತ್ಸವ ನಡೆದಿಲ್ಲ ಎಂದು ಈ ಊರಿನ ಜನರ ಮಾತಿನಲ್ಲಿ ಹರಿದಾಡುತ್ತದೆ.

ಹನುಮಂತನ ದೇವಾಲಯ:


ಹರದನಹಳ್ಳಿಯ ಮತ್ತೊಂದು ಪ್ರಮುಖ ದೇವಾಲಯವೆಂದರೆ ಹನುಮಂತನ ದೇವಾಲಯ ಈ ದೇವಾಲಯಕ್ಕೆ ಹಲವು ವರ್ಷಗಳ ಇತಿಹಾಸವಿದ್ದು, [4]ಈ ದೇವಾಲಯದಲ್ಲಿ ಯಾವುದೇ ಗುಡಿಗೋಪುರವಿಲ್ಲದೇ 10 ಅಡಿ ಎತ್ತರದ ಏಕ ಶಿಲಾ ಹನುಮಂತನ ಮೂರ್ತಿಯಿದ್ದು ಹನುಮಂತನ ಮೂರ್ತಿಯ ಮುಂದೆ ಒಂದು ದೇವಾಲವನ್ನು ನಿರ್ಮಿಸಿದ್ದಾರೆ ಈ ದೇವಾಲಯದ ಮುಂದೆ ಊರಿನ ಹಾಗೆ ಅದರ ಸುತ್ತಮುತ್ತಲಿನ ಗ್ರಾಮಸ್ಥರು ಕುಲಸ್ತರು, ಜನ ಸಮುದಾಯ, ದೊಣ್ಣೆ ವರಸೆಗಾರರು, ಕತ್ತಿವರಸೆಗರರು, ತಮ್ಮ ಶಕ್ತಿ ಪ್ರದರ್ಶನ ತೋರಿಸುತ್ತಿದ್ದರು[4].

ಹರದನಹಳ್ಳಿಯ ಹಿರಿಯರಲ್ಲಿ ಕೆಲವರು ಈಗಲು ಮೈಸೂರಿನಲ್ಲಿ ನಡೆಯುವ ಕುಸ್ತಿ ಪಂದ್ಯಾವಳಿಯಲ್ಲಿ ಹರದನಹಳ್ಳಿ ಗರಡಿಮನೆ ಎಂದು ಸಂಬೋಧಿಸುತ್ತಾರೆ. ಏಕೆಂದರೆ ಮೈಸೂರು ರಾಜರ ಆಳ್ವಿಕೆ ಕಾಲದಲ್ಲಿ ಈ ಗ್ರಾಮ ಅವರ ಅದೀನಕ್ಕೆ ಒಳಗಾಗಿದ್ದು, ಮೈಸೂರಿನ ನಡೆಯುವ ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿ ಬಹುಮಾನವಾಗಿ ಪಡೆದಿರುವ ದೋಣಿಕಲ್ಲು ತಂದಿರುವುದೇ ಇದಕ್ಕೆ ಸಾಕ್ಷಿ.

ಹರದನಹಳ್ಳಿಯಲ್ಲಿ ಮಂಗಗಳು ಹೆಚ್ಚಾಗಿದ್ದು ಜನ ಊರಿನ ಕೆರೆಯ ಏರಿಯ ಮೇಲೆ, ಬಾವಿಯ ಮನೆಗಳ ಮೇಲೆ ತಿರುಗಾಡುತ್ತಿದ್ದವು, ಯಾರಿಗೂ ತೊಂದರೆ ಮಾಡುತ್ತಿರಲಿಲ್ಲ. ಆದರೆ ಇದ್ದಕ್ಕಿದ್ದಂತೆ ಮಂಗಗಳ ಮರಣದಿಂದಾಗಿ ಆಗ ಅಲ್ಲಿಯ ಅರ್ಚಕರನ್ನು ಕೇಳಿದಾಗ ಅವರು ಊರಿನಲ್ಲಿ ಹನುಮಂತನ ದೇವಾಲಯ ನಿರ್ಮಿಸಿದರೆ ಮುಂದೆ ಆಗುವ ಅನಾಹುತಗಳಿಗೆ ತಪ್ಪುತ್ತವೆ ಎಂದು ಹೇಳಿದಾಗ ಕೂಡಲೇ ಊರಿನ ವಿವಿಧ ಜನಾಂಗದ


ಮುಖಂಡರು ಸೇರಿ ಈ ಹನುಮಂತನ ದೇವಾಲಯವನ್ನು ನಿರ್ಮಿಸಿದರೆಂದು ಜನರು ಕಥೆಯ ರೂಪದಲ್ಲಿ ಈ ದೇವಸ್ಥಾನದ ಬಗ್ಗೆ ಹೇಳುತ್ತಾರೆ.

ಮಾರಮ್ಮನ ದೇವಾಲಯ:



ಮಾರಮ್ಮನ ದೇವಾಲಯದ ಚಿತ್ರ

ಹರದನಹಳ್ಳಿಯ ಊರಿನ ಮದ್ಯದಲ್ಲಿ ಗೋಪಾಲಸ್ವಾಮಿ ದೇವಾಲಯಕ್ಕೆ ಹೋಗುವ ಆಸುಪಾಸಿನಲ್ಲಿ ಮಾರಮ್ಮನ ದೇವಾಲಯ ಕಾಣುತ್ತದೆ ಇದು ನಿಮಾಣಗೊಂಡು ಕೇವಲ 30 ದಶಕಗಳಾಗಿವೆ. 1970 ಸೆಪ್ಟೆಂಬರ್ 26ರಂದು ಊರಿನ ಜನತೆ ಈ ದೇವಾಲಯವನ್ನು ನಿರ್ಮಾಣ ಮಾಡಿದ್ದಾರೆ. ದೇವಾಲಯ ಆಧುನಿಕವಾಗಿದ್ದು ಈ ಮಾರಮ್ಮ ಹರದನಹಳ್ಳಿಯ ಗ್ರಾಮದೇವತೆ ಎಂದೇ ಪ್ರಸಿದ್ದಳಾಗಿದ್ದಾಳೆ. ಈ ದೇವಾಲಯದಲ್ಲಿ ಮಾರಮ್ಮನ 2 ವಿಗ್ರಹಗಳಿದ್ದು ಎಡಭಾಗದಲ್ಲಿ ದಂಡುಮಾರಮ್ಮ ಮತ್ತು ಬಲಭಾಗದಲ್ಲಿ ಮುಡುಕು ಮಾರಮ್ಮನ ವಿಗ್ರಹಗಳಿವೆ, ಮುಡುಕು ಮಾರಮ್ಮನೇ ಹರದನಹಳ್ಳಿಯ ಗ್ರಾಮದೇವತೆ



ಮುದುಕ ಮಾರಮ್ಮನ ಚಿತ್ರ



ಈ ಗ್ರಾಮದ ಸುತ್ತಲಿನ ಅಂಕಶೆಟ್ಟಿಪುರ, ತಾವರೆಕಟ್ಟೆಮೋಳೆ, ಬ್ಯಾಡಮೂಡ್ಲು, ಬಂಡಿಗೆರೆ ಗ್ರಾಮದ ಜನರು ಈ ದೇವತೆ ಪ್ರಭಾವಕ್ಕೆ ಒಳಗಾಗಿದ್ದಾರೆ. ಗ್ರಾಮದಲ್ಲಿ ಕಾಯಲೆಗಳು ಉಂಟಾದರೆ ಸಾಂಕ್ರಾಮಿಕ ರೋಗಗಳು ಬಂದರೆ, ಮಕ್ಕಳಿಗೆ ರೋಗರುಜಿನೆಗಳಾದರೆ ಈ ಗ್ರಾಮ ದೇವತೆಗೆ ಬಂದು ಪೂಜೆ ಸಲ್ಲಸಿದರೆ ಗುಣವಾಗುತ್ತದೆ ಎಂಬ ವಾಡಿಕೆಯಲ್ಲಿ ಈ ಗ್ರಾಮದೇವತೆಗೆ ಪೂಜೆ, ಪುರಸ್ಕಾರಗಳನ್ನು ಸಲ್ಲಿಸುತ್ತಾರೆ. ಈ ದೇವಾಲಯದ ತಮಡಿ ಇಲ್ಲಿನ ಕೆಂಪನ್ನನಾಯ್ಕ ಈ ಹೇಳಿಕೆಯನ್ನು ನೀಡಿದ್ದಾರೆ. ಯುಗಾದಿ ಹಬ್ಬದ ವೇಳೆಯಲ್ಲಿ ಇಲ್ಲಿ ಮಾರಮ್ಮನ ಹಬ್ಬವನ್ನು ವಿಜೃಂಬಣೆಯಿಂದ ಮಾಡುವರು ಹಾಗೂ ಈ ದೇವತೆಗೆ ಕುರಿ, ಕೋಳಿಗಳನ್ನು ಬಲಿ ನೀಡಿ ಅರಕೆ ತೀರಿಸಿಕೊಳ್ಳುವರು.



ಕಾಳಮ್ಮನ ದೇವಸ್ಥಾನ

ಹರದನಹಳ್ಳಿಯಲ್ಲಿರುವ ಒಂದು ಪುರಾತನ ಕಾಲದ ದೇವಾಲಯವೆಂದರೆ ಕಾಳಮ್ಮನ ದೇವಸ್ಥಾನ. ಈ ದೇವಾಲಯವನ್ನು ಈ ಊರಿನ ಉಪ್ಪಾರ ಜನಾಂಗದವರು ಸ್ಥಾಪಿಸಿದ್ದರು ಎಂದು ಹೇಳಲಾಗಿದೆ. ಪ್ರತಿವರ್ಷವು ಉಪ್ಪಾರ ಸಮುದಾಯದವರು ಗ್ರಾಮ ದೇವತೆ ಕಾಳಮ್ಮನ ಜಾತ್ರೆಯನ್ನು ವಿಜೃಂಭನೆಯಿಂದ ಮಾಡುತ್ತಿದ್ದಾರೆ.

ಕಾಲಕ್ರಮೇಣ ತನ್ನದೇ ಕಾರಣದಿಂದ ಈ ದೇವಸ್ಥಾನ ಗುಡಿ ತಿಪ್ಪೆಗುಂಡಿಯಾಗಿ ಉಪಯೋಗಕ್ಕೆ ಬಾರದೆ ಖಾಲಿ ಬಿದ್ದಿತು. ಹಾಗೆ ಹರದನಹಳ್ಳಿಯಲ್ಲಿ ವಾಸಿಸುತ್ತಿದ್ದ ಉಪ್ಪಾರ ಜನಾಂಗದವರಿಗೆ ಕಾಲರಾ ರೋಗ ಕಾಣಿಸಿಕೊಂಡಾಗ ಹರದನಹಳ್ಳಿಯಲ್ಲಿದ್ದ ವಿವಿಧ ಕೋಮಿನ ನಾಯಕರು, ಯಜಮಾನರು, ಪಟೇಲರು, ಶ್ಯಾನಭೋಗರು, ಗೌಡರು ಸೇರಿಕೊಂಡು ರೋಗದಿಂದ ನರಳುತ್ತಿದ್ದ ಉಪ್ಪಾರರನ್ನು ಊರಿನ ಹೊರಭಾಗದಲ್ಲಿ ಗುಡಿಸಲು ಹಾಕಿ ಅವರಿಗೆ ಸಹಾಯ ಮಾಡಿದರು. ಅಲ್ಲದೆ ನಾಯಕ ಜನಾಂಗದವರು ನ್ಯಾಯ ಪಂಚಾಯಿತಿ ಸೇರಿ ಕಾಳಮ್ಮನ ದೇವಸ್ಥಾನದ ಜೀರ್ಣೋದ್ಧಾರ ಮಾಡಲು ಸಿದ್ದತೆ ನಡೆಸಿದಾಗ ಆ ಊರಿನ ನಾಯಕ ಜನಾಂಗದ ಯಜಮಾನ ವೆಂಕಟನಾಯಕ ಹಣ ಸಹಾಯ ಮಾಡಿ ಇದನ್ನು 1982 ಮೇ 21ರಂದು ಜೀರ್ಣೋದ್ದಾರ ಮಾಡಿದರೆಂದು ತಿಳಿದುಬರುತ್ತದೆ.

ಬಸವನ ಕಂಬ



ಹರದನಹಳ್ಳಿಯ ವಿಶಿಷ್ಟವಾದ ದೇವಾಲಯಗಳಲ್ಲಿ ಏಕಶಿಲಾ ಬಸವನಕಂಬವು ಒಂದು. ಇದನ್ನು ದೊರೆಬಸಪ್ಪ ಎಂದು ಸಹ ಕರೆಯುವರು. ಈ ಬಸವನ ಕಂಬವು 15 ಅಡಿ ಎತ್ತರವಿದ್ದು ಕಂಬದ ಮೇಲ್ಭಾಗದಲ್ಲಿ ಕಲ್ಲಿನ ಬಸವನ ವಿಗ್ರಹವಿದೆ. ಹರದನಹಳ್ಳಿಯಲ್ಲಿ ತೊಂದರೆ ಕಂಡುಬಂದಾಗ, ಸರಿಯಾದ ಮಳೆ ಊರಿಗೆ ಬರದಿದ್ದಾಗ ಸಂಪ್ರದಾಯಕ ರೀತಿಯಲ್ಲಿ ಹರದನಹಳ್ಳಿಯ ಎಲ್ಲಾ ವರ್ಗದ ಮುಖಂಡರು, ಜನಾಂಗದವರು ಸೇರಿಕೊಂಡು ಸಾಮೂಹಿಕವಾಗಿ 101 ಬಿಂದಿಗೆ ನೀರಿಗೆ 101 ನಿಂಬೆ ಹಣ್ಣಿನ ರಸವನ್ನು ಮಿಶ್ರಣ ಮಾಡಿ ಬಸವನ ವಿಗ್ರಹಕ್ಕೆ ಸುರಿದು ಬಸವನನ್ನು ತೊಳೆಯುತ್ತಾರೆ. ನಂತರ ಮರದ ಬಸಪ್ಪನನ್ನು ತಲೆಯ ಮೇಲೆ ಹೊತ್ತುಕೊಂಡು "ಹುಯ್ಯೋ ಹುಯ್ಯೋ ಮಳೆರಾಯ ಬಾವಿ ಕಟ್ಟೇಲಿ ನೀರಿಲ್ಲ" ಎಂದು ಕೂಗುತ್ತಾ ಊರಿನ ಎಲ್ಲಾ ಬೀದಿಗಳಲ್ಲಿ ಮೆರವಣಿಗೆ ಹೊರಡುತ್ತಾರೆ. ಊರಿನ ಎಲ್ಲಾ ಜನರು ಮನೆಯವರು ಬಸವನಿಗೆ ಪೂಜೆ ಮಾಡಿ ಬಸವನನ್ನು ಹೊತ್ತ



ವ್ಯಕ್ತಿಗೆ ತಮ್ಮ ಮನೆ ಪಾತ್ರೆಯ ಮೂಲಕ ನೀರನ್ನು ಎರಚುವುದು ಇದರ ವಿಶೇಷ. ಈ ವಿಶೇಷ ಪೂಜೆಯಾದ ನಂತರ ಮಳೆ ಬರುತ್ತಿದ್ದು ಈ ಊರಿಗೆ ಯವುದೇ ತೊಂದರೆಯಾಗುತ್ತಿರಲಿಲ್ಲ. ದೇವರ ಮೆರವಣಿಗೆ ನಂತರ ಬೆಲ್ಲದ ಅನ್ನವನ್ನು ಮಾಡಿಕೊಂಡು ಪ್ರಸಾದದ ರೂಪದಲ್ಲಿ ಸೇವನೆ ಮಾಡುತ್ತಿದ್ದರು.

5 ಗೋಸಲ ಮಠದ ಪರಂಪರೆ

ಕರ್ನಾಟಕದಲ್ಲಿ ಸುಮಾರು 12ನೇ ಶತಮಾನದಿಂದಲೂ ವೀರಶೈವ ಪರಂಪರೆ ಅಥವಾ ವೀರಶೈವ ಧರ್ಮ ಪ್ರಬಲವಾಗಿತ್ತು. ಇಡೀ ಕರ್ನಾಟಕಾದ್ಯಾಂತ ವೀರಶೈವ ಧರ್ಮ ಹೆಚ್ಚು ಜನರನ್ನು ಆಕರ್ಷಿಸಿತು. ಶೈಕ್ಷಣಿಕವಾಗಿ, ಧಾರ್ಮಿಕವಾಗಿ ರಾಜಕೀಯವಾಗಿ ಈ ಧರ್ಮ ಬಹಳ ಉನ್ನತಿಯನ್ನು ಪಡೆದಿತ್ತು. ಕರ್ನಾಟಕದ ದಕ್ಷಿಣ ಭಾಗದಲ್ಲಿರುವ ಚಾಮರಾಜನಗರ ಜಿಲ್ಲೆ ಕೂಡ ಇದಕ್ಕೆ ಹೊರತಾಗಿರಲಿಲ್ಲ. ಈ ಭಾಗದಲ್ಲಿ ನೋಡುವುದಾದರೆ ಚಾಮರಾಜನಗರ ಮತ್ತು ಅದರ ಸುತ್ತಮುತ್ತಲಿನ ಗ್ರಾಮದಲ್ಲಿ ವೀರಶೈವ ಪಂಥದ ಪ್ರಭಾವಕ್ಕೆ ಒಳಗಾಗಿದ್ದನ್ನು ಕಾಣಬಹುದು. ಇದಕ್ಕೆ ಕಾರಣ ಜಿಲ್ಲೆಯ ವ್ಯಾಪ್ತಿಯಲ್ಲಿ ಶೈವ ದೇವಾಲಯಗಳು ಹೆಚ್ಚು ನಿರ್ಮಾಣವಾಗಿರುವುದರಿಂದ ತಿಳಿದುಬರುತ್ತದೆ. ಚಾಮರಾಜನಗರ ಜಿಲ್ಲೆಯ ಜನಸಂಖ್ಯೆಯಲ್ಲಿ ವೀರಶೈವ ಧರ್ಮವೇ ಮೊದಲನೇ ಸ್ಥಾನ ಪಡೆದುಕೊಂಡಿದೆ. 11ನೇ ಶತಮಾನದಿಂದ 18ನೇ ಶತಮಾನದವರೆಗೆ ಚಾಮರಾಜನಗರ ವ್ಯಾಪ್ತಿಗೆ ಸೇರಿದ ಪ್ರದೇಶಗಳಲ್ಲಿ ಶಿವನ ದೇವಾಲಯ, ಶಿವನಿಗೆ ಸಂಬಂಧಿಸಿದ ಸ್ಮಾರಕಗಳು ಅಥವಾ ಶೈವ ಸ್ಮಾರಕಗಳು ಶೈವ ಶಿಕ್ಷಣ ಕೇಂದ್ರಗಳು ನಿರ್ಮಾಣವಾಗಿರುವುದೇ ಇದಕ್ಕೆ ಸಾಕ್ಷಿ. ಚಾಮರಾಜನಗರ ಜಿಲ್ಲೆಯ ಸುಪ್ರಸಿದ್ದ ಚಾಮರಾಜೇಶ್ವರ ದೇವಾಲಯ, ವೀರಭದ್ರೇಶ್ವರ ದೇವಾಲಯ, ಭುಜಂಗೇಶ್ವರ ದೇವಾಲಯ, ಮಲೈ ಮಹದೇಶ್ವರ ಬೆಟ್ಟದ ಮಹದೇಶ್ವರ ಸ್ವಾಮಿ ದೇವಾಲಯ, ಹರದನಹಳ್ಳಿಯ ದಿವ್ಯಲಿಂಗೇಶ್ವರ ದೇವಾಲಯ, ಯಳಂದೂರಿನ ಶಿವನ ದೇವಾಲಯ, ಷಡಕ್ಷರ ಪೀಠ ಇದಕ್ಕೆ ಪ್ರಮುಖ ಉದಾಹಣೆಯಾಗಿದೆ.

ವೀರಶೈವ ಧರ್ಮದ ನಂತರ ಬಹಳ ಉನ್ನತಿ ಏರಿದ್ದು, ವೈಷ್ಣವ ಪಂಥ ವೀರಶೈವ ಧರ್ಮ ಮತ್ತು ವೈಷ್ಣವ ಧರ್ಮದ ನಡುವಿನ ಘರ್ಷಣೆಯಿಂದ ಶೈವ ಮಠ, ದೇವಾಲಯಗಳನ್ನು ನಾಶಗೊಳಿಸಿ ವೈಷ್ಣವ ದೇವಾಲಯಗಳ ಸ್ಥಾಪನೆ ಮಾಡಿರುವುದು ಪುನಃಶ್ಚೇತನಗೊಂಡಿದ್ದು ಇಡೀ ಕರ್ನಾಟಕಾದ್ಯಂತ ಸಂಭವಿಸಿದ ಸಂಗತಿಯ ಇತಿಹಾಸ ಇದಕ್ಕೆ ಇಲ್ಲಿನ ಗೋಸಲ ಮಠ ಕೂಡ ಒಂದು ಉದಾಹಣೆಯಾಗಿದೆ. s15ನೇ ಶತಮಾನದಲ್ಲಿ

[illegible]

ತೋಂಟದ ಸಿದ್ದಲಿಂಗೇಶ್ವರರು ಈ ಗೋಸಲ ಮಠವನ್ನು ಸ್ಥಾಪಿಸಿದರು.[5] ಆದರೆ ಇವರಿಗೂ ಮೊದಲೇ ಈ ಗೋಸಲ ಪೀಠ ಅಥವಾ ಮಠ ನಡೆದು ಬರುತ್ತಿದ್ದು ತೋಂಟದ ಸಿದ್ದಲಿಂಗೇಶ್ವರರು ಇದಕ್ಕೆ ಬಹಳವಾಗಿ ಶ್ರಮಿಸಿದ್ದು, ಉನ್ನತಿಕರಿಸಿದ್ದಕ್ಕಾಗಿ ವೈಜ್ಞಾನಿಕ ರೀತಿಯಲ್ಲಿ ಇವರನ್ನು ನಾವು ಗೋಸಲ ಮಠದ ಸ್ಥಾಪಕರೆಂದು ಗುರ್ತಿಸುತ್ತೇವೆ. ಈಗ ಇರುವ ಗೋಪಾಲ ಸ್ವಾಮಿ ದೇವಾಲಯವಿದ್ದ ಪ್ರದೇಶದಲ್ಲಿ ಗೋಸಲ ಮಠ ನಿರ್ಮಾಣವಾಗಿತ್ತು. ಶೈವ ಮತ್ತು ವೈಷ್ಣವರ ಧಾರ್ಮಿಕ ಘರ್ಷಣೆಯಲ್ಲಿ ಪ್ರಬಲರಾದ ವೈಷ್ಣವರು ಈ ಗೋಸಲ ಮಠವನ್ನು ಕೆಡವಿ ಅದೇ ಜಾಗದಲ್ಲಿ ಗೋಪಾಲಸ್ವಾಮಿ ದೇವಾಲಯವನ್ನು ನಿರ್ಮಾಣ ಮಾಡಿದರು.

ಗೋಸಲ ಮಠದ ಪರಂಪರೆಯನ್ನು ನಾವು ಈ ಕೆಳಗಿನಂತೆ ತಿಳಿಯಬಹುದು.

ಕರ್ನಾಟಕ ದಕ್ಷಿಣಭಾಗದಲ್ಲಿ ವೀರಶೈವ ಧರ್ಮವನ್ನು ಪುನರುಜ್ಜೀವನಗೊಳಿಸಿದ ಕೀರ್ತಿ ಚಾಮರಾಜನಗರ ಜಿಲ್ಲೆ ಹರದನಹಳ್ಳಿಗೆ ಸಲ್ಲುತ್ತದೆ. ವೀರಶೈವರ ಪುಣ್ಯಕ್ಷೇತ್ರಗಳಾದ ಸುತ್ತೂರು, ಸಿದ್ದಗಂಗಾ, ಮಲೈಮಹದೇಶ್ವರ ಬೆಟ್ಟ ಹೇಗೋ ಆಗೆಯೇ ಹರದನಹಳ್ಳಿಗೆ ಗೋಸಲ ಮಠವು ಸಹ ವೀರಶೈವರ ಪ್ರಸಿದ್ದ ಪುಣ್ಯಕ್ಷೇತ್ರವಾಗಿದೆ.

12ನೇ ಶತಮಾನದ ಸಾಮಾಜಿಕ, ಧಾರ್ಮಿಕ ಚಳುವಳಿಯ ಹರಿಕಾರ ಬಸವಣ್ಣನವರು ಮತ್ತು ಅವರ ಶಿಷ್ಯರು ದೇಶಾದ್ಯಂತ ಮನೆಮನೆಗಳಿಗೆ ಶರಣ ಸಂದೇಶ ನೀಡಿ ಆಚಾರ ವಿಚಾರಗಳನ್ನು ಖಂಡಿಸಿದರು. ಧಾರ್ಮಿಕ ಹಿನ್ನಲೆಯಿಂದ ವೀರಶೈವ ಧರ್ಮವು ಶಾಶ್ವತವಾಗಿ ಉಳಿಯುವಂತೆ ಬುನಾದಿ ಹಾಕಿದವರು ಬಸವಣ್ಣನವರು. 15ನೇ ಶತಮಾನದ ಪ್ರಾರಂಭದಲ್ಲಿ ದೇಶದಲ್ಲಿದ್ದ ಅರಾಜಕತೆಯ ವ್ಯವಸ್ಥೆಯ ವಿರುದ್ದ ರಾಜರು ತಮ್ಮ ಧರ್ಮವನ್ನು ನೆಲೆಸುವಂತೆ ಪ್ರೇರೇಪಿಸುತ್ತಿದ್ದ ಕಾಲದಲ್ಲಿ ವೀರಶೈವ ಧರ್ಮವನ್ನು ಪುನರುಜ್ಜೀವನಗೊಳಿಸಲು ಉದಯಿಸಿದ ಜ್ಞಾನಜ್ಯೋತಿ, ಮಹಾನ್ ಕ್ರಾಂತಿಯನ್ನು ಮಾಡಿದ ಕೀರ್ತಿ ಹರನದಹಳ್ಳಿಯ ಶ್ರೀತೋಂಟದ ಸಿದ್ದಲಿಂಗೇಶ್ವರಿಗೆ ಸಲ್ಲುತ್ತದೆ.

ಧಾರ್ಮಿಕ ಕೃತಿಗಳನ್ನು ಅವಲೋಕಿಸಿದರೆ ಬಸವಣ್ಣನವರನ್ನು ಕುರಿತು ಬರೆದ ಗ್ರಂಥಗಳನ್ನು ಹೊರತು ಪಡಿಸಿಸದರೆ ನಂತರದ ಸ್ಥಾನವನ್ನು ಧಾರ್ಮಿಕ ಮಹಾ ಕ್ರಾಂತಿಯ

ಪ್ರಭು ತೋಂಟದ ಸಿದ್ದಲಿಂಗೇಶ್ವರರು ಪಡೆದುಕೊಂಡಿದ್ದಾರೆ. ಹರದನಹಳ್ಳಿ ಐತಿಹಾಸಿಕ ಕ್ಷೇತ್ರವಾಗಿದ್ದರಿಂದ ಇಲ್ಲಿನ ಹಿರಿಮೆಗಳನ್ನು ಅನೇಕ ಕವಿಗಳು ತಮ್ಮ ಕಾವ್ಯಗಳಲ್ಲಿ ಬರೆದಿದ್ದಾರೆ.

ಶ್ರೀ ಗೋಸಲ ಪೀಠವು ಸಾವಿರಾರು ವರ್ಷಗಳ ಗುರು ಪರಂಪರೆಯನ್ನು ಹೊಂದಿದ್ದು ವೀರಶೈವ ಧರ್ಮವನ್ನು ದೇಶಾದ್ಯಂತ ಪ್ರಚಾರ ಮಾಡಿದ ಗೋಸಲ ಪೀಠದಲ್ಲಿ 16 ಜನ ಶಿವಶರಣರು ಅಧ್ಯಕ್ಷರಾಗಿದ್ದು, ಸಿದ್ದಲಿಂಗೇಶ್ವರರ ಗುರು ಪರಂಪರೆಯನ್ನು ಪ್ರಸ್ತಾಪಿಸಿ ಒಂದು ವಚನದಲ್ಲಿ ಹೀಗೇ ಹೇಳಿದ್ದಾರೆ.

ಅನಾದಿ ಗಣೇಶ್ವರನ ಶಿಷ್ಯ ಆದಿ ಗಣೇಶ್ವರ
ಆದಿ ಗಣೇಶ್ವರ ಶಿಷ್ಯ ನಿರ್ಮಾಯನೆಂಬ ಗಣೇಶ್ವರ
ನಿರ್ಮಾಯನೆಂಬ ಗಣೇಶ್ವರನ ಶಿಷ್ಯರು ನಿರಂಜನನೆಂಬ ಗಣೇಶ್ವರ
ನಿರಂಜನನೆಂಬ ಗಣೇಶ್ವರರ ಶಿಷ್ಯರು ಜ್ಞಾನನಂದನೆಂಬ ಗಣೇಶ್ವರನು
ಜ್ಞಾನನಂದನೆಂಬ ಗಣೇಶ್ವರನ ಶಿಷ್ಯರು ಆತ್ಮ ಗಣೇಶ್ವರನು,
ಆತ್ಮ ಗಣೇಶ್ವರನ ಶಿಷ್ಯರು ಆಧ್ಯಾತ್ಮ ಗಣೇಶ್ವರ,
ಆಧ್ಯಾತ್ಮ ಗಣೇಶ್ವರನೆಂಬ ಶಿಷ್ಯರು ರುದ್ರನೆಂಬ ಗಣೇಶ್ವರ
ರುದ್ರನೆಂಬ ಗಣೇಶ್ವರನ ಶಿಷ್ಯರು ಬಸವ ಪ್ರಭುದೇವರು,
ಬಸವ ಪ್ರಭುದೇವರ ಶಿಷ್ಯರು ಆದಿ ಲಿಂಗದೇವರು.
ಆದಿ ಲಿಂಗದೇವರ ಶಿಷ್ಯರು ಚನ್ನವೀರೇಶ್ವರ ದೇವರು
ಚನ್ನವೀರೇಶ್ವರ ದೇವರ ಶಿಷ್ಯರು ಹರದನಹಳ್ಳಿಯ ಗೋಸಲ ದೇವರು
ಹರದನಹಳ್ಳಿಯ ಗೋಸಲ ದೇವರ ಶಿಷ್ಯರು ಶಂಕರದೇವರು,
ಶಂಕರ ದೇವರ ಶಿಷ್ಯರು ದಿವ್ಯಲಿಂಗದೇವರು,
ದಿವ್ಯಲಿಂಗ ದೇವರು ಶಿಷ್ಯರು ಚನ್ನಬಸವೇಶ್ವರ ದೇವರು,
ಚನ್ನ ಬಸವೇಶ್ವರ ದೇವರ ಕರ ಕಮಲದಲ್ಲಿ ಉತ್ಪತ್ತಿಯಾದ ಶಿಶು ಸಿದ್ದಲಿಂಗ ನಾನಯ್ಯ
ಅನಾದಿವಿಡಿದು ಬಂದು ಗುರು, ಅನಾದಿವಿಡಿದು ಬಂದ ಲಿಂಗ

ಅನಾದಿವಿಡಿದು ಬಂದ ಜಂಗಮ, ಅನಾಧಿವಿಡಿದು ಬಂದ ಗುರು ಶಿಷ್ಯ ಸಂಬಂಧ

ಅನಾದಿವಿಡಿದು ಬಂದ ಪಾದೋಪಕ ಪ್ರಸಾದ

ಅನಾದಿವಿಡಿದು ಬಂದ ಭಕ್ತಿ ಜ್ಞಾನ ವೈರಾಗ್ಯ

ಅನಾದಿ ಸಂಸಿದ್ದಾನಾದ ವೀರಶೈವಚಾರ ಸಂಪತ್ತು

ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭುವೇ..

ಈ ವಚನವು ಶ್ರೀಗೋಸಲ ಮಠದ ಪರಂಪರೆ, ನಾಡು ನುಡಿ, ಜಲ, ಜನರ ಉದ್ದಾರಕ್ಕಾಗಿ ಹುಟ್ಟಿ ಬಂದಂತಹ ಮಹಾತ್ಮರು ತಮ್ಮ ಜೀವಿತ ಅವಧಿಯನ್ನೆ ಪುಣ್ಯದ ಕೆಲಸಕ್ಕೆ ಮುಡಿಪಾಗಿದ್ದು, ಇಂದಿನ ಸಮಾಜದ ಜನತೆಗೆ ಆದರ್ಶದ ಶಿಖರವಾಗಿ ನಮ್ಮ ಮುಂದೆ ಇತಿಹಾಸದ ಚರಿತ್ರೆಯ ಪುಟವಾಗಿ ಸದಾ ನಮ್ಮ ಜ್ಞಾನದ ಕಣ್ಣನ್ನು ತೆರೆಸುತಿದ್ದಾರೆ.

ಗೋಸಲ ಮಠದ ಮಠಾಧೀಶರು ಬಗ್ಗೆ ಹೆಚ್ಚು ಮಾಹಿತಿ ದೊರೆಯದಿದ್ದರು ಅವರ ಸಾಧನೆ ತೋರಿಸುವಷ್ಟು ಬರಹಗಳು ಇಲ್ಲಿವೆ.

ಅನಾದಿ ಗಣನಾಥರು:

ಸಿದ್ದಲಿಂಗೇಶ್ವರರು ತಮ್ಮ ವಚನದಲ್ಲಿ ಹೇಳಿ ಕೊಂಡಿರುವಂತೆ ಗೋಸಲ ಪೀಠದ ಮೊದಲ ಗುರು ಅನಾದಿ ಗಣನಾಥರು, ಸಂಪ್ರದಾಯದ ಸಮಾಜದ ವ್ಯವಸ್ಥೆಯನ್ನು ಬೆಳಸಲು ಕಾರಣರಾದವರು. ಅನೇಕ ಪಂಥದ ಧರ್ಮಗಳನ್ನು ಬದಿಗೊತ್ತಿ ವೀರಶೈವ ಧರ್ಮವನ್ನು ಪ್ರಚಾರ ಮಾಡಿ ಯಶಸ್ವಿಯಾದರು. ಒಂದು ವ್ಯವಸ್ಥಿತ ಸಮಾಜ ನಿರ್ಮಾಣವಾಗಬೇಕಾದರೆ ಅಲ್ಲಿಯ ಧರ್ಮವು ಸಹ ಪ್ರಮುಖವಾದದ್ದು ಎಂಬುದನ್ನು ತೋರಿಸಿಕೊಟ್ಟರು. ಅನಾಧಿಗಣನಾಥರು ತಮ್ಮ ಅಂತಿಮ ದಿನಗಳನ್ನು ಕೊಂಕಣ ಸಮುದ್ರ ತೀರದ ಗುಹೆ ಎಂಬ ಪಟ್ಟಣದಲ್ಲಿ ಕಳೆದರು.

ಆದಿಗಣೇಶ್ವರ:

ಶ್ರೀ ಗೋಸಲ ಪೀಠದ ಎರಡನೇ ಗುರುಗಳಾದ ಆದಿಗಣೇಶ್ವರರು ತಮ್ಮ ಗುರುಗಳಾದ ಅನಾದಿ ಗಣನಾಥರ ಮಾರ್ಗದರ್ಶನದಲ್ಲಿ ನಡೆದರು. ಅವರ ಆದರ್ಶದಂತೆ ಕರ್ನಾಟಕದ ಅನೇಕ ಧಾರ್ಮಿಕ ಕೇಂದ್ರಗಳಿಗೆ ಭೇಟಿ ನೀಡಿ ವೀರಶೈವ ಧರ್ಮವನ್ನು ಪ್ರಚಾರ ಮಾಡಿ ಕೊನೆಗೆ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದ ಶಂಭುಲಿಂಗ ಬೆಟ್ಟದಲ್ಲಿ ಶಿವೈಕ್ಯರಾಗುತ್ತಾರೆ.

ನಿರ್ಮಾಯ ಗಣೇಶ್ವರ:

ಶ್ರೀ ಗೋಸಲ ಮಠದ ಮೂರನೇ ಗುರುಗಳಾದ ನಿರ್ಮಾಯ ಗಣೇಶ್ವರರು ತಮಿಳುನಾಡು, ಕರ್ನಾಟದ ಹಲವು ಪ್ರದೇಶಗಳಲ್ಲಿ ಸಂಚಾರ ಮಾಡಿ ವೀರಶೈವ ಧರ್ಮವನ್ನು ಪ್ರಚಾರ ಮಾಡಿದರು.

ನಿರಂಜನಸ್ವಾಮಿ:

ಶ್ರೀ ಗೋಸಲ ಪೀಠದ 4ನೇ ಗುರುಗಳಾದ ನಿರಂಜನ ಸ್ವಾಮಿಗಳು, ಕರ್ನಾಟಕ, ತಮಿಳುನಾಡು ಹಾಗೂ ಇತರೆ ರಾಜ್ಯಗಳ ಧಾರ್ಮಿಕ ಕೇಂದ್ರಗಳಿಗೆ ಪ್ರವಾಸ ಕೈಗೊಂಡು ಅನೇಕ ಜನರನ್ನು ವೀರಶೈವರನ್ನಾಗಿ ಮಾಡಿದ ಕೀರ್ತಿ ಇವರದು. ಇವರು ರುದ್ರಮುನಿ ಸ್ವಾಮಿ ಮಠದಲ್ಲಿ ಲಿಂಗೈಕ್ಯರಾದರು.

ಜ್ಞಾನನಂದ ಸ್ವಾಮಿ:

ಗೋಸಲ ಪೀಠದ ಐದನೇ ಗುರುಗಳಾದ ಜ್ಞಾನನಂದ ಸ್ವಾಮಿಗಳು ಕರ್ನಾಟಕದ ಕಲ್ಯಾಣ, ಪಂಪಾ ಕ್ಷೇತ್ರಗಳಿಗೆ ಪ್ರವಾಸ ಕೈಗೊಂಡು ವೀರಶೈವ ಧರ್ಮವನ್ನು ಉಪದೇಶ ಮಾಡಿದರು. ಆಂಧ್ರ ಪ್ರದೇಶ, ತಮಿಳುನಾಡು ಪ್ರದೇಶಗಳಲ್ಲಿ ಅವನತಿಯಲ್ಲಿದ್ದ ಹಲವು ವೀರಶೈವ ಮಠಗಳನ್ನು ಪುನಃಶ್ಚೇತನಗೊಳಿಸಿದರು. ತಮ್ಮ ವಾದದಲ್ಲಿ ಅನೇಕರನ್ನು ಸೋಲಿಸಿ, ಯಶಸ್ವಿಯಾದರು ಕೊನೆಗೆ ತಮ್ಮ ಅಂತಿಮ ದಿನಗಳನ್ನು ಶ್ರೀಶೈಲದಲ್ಲಿ ಕಳೆದರು.

ಆತ್ಮ ಗಣೇಶ್ವರ:

ಶ್ರೀ ಗೋಸಲಪೀಠದ ಆರನೇ ಗುರುಗಳಾದ ಆತ್ಮಗಣೇಶ್ವರರು ವೀರಶೈವ ಧರ್ಮವನ್ನು ಪ್ರಚಾರ ಮಾಡಿ ಕೊನೆಗೆ ಶ್ರೀಶೈಲದ ಕದಳಿ ವನದಲ್ಲಿ ಅಂತಿಮ ದಿನಗಳನ್ನು ಕಳೆದು ಅಲ್ಲಿ ಐಕ್ಯರಾದರು.

ಆಧ್ಯಾತ್ಮ ಗಣನಾಥ :

ಶ್ರೀ ಗೋಸಲ ಪೀಠದ ಏಳನೇ ಗುರುಗಳಾದ ಆಧ್ಯಾತ್ಮ ಗಣನಾಥರು ಕರ್ನಾಟಕದ ಹಲವು ಭಾಗಗಳಲ್ಲಿ ಧರ್ಮ ಪ್ರಚಾರ ಮಾಡಿದರು. ಇವರು ಹೆಚ್ಚು ಕಾಲ ಕಳೆದದ್ದು ತಮಿಳುನಾಡಿನಲ್ಲಿ ಅಲ್ಲಿ ಹಲವರನ್ನು ವೀರಶೈವರನ್ನಾಗಿ ಮಾಡಿ ವೀರಶೈವ ಧರ್ಮವನ್ನು ಪ್ರಬಲ ಧರ್ಮವನ್ನಾಗಿ ಮಾಡಿದರು. ಇವರು ತಮಿಳುನಾಡಿನ ತಿರುವಣ್ಣಾಮಲೈ ಒಂದು ಮಠವನ್ನು ಸ್ಥಾಪಿಸಿ ಅಲ್ಲೆ ಲಿಂಗೈಕ್ಯರಾಗುತ್ತಾರೆ. ಇಂದು ಈ ಸ್ಥಳ ಪುಣ್ಯಕ್ಷೇತ್ರವಾಗಿದ್ದು ಇದನ್ನು "ಓಂ ನಮಃ ಶಿವಾಯ ಮಠ" ಎಂದು ಕರೆಯುತ್ತಾರೆ.

ರುದ್ರಮುನಿ ಸ್ವಾಮಿಗಳು:

ಶ್ರೀ ಗೊಸಲ ಪೀಠದ ಎಂಟನೇ ಗುರುಗಳಾದ ರುದ್ರಮುನಿ ಸ್ವಾಮಿಗಳು ಕರ್ನಾಟಕದ ಧಾರ್ಮಿಕ ಪ್ರಾಚಾರ ಮಾಡಿ ನಂತರ ತಮಿನಾಡು, ಕೇರಳ, ಆಂಧ್ರಪ್ರದೇಶ ಪ್ರಮುಖ ಸ್ಥಳಗಳಿಗೆ ಭೇಟಿ ನೀಡಿ ಅನೇಕರಿಗೆ ಲಿಂಗದಿಕ್ಷ ನೀಡಿದರು. ತಿಪ್ಪೇರುದ್ರಮುನಿಸ್ವಾಮಿ ಎಂದೇ ಪ್ರಸಿದ್ದಿ ಪಡೆದಿರುವ ಇವರು ಚಿತ್ರದುರ್ಗ ಜಿಲ್ಲೆಯ ನಾಯಕನ ಹಟ್ಟಿಗೆ ಹೋಗಿದ್ದು ಅಲ್ಲಿನ ಮೇಲು ಕೀಳೆಂಬ ಸಂಘರ್ಷವನ್ನು ನೋಡಿ ಮಾನವರಲ್ಲೆ ಒಂದೇ ಜಾತಿ, ಯಾರು ಮೇಲಲ್ಲ ಯಾರು ಕೀಳಲ್ಲ. ಆತನ ಧಾರ್ಮಿಕ ಪಾಲನೆ ನಿಷ್ಠೆಯಿಂದ ಮಾನವನು ಉನ್ನತ ಸ್ಥಾನ ಪಡೆಯುವನು ಎಂದು ಅನೇಕರಿಗೆ ಉಪದೇಶ ನೀಡಿದರು. ಇಲ್ಲಿ ಮಠವನ್ನು ನಿರ್ಮಿಸಲು ಸ್ಥಳವನ್ನು ಕೇಳಿದಾಗ ಮೇಲ್ವರ್ಗದವರು ಸ್ಥಳ ನೀಡಲಿಲ್ಲ. ನಂತರ ದಲಿತರು ತಿಪ್ಪೇಗುಂಡಿಯ ಸ್ಥಳವನ್ನು ನೀಡಿದರು ಆ ಸ್ಥಳವನ್ನು ಸ್ವಚ್ಛ ಮಾಡಿ ಒಂದು ಮಠವನ್ನು ನಿರ್ಮಿಸಿ ಅನೇಕ ದಲಿತರಿಗೆ ಲಿಂಗ ದೀಕ್ಷೆ ನೀಡಿದರು. ಇಂದಿಗೂ ಮಾರ್ಚ್ ತಿಂಗಳಲ್ಲಿ ನಾಯಕನ ಹಟ್ಟಿಯಲ್ಲಿ

ತಿಪ್ಪೇರುದ್ರಸ್ವಾಮಿಗಳ ಜಾತ್ರೆ ನೆಡೆಯುತ್ತದೆ. ಈ ಭಾಗದ ಜನರು ಮಲೈ ಮಹದೇಶ್ವರ ಜಾತ್ರೆಯಂತೆ ತುಂಬ ವಿಜೃಂಭಣೆಯಿಂದ ಮಾಡುವರು. ಈ ಭಾಗದ ಜನರು ತಮ್ಮ ಮಕ್ಕಳಿಗೆ ತಿಪ್ಪೆರುದ್ರಮುನಿಸ್ವಾಮಿ, ತಿಪ್ಪೆಸ್ವಾಮಿ ಎಂದು ನಾಮಕರಣ ಮಾಡುತ್ತಾರೆ. ಅಂತಿಮ ದಿನಗಳನ್ನು ಆ ಮಠದಲ್ಲಿ ಕಳೆದ ಇವರು ಅಲ್ಲೇ ಲಿಂಗೈಕ್ಯವಾದರು.

ಬಸವ ಪ್ರಭುಸ್ವಾಮಿ:

ಗೋಸಲ ಪೀಠದ ಒಂಬತ್ತನೇ ಗುರುಗಳಾದ ಬಸವ ಪ್ರಭುಸ್ವಾಮಿ ತಮ್ಮ ವಿದ್ವತ್ತಿನಿಂದ ಅನೇಕರನ್ನು ಸೋಲಿಸಿ ಉಪದೇಶ ನೀಡಿ ಹಲವರಿಗೆ ಲಿಂಗ ದೀಕ್ಷೆಯ ಮಾಡಿದರು.ಜೈನ ಧರ್ಮದ ಪ್ರಭಾವಕ್ಕೆ ಒಳಗಾಗಿದ್ದ ಪ್ರಸಿದ್ದಿ ಪಡೆದ ಸ್ಥಳಗಳಿಗೆ ಭೇಟಿ ನೀಡಿ ವಿದ್ವಾಂಸರೊಂದಿಗೆ ಚರ್ಚೆ ಮಾಡಿ ಅವರನ್ನು ಸೋಲಿಸಿ ಅವರಿಗೆ ಲಿಂಗದಿಕ್ಷೆಯನ್ನು ನೀಡಿದರು. ತಮ್ಮ ಅಂತಿಮ ದಿನಗಳನ್ನು ತೇರುದಾಲ ಎಂಬಲ್ಲಿ ಕಳೆದು ಲಿಂಗೈಕ್ಯರಾದರು.

ಆದಿ ಲಿಂಗಸ್ವಾಮಿ:

ಶ್ರೀ ಗೋಸಲ ಪೀಠದ ಹತ್ತನೇ ಗುರಗಳಾದ ಆದಿಲಿಂಗ ಸ್ವಾಮಿಗಳು ಕರ್ನಾಟಕದ ಹಲವು ಧಾರ್ಮಿಕ ಸ್ಥಳಗಳಿಗೆ ಭೇಟಿ ಮಾಡಿ ವೀರಶೈವ ಧರ್ಮದ ಬಗ್ಗೆ ಉಪದೇಶ ನೀಡಿದರು ಇವರು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೋಕಿನ ಕಲ್ಲೂರಿಗೆ ತೆರಳಿ ಅಲ್ಲಿ ಲಿಂಗೈಕ್ಯರಾದರು.

ಚೆನ್ನವೀರೇಶ್ವರ:

ಶ್ರೀ ಗೋಸಲ ಪೀಠದ ಹನ್ನೊಂದನೇ ಗುರುಗಳಾದ ಚೆನ್ನವೀರೇಶ್ವರರು ಪ್ರವಚನಗಳನ್ನು ಮಾಡುತ್ತ ಕರ್ನಾಟಕ, ತಮಿಳುನಾಡು, ಕೇರಳ ರಾಜ್ಯಗಳಿಗೆ ಪ್ರವಾಸ ಮಾಡಿ ವೀರಶೈವ ಧರ್ಮವನ್ನು ಪ್ರಚಾರ ಮಾಡಿದರು. ಇವರು ಆಂಧ್ರಪ್ರದೇಶದ ಮನಿವಲ್ಲಿಯಲ್ಲಿ ಲಿಂಗೈಕ್ಯರಾದರು.

ಗೋಸಲ ಸಿದ್ದೇಶ್ವರರು:

ಶ್ರೀ ಗೋಸಲ ಪೀಠದ ಹನ್ನೇರಡನೇ ಗುರುಗಳಾದ ಸಿದ್ದೇಶ್ವರರು ಕರ್ನಾಟಕದಲ್ಲಿ ವೀರಶೈವ ಧರ್ಮವನ್ನು ಪ್ರಚಾರ ಮಾಡಿ ನಾಶ ಹೊಂದುತ್ತಿದ್ದ ವೀರಶೈವ ಮಠಗಳನ್ನು ರಕ್ಷಿಸಿದರು. ಸಿದ್ದಗಂಗಾದಲ್ಲಿ ಅನೇಕ ಜನರಿಗೆ ಜಂಗಮ ಪಟ್ಟ ಕಟ್ಟಿದರು. ಮೈಸೂರು ರಾಜ್ಯದಲ್ಲಿ ಮೊಟ್ಟಮೊದಲು ಸ್ಥಾಪಿತವಾದ **ವಿರಕ್ತಪೀಠ** ಎಂಬ ಖ್ಯಾತಿಗೆ ಹೆಸರಾಗಿದೆ. ಇವರು ಸಿದ್ದಾಗಂಗದಲ್ಲಿ ಲಿಂಗೈಕ್ಯರಾದರು.

ಶಂಕರ ದೇವರು:

ಶ್ರೀ ಗೋಸಲ ಪೀಠದ ಹದಿಮೂರನೇ ಗುರುಗಳಾದ ಶಂಕರ ದೇವರು ಕರ್ನಾಟಕದ ಹಲವು ಸ್ಥಳಗಳಿಗೆ ಸಂಚಾರ ಮಾಡಿ ವೀರಶೈವ ಧರ್ಮವನ್ನು ಉಪದೇಶ ಮಾಡಿದರು. ಹಲವು ವರ್ಷಗಳ ಕಾಲ ಸಿದ್ದ ಗಂಗಾ ಕ್ಷೇತ್ರದಲ್ಲಿ ನೆಲೆಸಿದ್ದ ಇವರು ಕೊನೆಗೆ ಕೊರಟಗೆರೆ ಸಮೀಪದ ಸಿದ್ದರ ಬೆಟ್ಟದಲ್ಲಿ ಲಿಂಗೈಕ್ಯರಾದರು.

ದಿವ್ಯ ಲಿಂಗೇಶ್ವರ:

ಶ್ರೀ ಗೋಸಲ ಪೀಠದ ಹದಿನಾಲ್ಕನೇ ಗುರುಗಳಾದ ದಿವ್ಯಲಿಂಗೆಶ್ವರರು ಹರದನಹಳ್ಳಿಯಲ್ಲಿ ಹುಟ್ಟಿ ಕರ್ನಾಟಕದ ಅನೇಕ ಭಾಗಗಳಲ್ಲಿ ಸಂಚಾರ ಮಾಡಿ ವೀರಶೈವ ಧರ್ಮವನ್ನು ಪ್ರಚಾರ ಮಾಡಿ ಕೊನೆಗೆ ಶ್ರೀ ಗೋಸಲ ಪೀಠದಲ್ಲಿ ಬಂದು ಲಿಂಗೈಕ್ಯರಾಗುತ್ತಾರೆ. ಗೋಸಲ ಪೀಠದಲ್ಲಿ ಲಿಂಗೈಕ್ಯರಾದವರಲ್ಲಿ ಇವರು ಒಬ್ಬರೇ.

ಚೆನ್ನ ಬಸವೇಶ್ವರ ಮಹಾಸ್ವಾಮಿ:

ಶ್ರೀ ಗೋಸಲ ಪೀಠದ ಹದಿನೈದನೇ ಗುರುಗಳಾದ ಇವರು ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶ, ಮುಂತಾದ ರಾಜ್ಯಗಳ ಧಾರ್ಮಿಕ ಕೇಂದ್ರಗಳಿಗೆ ಭೇಟಿ ನೀಡಿ ವೀರಶೈವ ಧರ್ಮವನ್ನು ಪ್ರಚಾರ ಮಾಡಿದರು. ಸಿದ್ದಾಗಂಗಾದಲ್ಲಿ ಒಂದು ಮಠವನ್ನು ನಿರ್ಮಿಸುತ್ತಾರೆ. ತಮ್ಮ ಕೊನೆಯ ಕಾಲವನ್ನು ಗುಬ್ಬಿಯಲ್ಲಿ ಕಳೆದು ಅಲ್ಲೇ ಐಕ್ಯರಾಗುತ್ತಾರೆ .

ಜಗದ್ಗುರು ತೋಂಟದ ಸಿದ್ದಲಿಂಗೇಶ್ವರರು(ಕ್ರಿ.ಶ.1500-1580)



ಸಿದ್ದಲಿಂಗೇಶ್ವರರ ಜನನ ಮಂಟಪದ ಚಿತ್ರ

ಗೋಸಲ ಪೀಠದ ಕೊನೆಯ 16ನೇ ಜಗದ್ಗೂರು ತೊಂಟ ಸಿದ್ದಲಿಂಗೇಶ್ವರರು. ಸಿದ್ದಲಿಂಗೇಶ್ವರರು ಹರದನಹಳ್ಳಿಯ ಶಿವಶರಣರಾದ ಮಲ್ಲಿಕಾರ್ಜುನ ಮತ್ತು ಜ್ಞಾನಂಬೆ ದಂಪತಿಗಳಗೆ ಹಲವು ವರ್ಷಗಳ ನಂತರ ಜನಿಸಿದರು. ಹಲವು ವರ್ಷಗಳ ಕಾಲ ಸಂತಾನವಿಲ್ಲದೇ ಪ್ರತಿದಿನ ಶಿವನ ಸ್ಮರಣೆ ಮಾಡಿಕೊಂಡು ಬದುಕಿದ್ದು ದಂಪತಿಗಳಿಬ್ಬರು ಒಮ್ಮೆ ಗೋಸಲ ಪೀಠದ ಗುರುಗಳಾದ ಚನ್ನಬಸವೇಶ್ವರರ ಬಳಿ ಹೋಗಿ ಸಂತಾನದ ಭಾಗ್ಯ ಕರುಣಿಸಬೇಕೆಂದು ಬೇಡಿಕೊಂಡಾಗ ಸದಾ ಹಸನ್ಮುಖಿಯಾಗಿರುವ ಬಾಲಕ ಜನಿಸುತ್ತಾನೆಂದು ಹೇಳಿ ಆಶೀರ್ವಾದ ಮಾಡಿದರು. ಅದರಂತೆ ಅವರಿಗೆ ಸಿದ್ದಲಿಂಗೇಶ್ವರರು ಜನಿಸಿದರು. ಮಲ್ಲಿಕಾರ್ಜುನ ಮತ್ತು ಜ್ಞಾನಾಂಬೆ ಇಬ್ಬರು ಪುಟ್ಟ ಮಗುವನ್ನು ಗೋಸಲ ಪೀಠಕ್ಕೆ ಕರೆದುಕೊಂಡು ಬಂದಾಗ ಚೆನ್ನಬಸವೇಶ್ವರರು ತಮ್ಮ ಕೊರಳಿದ್ದ ಲಿಂಗ ರಕ್ಷೆಯನ್ನು ಮಗುವಿನ ಕೊರಳಿನಲ್ಲಿ ಹಾಕಿ ಲಿಂಗಧಾರಿಯನ್ನಾಗಿ ಮಾಡಿ ಆ ಮಗುವಿನ ಕಿವಿಯ ಸಮೀಪದಲ್ಲಿ ತಮ್ಮ ಬಾಯಿಯಿಂದ ಸಿದ್ದಲಿಂಗೇಶ್ವರ,, ಸಿದ್ದಲಿಂಗೇಶ್ವರ, ಸಿದ್ದಲಿಂಗೇಶ್ವರ, ಎಂದು 3 ಬಾರಿ ಹೇಳಿ ನಾಮಕರಣ ಮಾಡಿದರು.



ಬಾಲ್ಯದಿಂದಲೇ ಇತರ ಚಟುವಟಿಕೆಗಳಿಗೆ ವಿದಾಯ ಹೇಳಿ ತಂದೆ ತಾಯಿಗಳಂತೆ ಶಿವಧ್ಯಾನ ಮಾಡುತ್ತಿದ್ದರಿಂದ ಮಲ್ಲಿಕಾರ್ಜುನ ಮತ್ತು ಜ್ಞಾನಾಂಬೆ ಚೆನ್ನಬಸವೇಶ್ವರರ ಬಳಿ ಕರೆದು ಕೊಂಡು ಬಂದು ನಮ್ಮ ಮಗನ ನಡವಳಿಕೆ ಅರ್ಥವಾಗದು ಗುರುಗಳೇ ಎಷ್ಟೇ ಪಾಠ ಹೇಳಿಕೊಟ್ಟರು ಸರಿಯಾಗಿ ಹೇಳದೇ ರಾತ್ರಿ ಮಲಗುವಾಗ ಓಂ ನಮಃ ಶಿವಾಯ ಎಂದು ಮಲಗಿದರೆ ಬೆಳಗ್ಗೆ ಏಳುವ ತನಕವು ಶಿವನ ಸ್ಮರಣೆ ಮಾಡುತ್ತಾನೆ ಎಂದು ಹೇಳಿದರು. ಚನ್ನಬಸವೇಶ್ವರರು ಈತನ ವಿದ್ಯಾಭ್ಯಾಸ ಜ್ಞಾನರ್ಜನೆ, ಎಲ್ಲವೂ ಗೋಸಲ ಮಠದಲ್ಲಿರುವಾಗ ಈತನು ಬೇರೆ ಎಲ್ಲೆ ಮಲಗಿದರು ಮನಸ್ಸು ಮಾತ್ರ ಗೋಸಲ ಪೀಠದಲ್ಲಿತ್ತದೆ. ಸಿದ್ದಲಿಂಗೇಶ್ವರನನ್ನು ಇಲ್ಲೆ ಬಿಟ್ಟು ಹೋಗಿ ಎಂದಾಗ ದಂಪತಿಗಳಿಬ್ಬರು ಸಂತಾನವಿಲ್ಲದ ನಮಗೆ ಹಲವು ವರ್ಷಗಳ ನಂತರ ಮಗುವಾಗಿದೆ. ದಂಪತಿಗಳಿಬ್ಬರು ಮಗುವನ್ನು ಬಿಟ್ಟು ಕೊಡಲು ಸಾಧ್ಯವಾಗದೇ ದುಃಖಿಸುತ್ತಾ ಗುರುಗಳ ಪಾದವನ್ನು ಹಿಡಿದು ಕೊಂಡಾಗ ಚನ್ನ ಬಸವೇಶ್ವರರು ಜ್ಞಾನಾಂಬೆ ನಿನ್ನ ಮಗ ನಿಮ್ಮ ಮನೆ ಬೆಳಗಲು ಬಂದಿಲ್ಲ ಈತ ಲೋಕದ ಅಜ್ಞಾನವನ್ನು ತಿದ್ದಿ ಜಗತ್ತನ್ನು ಉದ್ದಾರ ಮಡಲು ಹುಟ್ಟಿರುವ ಅವತಾರ ಪುರುಷ ಎಂದು ಹೇಳಿದಾಗ ಜ್ಞಾನಾಂಬೆ ಧೈರ್ಯದಿಂದ ಗಟ್ಟಿ ಮನಸ್ಸು ಮಾಡಿಕೊಂಡು ಮನೆಗೆ ಹೊರಡಲು ಸಿದ್ದತೆಯಾದಾಗ ಗುರುಗಳು (ಚನ್ನ ಬಸವೇಶ್ವರ) ತಾಯಿ ಜ್ಞಾನಾಂಬೆ ಎಂದಾಗ ಇದೇನು ಗುರುವರ್ಯ ನಿಮ್ಮ ಪವಿತ್ರವಾದ ಬಾಯಲ್ಲಿ ನನ್ನನ್ನು ತಾಯಿ ಎನ್ನುತ್ತಿದ್ದೀರಿ ಎಂದಾಗ "ಈ ಭೂಲೋಕಕ್ಕೆ ಒಂದು ದಿವ್ಯ ಶಕ್ತಿಯನ್ನು ನೀಡಿದಂತಹ ಮಹಾನ್ ಮಾತೆ ನೀನು" ಮಗುವನ್ನು ಯಾವಾಗ ಬೇಕಾದರೂ ಬಂದು ನೋಡಿ ಹೋಗಬಹುದು ಎಂದು ಹೇಳಿ ಕಳುಹಿಸಿತ್ತಾರೆ.

ಚೆನ್ನ ಮಲ್ಲಿಕಾರ್ಜುನನ ಮಾರ್ಗದರ್ಶನನ್ನು ಸಿದ್ದಲಿಂಗೇಶ್ವರರ ಅಪಾರ ಪಾಂಡಿತ್ಯ ಪಡೆದು ಸಿದ್ದಗಂಗಾ ಕ್ಷೇತ್ರ ಕ್ಕೆ ಹೋಗುತ್ತಾರೆ. ಸಿದ್ದಲಿಂಗೇಶ್ವರರು ಹಲವು ವರ್ಷಗಳ ಕಾಲ ಸಿದ್ದಗಂಗದಲ್ಲಿದ್ದು ನಂತರ ತಮಿಳುನಾಡಿನಲ್ಲಿ ರಾಮೇಶ್ವರ, ಪೊನ್ನಾಂಬಲ, ಕಾಳಹಸ್ತಿ, ಕಂಚಿ, ಚಿದಂಬರಂ ಇತ್ಯಾದಿ ಕ್ಷೇತ್ರಗಳಿಗೆ ಪ್ರವಾಸ ಮಾಡಿ ಸಾವಿರಾರು ಭಕ್ತರಿಗೆ ಲಿಂಗದಿಕ್ಷೆಯನ್ನು ನೀಡಿ ವೀರಶೈವ ಮಠಗಳು ತಮಿಳುನಾಡಿನಲ್ಲಿ ಸ್ಥಾಪಿಸಿರುವುದು ಐತಿಹಾಸಿಕವಾಗಿ ಮಹತ್ವ ಪಡೆದಿದೆ.

‘ಹದಿನಾರನೇ ಶತಮಾನದ ಕೇಂದ್ರ ಬಿಂದು ತೋಂಟದ ಅಲ್ಲಮಪ್ರಭುದೇವ ಎಂದು ಕರೆಸಿಕೊಂಡವರು ಸಿದ್ದಲಿಂಗೇಶ್ವರರು. ಸಿದ್ದಲಿಂಗೇಶ್ವರರು 700 ಶಿವಶರಣರೊಂದಿಗೆ ದೇಶದ ಅನೇಕ ಭಾಗಗಳು ಸಂಚರಿಸಿ ವೀರಶೈವ ಧರ್ಮವನ್ನು ಪ್ರಚಾರ ಮಾಡಿದ ಕೀರ್ತಿ ಸಿದ್ದಲಿಂಗೇಶ್ವರರಿಗೆ ಸಲ್ಲುತ್ತದೆ. ಸಿದ್ದಲಿಂಗೇಶ್ವರರು ಸ್ವಂತ ಪರಿಶ್ರಮದಿಂದ ತತ್ವಪೂರ್ಣವಾದ ವಚನಗಳನ್ನು ರಚನೆ ಮಾಡಿ ಜಗತ್ತಿನಾದ್ಯಂತ ಜನರನ್ನು ಜಾಗೃತರನ್ನಾಗಿ ಮಾಡಿದರು. ಶ್ರೀಶೈಲ, ಕೇದಾರ, ಗೋಕರ್ಣ, ಹಂಪಿ, ಶಿವ ಗಂಗೆ ಮುಂತಾದ ಕಡೆ ವೀರಶೈವ ಧರ್ಮವನ್ನು ಪ್ರಚಾರ ಮಾಡಿದರು. ಸಿದ್ದಲಿಂಗೇಶ್ವರರ ಷಟ್ಸ್ಥಲಜ್ಞಾನಸಾರಾಮೃತ ಎಂಬ ಕೃತಿಯಲ್ಲಿ ವೀರಶೈವ ಧರ್ಮದ ಸುಮಾರು 702 ವಚನಗಳನ್ನು ಇದು ಒಳಗೊಂಡಿರುತ್ತದೆ. ಸಿದ್ದಲಿಂಗೇಶ್ವರರರ ಅಂಕಿತನಾಮ ಮಹಾಲಿಂಗೇಶ್ವರ ಶಿವ ಸಿದ್ದೇಶ್ವರ ಪ್ರಭು’.

6–ಹರದನಹಳ್ಳಿ ಕೆರೆಗಳು

ಹರದನಹಳ್ಳಿಯ ಇತಿಹಾಸಕ್ಕೆ ಇಲ್ಲಿನ ಮರಗದ ಕೆರೆ ಮತ್ತು ಬಂಡಿಕೆರೆ ತುಂಬಾ ಪ್ರಭಾವ ಬೀರಿದೆ. ಉತ್ತರ ದಿಕ್ಕು ಮತ್ತು ದಕ್ಷಿಣ ದಿಕ್ಕಿನಲ್ಲಿ ಕಂಡುಬರುವ ಈ ಕೆರೆಗಳು ಸದಾ ನೀರಿನಿಂದ ತುಂಬಿ ತುಳುಕುತ್ತಿತ್ತು, ಈ ನೀರಿನಲ್ಲಿ ಹರದನಹಳ್ಳಿಯ ರೈತರು ಕಾಲುವೆಗಳನ್ನು ನಿರ್ಮಿಸಿಕೊಂಡು ವ್ಯವಸಾಯ ಮಾಡುತ್ತಿದ್ದರು. ಹರದನಹಳ್ಳಿಯ ಪ್ರಸಿದ್ದ ಎರಡು ಕೆರೆಗಳೆಂದರೆ

1. ಮರಗದ ಕೆರೆ
2. ಬಂಡಿ ಕೆರೆ

ಮರಗದ ಕೆರೆ:



ಹರದನಹಳ್ಳಿಯ ದಕ್ಷಿಣ ಭಾಗದಲ್ಲಿ ಗೋಚರವಾಗುವ ಕೆರೆ ಎಂದರೆ ಮರಗದಕೆರೆ ಇದು ಸರ್ವೆನಂ–473ರಲ್ಲಿ ಈ ಕೆರೆ ಕಂಡು ಬರುತ್ತದೆ. ಸುಮಾರು 234 ಎಕರೆ 5 ಗುಂಟೆ ವ್ಯಾಪ್ತಿಯ ಪ್ರದೇಶವನ್ನು ಹೊಂದಿದೆ. ಈ ಕೆರೆಯಲ್ಲಿ ವರ್ಷ ಪೂರ್ತಿ ನೀರು

ಸಂಗ್ರಹವಾಗಿದ್ದು ಮಳೆಯ ಕಾಲದಲ್ಲಿ ಈ ಕೆರೆಯ ನೀರು ಕಲುಷಿತವಾದರು ಕೇವಲ 15 ದಿನದ ಒಳಗೆ ಆರೋಗ್ಯವಾದ ನೀರಿನಂತಾಗುತ್ತಿತ್ತು ಈ ಕೆರೆಗಳಲ್ಲಿ ಹೆಚ್ಚು ಅನಾಹುತವಾಗಿ ಸಂಭವಿಸುತ್ತಿತ್ತು. ಪ್ರಾಣಿಗಳು, ಮನುಷ್ಯರು ಈ ಕೆರೆಯಲ್ಲಿ ಹಲವರು ಜಾರಿ ಬಿದ್ದು ಮರಣ ಹೊಂದಿದ್ದಾರೆ. ಈ ಕೆರೆಯಲ್ಲಿ ಸ್ವಲ್ಪ ಆಯಾ ತಪ್ಪಿದರೂ ಮರಣ ಖಚಿತವಾಗಿದ್ದರಿಂದ ಜನರು ಈ ಕೆರೆಯನ್ನು ಮರಗದ ಕೆರೆ ಅಥಾವ ಮರುಕದ ಕೆರೆ ಎಂದು ಕರೆಯುತ್ತಾರೆ. ಮರಗದ ಕೆರೆಯಲ್ಲಿ ಸದಾ ಕಾಲ ನೀರು ಸಂಗ್ರಹವಾಗುತ್ತಿದ್ದರಿಂದ ಇಲ್ಲಿಯ ರೈತರು ಶ್ರೀಮಂತ ಜೀವನ ನೆಡೆಸುತ್ತಿದ್ದರು. ಕಾಲ ಕ್ರಮೇಣ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಎಣ್ಣೆಹೊಳೆ ಎಂಬ ಅಣೆಕಟ್ಟನ್ನು ಇದರ ಸಮೀಪದಲ್ಲೆ ನಿರ್ಮಿಸಿದ್ದರಿಂದ ಮರಗದಕೆರೆಯ ನೀರಿನ ಪ್ರಮಾಣ ಸಂಪೂರ್ಣ ಕಡಿಮೆಯಾಗಿ ಇದು ಇಂದು ಭತ್ತಿ ಹೋಗಿದೆ.

ಬಂಡಿಕೆರೆ:

ಹರದನಹಳ್ಳಿಯ ಉತ್ತರ ದಿಕ್ಕಿನಲ್ಲಿ ಕಂಡುಬರುವ ಕೆರೆ ಎಂದರೆ ಬಂಡಿಕೆರೆ ಕೆರೆಯ ಸರ್ವೆ ನಂಬರ್ 198 ಆಗಿದ್ದು ಇದು ಸುಮಾರು 145 ಎಕರೆ 3 ಗುಂಟೆ ವ್ಯಾಪ್ತಿಯ ಪ್ರದೇಶವನ್ನು ಹೊಂದಿದೆ. ಈ ಕೆರೆಯ ನೀರಿನ ಸಹಾಯದಿಂದ ಹರದನಹಳ್ಳಿಯ ರೈತರು ವ್ಯವಸಾಯ ಮಾಡುತ್ತಿದ್ದು, ಭತ್ತ, ವಿಳ್ಯದೆಲೆ, ಅರಿಶಿನ ಇನ್ನು ಮುಂತಾದ ಬೆಳೆಗಳನ್ನು ಬೆಳೆದು ಹೆಚ್ಚು ಆದಾಯ ಗಳಿಸುತಿದ್ದರು. ಮಳೆಯ ಕಾಲದಲ್ಲಿ ಈ ಕೆರೆಯಲ್ಲಿ ಹೆಚ್ಚು ನೀರು ಸಂಗ್ರಹವಾಗುತ್ತಿದ್ದು, ಕೆಂಪು ಮಿಶ್ರಿತ ಬಣ್ಣದಿಂದ ನೀರು ಕಾಣುತಿದ್ದು, ಕೆರೆಯ ನೀರು ಬಾಡಿಹೊಗುವವರೆಗೆ ಸಹ ಹಾಗೆ ಇರುತಿದ್ದು ನೀರಿನಲ್ಲಿ ಯಾವುದೇ ಬದಲಾವಣೆ ಆಗುತಿರಲಿಲ್ಲ.

ದೊಡ್ಡ ಕಲ್ಯಾಣಿ:

ಕರ್ನಾಟಕದ ಪುಣ್ಯ ಕ್ಷೇತ್ರಗಳಲ್ಲಿ ಕಂಡು ಬರುವ ಕೊಳಗಳಂತೆ ಹರದನಹಳ್ಳಿಯ ದಕ್ಷಿಣ ಭಾಗಕ್ಕೆ ದೊಡ್ಡ ಕಲ್ಯಾಣಿ ಕೊಳವಿದೆ. ಇದಕ್ಕೆ ನೂರಾರು ವರ್ಷಗಳಿನ ಇತಿಹಾಸವಿದ್ದು 100 ಅಡಿ ಆಳವನ್ನು ಹೊಂದಿದೆ. ಈ ಕೊಳದ ತಳಭಾಗದಲ್ಲಿ ಬಾವಿಗಳಿದವೆಂದು ಆದ್ದರಿಂದ ಇಲ್ಲಿ ಯತ್ತೇಚ್ಚವಾದ ನೀರು ಸಂಗ್ರಹವಾಗುತಿತ್ತು. ಆದರೆ ಬಾವಿಗಳು ಇಂದು ಮಣ್ಣಿನಲ್ಲಿ

ಮುಚ್ಚಿಹೋಗಿವೆ. ಪ್ರತಿವರ್ಷವೂ ಇಲ್ಲಿ ನಡೆಯುತಿದ್ದ ರಥಸಪ್ತಮಿ ವೇಳೆಯಲ್ಲಿ ಮತ್ತು ದಿವ್ಯಲಿಂಗೇಶ್ವರ ದೇವಾಲಯದ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಜನರ ಹರಕೆ ಹೊತ್ತು ಬಂದು ಸ್ನಾನ ಮಾಡುತ್ತಿದ್ದರು.ಈ ಕೊಳವನ್ನು ಪಾಪನಾಶನಿ ಎಂದು ಸಹ ಕರೆಯುತ್ತಾರೆ. ಹರದನಹಳ್ಳಿಯ ಕೆರೆಗಳಾದ ಮರಗದ ಕೆರೆ, ಬಂಡಿಕೆರೆಗಳು ಯಾವಾಗಲೂ ನೀರಿನಿಂದ ತುಂಬಿ ನಿಂತಿದ್ದರಿಂದ ದೊಡ್ಡ ಕಲ್ಯಾಣಿಯಲ್ಲಿ ಯಾವಾಗಲೂ ನೀರು ಕಂಡು ಬರುತ್ತಿತ್ತು. ನೈಸರ್ಗಿಕ ವಿಕೋಪದಿಂದ ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದ ಈ ದೊಡ್ಡ ಕಲ್ಯಾಣಿ ಕೊಳ ಇಂದು ಖಾಲಿಯಾಗಿದೆ. ಮಳೆ ಹೆಚ್ಚಾಗಿ ಬಂಡಿಕೆರೆ ತುಂಬಿದರೆ ಅಲ್ಪ ಪ್ರಮಾಣದ ನೀರು ತುಂಬಿದರೆ ನೀರು ಸಂಗ್ರಹವಾಗುತ್ತದೆ.



ದೊಡ್ಡ ಕಲ್ಯಾಣಿಯ ಚಿತ್ರ



ಚಿಕ್ಕ ಕಲ್ಯಾಣಿ(ಗೋಮುಖ)



ಹರದನಹಳ್ಳಿಯ ಮತ್ತೊಂದು ಕೊಳವೆಂದರೆ ಚಿಕ್ಕ ಕಲ್ಯಾಣಿ ಕೊಳ(ಗೋಮುಖ). ಈ ಕೊಳವು ಹಸುವಿನ ಆಕಾರ ಹೊಂದಿರುವುದರಿಂದ ಗೋಮುಖ ಎಂದು ಕರೆಯುವರು. ಇದನ್ನು ತ್ರಿಮೂರ್ತಿ ಕೊಳ, ತೀರ್ಥಕೊಳವೆಂದು ಕರೆಯುವರು. ಈ ಕೊಳದಲ್ಲಿ ಒಂದು ಬಾವಿ ಇದ್ದು ಇದರ ನೀರನ್ನು ಗೋಸಲ ಪೀಠದ ಗುರುಗಳು ತೆಗೆದುಕೊಂಡು ಹೋಗಿ ಪೂಜೆ ಮಾಡುತ್ತಿದ್ದರು.



ಚಿಕ್ಕ ಕಲ್ಯಾಣಿಯ ಶಿವನ ದೇವಾಲಯದ ಚಿತ್ರ

ಈ ಚಿಕ್ಕ ಕಲ್ಯಾಣಿ ಕೊಳದ ಆಕಾರ ವಿಶಿಷ್ಟವಾದ ರೀತಿಯಲ್ಲಿ ಕಂಡುಬಂದಿದ್ದು ತ್ರಿಕೋನಾಕಾರವನ್ನು ಹೊಂದಿದೆ. ಇದು ಮೂರು ಮೂಲೆಗಳನ್ನು ಒಳಗೊಂಡಿದೆ. ಇದರ ಮಧ್ಯದಲ್ಲಿ ಚಿಕ್ಕ ಗರುಡ ಕಂಬವಿದ್ದು, ಆ ಗರುಡ ಕಂಭದ ಮೇಲೆ ಒಂದು ಬಸವನ ವಿಗ್ರಹವಿದೆ ಇದರ ನೇರವಾಗಿ ಒಂದು ಮರವದ್ದು ಆ ಮರದ ಕೆಳಗೆ ವೀರಶೈವರು ತಪಸ್ಸು ಮಾಡುತ್ತಿದ್ದು ಇದರ ತಳ ಭಾಗದಲ್ಲಿ ಶಿವನ ಗುಡಿ ಕಂಡು ಬರುತ್ತದೆ. ಈ ಶಿವನ ಗುಡಿಗೆ ವೀರಶೈವರು ಪೂಜೆ ಮಾಡುತ್ತಿದ್ದರು.

8–ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆಡಾಳಿತ್ಮಕ ವಿಚಾರಗಳು:

ಹರದನಹಳ್ಳಿಯ ಸಮಾಜದಲ್ಲಿ ಗೌಡ, ಲಿಂಗಾಯಿತ, ನಾಯಕ ಬ್ರಾಹ್ಮಣ, ಉಪ್ಪಾರ, ಮಡಿವಾಳ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮುಂತಾದ ಸಣ್ಣಪುಟ್ಟ ವರ್ಗಗಳಿದ್ದು, ಮೈಸೂರು ರಾಜರ ಆಳ್ವಿಕೆಯ ಕಾಲದಲಿ ಗೌಡರು ಪ್ರಬಲರಾಗಿದ್ದು ರಾಜರೊಂದಿಗೆ ಉತ್ತಮವಾದ ಸಂಬಂಧ ಹೊಂದಿದ್ದರು. ಗೌಡರು ಮೂಲತಹ ತಮಿಳುನಾಡು ರಾಜ್ಯದವರಾಗಿದ್ದು ಹರದನಹಳ್ಳಿ ಪ್ರಸಿದ್ದ ವ್ಯಾಪಾರ ಕೇಂದ್ರವಾಗಿದ್ದ ಸಂದರ್ಭದಲ್ಲಿ ವ್ಯಾಪಾರದ ಸಲುವಾಗಿ ಹರದನಹಳ್ಳಿಗೆ ಬಂದು ಇಲ್ಲಿನ ವ್ಯಾಪಾರದ ಶ್ರೀಮಂತಿಕೆಯನ್ನು ಕಂಡು ಹರದನಹಳ್ಳಿಯಲ್ಲಿಯೇ ನೆಲೆಸಿದರು. ಇವರು ವ್ಯಾಪಾರದಲ್ಲಿ ಶ್ರೀಮಂತರಾಗಿದ್ದರಿಂದ ಇಂದಿನ ಕಾಲದಲಿ ಸಮಾಜದಲ್ಲಿ ಉನ್ನತ ಸ್ಥಾನ ಪಡೆದಿದ್ದರು. ಆದ್ದರಿಂದ ಈ ವರ್ಗದವರು ರಾಜರೊಂದಿಗೆ, ರಾಜರ ನಂತರ ಅಧಿಕಾರಕ್ಕೆ ಬಂದ ದಂಡನಾಯಕರೊಂದಿಗೆ ನಿಕಟಸಂಬಂಧ ಹೊಂದಿದ್ದು ಊರಿನ ಪ್ರಮುಖ ಬೀದಿಗಳಲ್ಲಿ ವಾಸಿಸುತ್ತಿದ್ದರು. ಇಲಿನ ಗೌಡರು ಹರದನಹಳ್ಳಿಯ ಪ್ರಸಿದ್ದ ದೇವಾಲಯವಾದ ಶ್ರೀ ದಿವ್ಯಲಿಂಗೇಶ್ವರ ದೇವಸ್ಥಾನಕ್ಕೆ ಆರ್ಥಿಕ ಸಹಾಯ ಮಾಡಿದ್ದು, ಆ ದೇವಸ್ಥಾನದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಹರದನಹಳ್ಳಿಯಲ್ಲಿ ಗೌಡರ ನಂತರ ಪ್ರಬಲ ಮತ್ತೊಂದು ವರ್ಗವೆಂದರೆ ಲಿಂಗಾಯಿತ ವರ್ಗ ಅಥವಾ ವೀರಶೈವ ವರ್ಗ. ಕ್ರಿ. ಶ. 15ನೇ ಶತಮಾನದಲ್ಲಿ ಜನಿಸಿದ ಧಾರ್ಮಿಕ ಹರಿಕಾರ, ಗೋಸಲ ಪೀಠದ ಅಧ್ಯಕ್ಷರಾದ ಶ್ರೀ ತೋಂಟದ ಸಿದ್ದಲಿಂಗೇಶ್ವರರು ಹರದನಹಳ್ಳಿಯಲ್ಲಿಯೇ ಜನಿಸಿದ್ದರಿಂದ ವೀರಶೈವ ಧರ್ಮದವರು ಪ್ರಬಲವಾಗಿರುವುದು

ಹಾಗೂ ಭಾರತಾದ್ಯಂತ ವೀರಶೈವ ಧರ್ಮವನ್ನು ಪ್ರಚಾರ ಮಾಡಿದ ಕೀರ್ತಿ ಶ್ರೀ ತೋಂಟದ ಸಿದ್ದಲಿಂಗೇಶ್ವರರಿಗೆ ಸಲ್ಲುತ್ತದೆ. ವೀರಶೈವ ಧರ್ಮಿಯರು ಆರ್ಥಿಕವಾಗಿ ಪ್ರಬಲರಾಗಿದ್ದು ಉತ್ತಮವಾದ ಜೀವನ ನಡೆಸುತ್ತಿದ್ದಾರೆ.

ಇವರು ಸಸ್ಯಹಾರಿಗಳಾಗಿದ್ದು ಹೆಚ್ಚು ಹೆಚ್ಚು ಸಸ್ಯಹಾರವನ್ನು ಸೇವನೆ ಮಾಡುತ್ತಾರೆ. ಇಲ್ಲಿನ ಮಹಿಳೆಯರು ಹಾಗೂ ಪುರುಷರು ಆಭರಣ ಪ್ರಿಯರಾಗಿದ್ದು ಹೆಚ್ಚು ಹೆಚ್ಚು ಆಭರಣಗಳನ್ನು ಧರಿಸುತ್ತಾರೆ. ಮದುವೆ ಹಾಗೂ ಇತರ ಶುಭ ಕಾರ್ಯಗಳಲ್ಲಿ ಈ ಗ್ರಾಮದ ಜನರಿಗೆ ಊಟದ ವ್ಯವಸ್ಥೆಯನ್ನು ಏರ್ಪಡಿಸುತ್ತಿದ್ದರು. ಶ್ರೀ ದಿವ್ಯಲಿಂಗೇಶ್ವರ ದೇವರ ರಥೋತ್ಸವದ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಕಾಣಿಕೆಯನ್ನು ನೀಡುತ್ತಿದ್ದು, ತಮ್ಮ ಹರಕೆಗಳನ್ನು ತೀರಿಸಿಕೊಳ್ಳುತ್ತಿದ್ದರು. ಈ ರಥದ ಉತ್ಸವ ಯಶಸ್ವಿಯಾಗಿ ನಡೆಯಲು ಇವರು ಸಹ ಪ್ರಮುಖರಾಗಿದ್ದಾರೆ. ವೀರಶೈವ ಧರ್ಮಿಯರು ಹೆಚ್ಚು ಹೆಚ್ಚು ಭೂಮಿಯನ್ನು ಹೊಂದಿದ್ದಾರೆ. ಕೊಳವೆ ಬಾವಿಗಳು ಅತ್ಯದಿಕವಾಗಿ ಕಂಡುಬರುವುದು ಈ ವರ್ಗದವರಲ್ಲಿ. ಈ ವರ್ಗದ ಮುಖ್ಯಸ್ಥನನ್ನು ಗೌಡಿಕೆ ಎನ್ನುತ್ತಿದ್ದು, ಸಣ್ಣ ಪುಟ್ಟ ಕಲಹಗಳು ನಡೆದಾಗ, ಊರಿನ ಪ್ರಮುಖ ದೇವರ ಕಾರ್ಯಗಳು ನಡೆಯುವಾಗ ಇವರು ಪ್ರಮುಖ ಪಾತ್ರವನ್ನು ವಹಿಸುತ್ತಿದ್ದರು.

ಹರದನಹಳ್ಳಿಯ ಸಮಾಜದಲ್ಲಿದ್ದ ಮತ್ತೊಂದು ಅತ್ಯಂತ ಪ್ರಬಲವರ್ಗವೆಂದರೆ ನಾಯಕ ಜನಾಂಗ, ಮೈಸೂರು ಒಡೆಯರ ಆಳ್ವಿಕೆಯ ಕಾಲದಲ್ಲಿ ಮಾಧವದಣ್ಣಾಯಕ ದಂಡನಾಯಕನಾಗಿ ಆಳ್ವಿಕೆ ಮಾಡುತ್ತಿದ್ದು, ಇವನ ಸಂತತಿ ಹರದನಹಳ್ಳಿಯಲ್ಲಿ ನೆಲಸಿದ್ದರಿಂದ ನಾಯಕ ವರ್ಗವು ಪ್ರಬಲವಾಯಿತು. ರಾಜರ ಕಾಲದಲ್ಲಿ ಸೇವೆ ಮಾಡುತ್ತಿದ್ದವರನ್ನು ರಾಜಸೇವಕ, ಇಲ್ಲವೆ ನಾಯಕ ಎಂದು ಕರೆಯಲಾಗುತ್ತಿತ್ತು. ಕ್ರಮೇಣ ಇವರನ್ನು ನಾಯಕ, ದಂಡನಾಯಕ, ರಾಜಪರಿವಾರ ಎಂದು ಕರೆಯಲಾಯಿತು.


ನಾಯಕ ವರ್ಗದವರು ಯೋಗ್ಯ ಭೂಮಿಯನ್ನು ಹೊಂದಿದ್ದು, ಆರ್ಥಿಕವಾಗಿ ಸಬಲರಾಗಿದ್ದಾರೆ. ಇವರು ಸಸ್ಯಾಹಾರಿ ಹಾಗೂ ಮಾಂಸಹಾರಿಗಳಾಗಿದ್ದು, ಕೆಲವರು ಮಧ್ಯಪಾನ ಮಾಡುತ್ತಿದ್ದರು. ಇವರು ಮಾರಮ್ಮನ ಕೊಂಡೋತ್ಸವದ ಸಮಯದಲ್ಲಿ ಮಾರಮ್ಮನಿಗೆ ಬಲಿನೀಡುತ್ತಿದ್ದರು. ಇವರು ಸಹ ಆಭರಣ ಪ್ರಿಯರಾಗಿದ್ದು ಹೆಚ್ಚು ಬೆಳೆಬಾಳುವ ಆಭರಣಗಳನ್ನು ಧರಿಸುವುದು, ಸ್ತ್ರೀಯರು ಸೀರೆ ಕುಪ್ಪಸ ದರಿಸಿದರೆ ಪುರುಷರು ದೋತಿ,

ನಿಲುವಂಗಿಯನ್ನು ಧರಿಸುತ್ತಾರೆ. ಕೈಗೆ ಕಡಗವನ್ನು ದರಿಸುತ್ತಿದ್ದರು. ಮದುವೆ, ಹಬ್ಬಹರಿದಿನಗಳು, ನಾಮಕರಣ ಅಲ್ಲದೆ ಅಶುಭ ಕಾರ್ಯಗಳಿಗೂ ಹೆಚ್ಚು ಹಣವನ್ನು ವೆಚ್ಚ ಮಾಡುವರು. ಹರದನಹಳ್ಳಿ ಗಡಿಮನೆಯಾಗಿದ್ದು ಇದರ ಸುತ್ತಮುತ್ತಲಿನ ಗ್ರಾಮದ ನ್ಯಾಯ ಪಂಚಾಯಿತಿಗಳನ್ನು ಈ ಜನಾಂಗದ ಮುಖ್ಯಸ್ಥರೇ ಬಗೆಹರಿಸುತ್ತದ್ದರು.

ಹರದನಹಳ್ಳಿಗೆ ಸೇರಿದ ಬಂಡಿಗೆರೆಯಲಿ ಉಪ್ಪಾರ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಹಿಂದೆ ಇವರು ಹರದನಹಳ್ಳಿಯಲ್ಲಿಯೇ ವಾಸ ಮಾಡುತ್ತಿದ್ದು ಒಮ್ಮೆ ಈ ಜನಾಂಗದವರಿಗೆ ಕಾಲರಾ ರೋಗ ಕಾಣಿಸಿಕೊಂಡಾಗ ಇತರರಿಗೆ ಕಾಯಿಲೆ ಹರಡುತ್ತದೆ ಎಂಬ ಮೂಢನಂಬಿಕೆಯಿಂದ ಹರದನಹಳ್ಳಿಯನ್ನು ತ್ಯಜಿಸಿ ವಲಸೆ ಬಂದು ಅಲ್ಲಿ ಗುಡಿಸಲುಗಳನ್ನು ನಿರ್ಮಿಸಿಕೊಂಡು ಅಲ್ಲೇ ನೆಲಸಿ ಜೀವನ ಸಾಗಿಸುತ್ತಿದ್ರು ಈ ಊರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಹುಪಾಲು ಉಪ್ಪಾರ ಜನಾಂಗಕ್ಕೆ ಸೇರಿದವರಿದ್ದಾರೆ. ಈ ಜನಾಂಗದಲ್ಲಿ ಬಾಲ್ಯವಿವಾಹ ಪದ್ದತಿ ಯತೇಚ್ಚವಾಗಿರುವುದರಿಂದ ಚಿಕ್ಕಂದಿನಲ್ಲಿಯೇ ಹುಡುಗ, ಹುಡುಗಿಯರು ಯೌವನಕ್ಕೆ ಬರುವ ಮೊದಲೇ ವಿವಾಹ ಮಾಡುವುದು ಈ ಜನಾಂಗದ ಪ್ರಮುಖ ದೊಡ್ಡ ಸಮಸ್ಯೆಯಾಗಿದೆ. ಜೀವನ ಕುಟುಂಬ ನಿರ್ವಹಣೆ ನಿಬಾಯಿಸಲು ಹಲವು ಸಂಕಷ್ಟಗಳನ್ನು ಎದುರಿಸುತ್ತಿದ್ದರೆ. ಇವರ ಶಿಕ್ಷಣದ ಮಟ್ಟ ಕಡಿಮೆ ಮಟ್ಟದ್ದಾಗಿದೆ. ಶಿಕ್ಷಣದಲ್ಲಿ ಅತಿ ಹಿಂದುಳಿದಿದ್ದಾರೆ. ಇತ್ತೀಚಿಗೆ ಹಲವಾರು ಸ್ತ್ರೀ ಸಂಘಗಳು, ಯುವಕರ ಸಂಘಗಳು ಸ್ಥಾಪನೆಯಾಗಿದ್ದು, ಉತ್ತಮ ಮಟ್ಟದ ಶಿಕ್ಷಣ ನೀಡಲು ಹಲವಾರು ಪ್ರಯತ್ನಗಳನ್ನು ನಡೆಸುತ್ತಿದ್ದಾರೆ.

ಹರದನಹಳ್ಳಿಯ ಮತ್ತೊಂದು ವರ್ಗವೆಂದರೆ ಬ್ರಾಹ್ಮಣ ಅಥವಾ ವೈಷ್ಣವ ವರ್ಗ, ಇಲ್ಲಿ ಶೈವ ಮತ್ತು ವೈಷ್ಣವರ ಸಂಘರ್ಷದ ಕಾಲದಲಿ ಗೋಸಲ ಪೀಠವನ್ನು ನಾಶ ಮಾಡಿ ಶ್ರೀ ಗೋಪಾಲಕೃಷ್ಣಸ್ವಾಮಿ ದೇವಾಲಯ ಸ್ಥಾಪಿಸಿರುವುದರಿಂದ ನಮಗೆ ತಿಳಿಯುವುದೇನೆಂದರೆ ವೈಷ್ಣವ ವರ್ಗ ಪ್ರಬಲವಾಗಿತ್ತು ಎನ್ನಬಹುದು. ಇಂತಹ ಕಡಿಮೆ ಜನಸಂಖ್ಯೆಯನ್ನು ಹೊಂದಿದ್ದು ಇತರ ಉದ್ಯೋಗಗಳಿಗೆ ಆಸಕ್ತಿ ತೋರದೆ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿ ದಂಡನಾಯಕರ ಕಾಲದಲ್ಲಿ ಲೆಕ್ಕ ಪತ್ರದ ಅಧಿಕಾರಿಗಳಾಗಿ ಸೇವೆ ಸಲ್ಲಿಸಿರುವುದನ್ನು ಕಾಣಬಹುದು. ಇಲ್ಲಿ ಹಲವಾರು ದೇವಸ್ಥಾನಗಳಲ್ಲಿ ಅರ್ಚಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಹರದನಹಳ್ಳಿಯಲಿ ಮುಸ್ಲಿಂ ಪಂಥದವರು ಊರಿನ ಮಧ್ಯಭಾಗದಲ್ಲಿ ವಾಸಿಸುತ್ತಿದ್ದು ಅವರು ಪ್ರಾರ್ಥನೆಗಳನ್ನು ಮಾಡಲು ಪ್ರಾರ್ಥನಾ ಮಂದಿರ ನಿರ್ಮಿಸಿರುವುದನ್ನು ಕಾಣಬಹುದು.



ಮಸೀದಿ ಚಿತ್ರ

ಕಾಲಕ್ರಮೇಣ ಹಿಂದೂ–ಮುಸ್ಲಿಂ ನಡುವೆ ಸಣ್ಣ ಕಲಹಗಳು ಅಥವಾ ಸಂಘರ್ಷಗಳು ಉಂಟಾಗಿ ಹಲವು ಮುಸ್ಲಿಂರು ಸಮೀಪದ ಚಾಮರಾಜನಗರಕ್ಕೆ ಬಂದು ನೆಲೆಸಿದರು. ಇವರು ಹೆಚ್ಚಾಗಿ ಶ್ರಮ ವಿನಿಯೋಗಿಸುತ್ತಿತ್ತು. ಇಂಜಿನಿಯರಿಂಗ್, ವರ್ಕ್‌ಶಾಪ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಹಾಗೆ ಹರದನಹಳ್ಳಿಯಲ್ಲಿ ವಿವಿಧ ವರ್ಗದವರು ಕಂಡು ಬಂದು ಪ್ರತಿಯೊಬ್ಬ ಧರ್ಮಿಯರು ಸಹೋದರರಂತೆ ಬಂಧು ಬಳಗದವರಂತೆ ಜೀವನ ನಡೆಸುತ್ತಿದ್ದಾರೆ, ಎಲ್ಲಾ ದೇವಾಲಯಗಳಿಗೆ ಹೋಗುವ ಮುಕ್ತ ಸ್ವಾತಂತ್ರ್ಯವನ್ನು ನೀಡಲಾಗಿದ್ದು, ಅಂಗಡಿ, ರಸ್ತೆ, ಕೆರೆ, ನೀರು ಇನ್ನೂ ಮುಂತಾದ ಕಡೆಗಳಲ್ಲಿ ಸಮನಾದ ಸ್ಥಾನವನ್ನೊಂದಿದ್ದಾರೆ. ಪ್ರತಿಯೊಂದು



ವರ್ಗದಲ್ಲಿಯೂ ಒಬ್ಬೊಬ್ಬ ಮುಖ್ಯಸ್ಥನಿದ್ದು ಅವರುಗಳು ಊರಿನಲ್ಲಿ ನಡೆಯುವ ಪ್ರಮುಖ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದು, ಸರಿಯಾದ ತೀರ್ಮಾನ ತೆಗೆದುಕೊಳ್ಳುತ್ತಿದ್ದರು.

ಹರದನಹಳ್ಳಿಯ ಜನರ ಆಹಾರ ಪದ್ಧತಿಯು ಸರಳವಾಗಿದ್ದು ಸಸ್ಯಹಾರಿಗಳಾಗಿದ್ದು, ರಾಗಿ, ಜೋಳ, ಗೋದಿ, ಭತ್ತ ಪದಾರ್ಥಗಳ ಸೇವನೆ ಮಾಡುತ್ತಿದ್ದರು. ವಿಶೇಷ ಸಂದರ್ಭಗಳಲ್ಲಿ ಅಂದರೆ ಜಾತ್ರೆ, ಉತ್ಸವ, ಹಬ್ಬಹರಿದಿನ, ಸುಗ್ಗಿಯ ಕಾಲದಲ್ಲಿ ಮಧ್ಯಪಾನ ಸೇವನೆ ಮಾಡುವರು.

ಇಲ್ಲಿನ ಮಕ್ಕಳು, ಯುವಕರು ರಥೋತ್ಸವ, ಜಾತ್ರೆ ಉತ್ಸವಗಳಲ್ಲಿ ಕೋಲಾಟ, ಕತ್ತಿವರಸೆ, ಇನ್ನೂ ಮುಂತಾದ ಹೊರಾಂಗಣ ಆಟಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಹರದನಹಳ್ಳಿಯಲ್ಲಿ ಜನರು ಜಾನಪದ ಕಲೆಯಲ್ಲಿ ವಿಶೇಷವಾಗಿ ಆಸಕ್ತಿ ಹೊಂದಿದ್ದು, ಮದುವೆ ಹಾಗೂ ಇತರ ಶುಭ ಸಮಾರಂಭಗಳಲ್ಲಿ ರಾಗವಾಗಿ ಸ್ಪಷ್ಟವಾಗಿ ಜಾನಪದ ಹಾಡುಗಳನ್ನು ಹಾಡುತ್ತಿದ್ದರು. ಅಲ್ಲದೆ ಜಮೀನಿನಲ್ಲಿ ಬೀಜವನ್ನು ಬಿತ್ತುವ ವೇಳೆಯಲ್ಲಿ ಬೆಳೆ ಕೊಯ್ಲಿನ ವೇಳೆಯಲ್ಲಿಯೂ ಸಹ ಜಾನಪದ ಹಾಡನ್ನು ಇಂಪಾದ ಧ್ವನಿಯಲ್ಲಿ ಹಾಡುತ್ತಿದ್ದರು. ಮಗುವು ಅಳುತ್ತಿದ್ದರೆ ಅದನ್ನು ಸಮಾಧಾನ ಪಡಿಸಲು, ರಾಗಿ ಜೋಳಗಳನ್ನು ಮನೆಯಲ್ಲಿ ಬೀಸುವಾಗ ಜಾನಪದ ಹಾಡುಗಳನ್ನು ಹಾಡುತ್ತಿದ್ದರು.

ಒಟ್ಟಾರೆಯಾಗಿ ಹೇಳುವುದಾದರೆ ಹರದನಹಳ್ಳಿ ಜನರು ಸಾಮಾಜಿಕ ವ್ಯವಸ್ಥೆಯು ಉತ್ತಮವಾಗಿದ್ದು, ಇಲ್ಲಿಯ ಆಹಾರ ಪದ್ಧತಿ, ಉಡುಗೆ ತೊಡುಗೆಗಳು, ಜನರ ಜನಜೀವನ ಸರಳವಾಗಿದ್ದು, ಆರೋಗ್ಯಕರವಾದ ಸಮಾಜವನ್ನು ಹೊಂದಿದ್ದು, ಹಲವು ಸಮಸ್ಯೆಗಳಿದ್ದರೂ ಅವುಗಳಿಗೆ ತಲೆಕೆಡಿಸಿಕೊಳ್ಳದೆ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಅಲ್ಲದೆ ಜನರ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಕರ್ನಾಟಕ ರಾಜ್ಯದ ರೇಷ್ಮೆ ಮತ್ತು ಜವಳಿ ಖಾತೆ ಸಚಿವರು ಹಾಗೂ ಚಾಮರಾಜನಗರ ಜಿಲ್ಲೆಯ ಉಸ್ತುವಾರಿಯಾಗಿದ್ದು ಎಂ. ಮಹದೇವ್‌ರವರು 27-01-2002ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಉದ್ಘಾಟಿಸಿದ್ದಾರೆ. ಅಲ್ಲದೆ ಇಬ್ಬರು ವೈದ್ಯರುಗಳಿದ್ದು, ಒಬ್ಬರು ಮಹಿಳಾ ವೈದ್ಯರು ಮತ್ತು ಇನ್ನೊಬ್ಬ ಪುರುಷ ವೈದ್ಯರು ಸೇವೆ ಸಲ್ಲಿಸುತ್ತಿದ್ದಾರೆ. 3 ಮಂದಿ ನರ್ಸ್‌ಗಳು ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇದರಿಂದ ಇಲ್ಲಿನ ಜನರು ಆರೋಗ್ಯವಂತರಾಗಿದ್ದಾರೆ.

ಹರದನಹಳ್ಳಿಯ ಆರ್ಥಿಕ ವಿಚಾರಗಳು:

ಹರದನಹಳ್ಳಿಯ ಜನರ ಮುಖ್ಯ ಕಸುಬು ವ್ಯವಸಾಯವಾಗಿದ್ದು, ಜನಸಂಖ್ಯೆಯಲ್ಲಿ ಕೃಷಿಕರೇ ಹೆಚ್ಚಾಗಿರುವುದನ್ನು ಕಾಣಬಹುದು. ಇಲ್ಲಿನ ರೈತರು ಭೂಮಿಯನ್ನು ವ್ಯವಸಾಯಕ್ಕೆ ತಕ್ಕಂತೆ ಹದ ಮಾಡಿ, ಬಿತ್ತನೆ ಬೀಜಗಳನ್ನು ಹಾಕಿ ಬೆಳೆಯನ್ನು ಬೆಳೆಯುವರು. ಹರದನಹಳ್ಳಿಯಲ್ಲಿ ವ್ಯವಸಾಯ ಮಾಡಲು ಮರುಗದ ಕೆರೆಯ ನೀರನ್ನು ಕಾಲುವೆಗಳನ್ನು ನಿರ್ಮಿಸಿಕೊಂಡು ಅದರ ಮೂಲಕ ನೀರಿನ ಪ್ರಯೋಜನ ಪಡೆದುಕೊಂಡು ಭೂಮಿಯಲ್ಲಿ ಬೆಳೆ ಬೆಳೆಯುತ್ತಿದ್ದರು. ಭೂಮಿಯನ್ನು ಉಳುಮೆ ಮಾಡಲು ಎತ್ತುಗಳನ್ನು ಬಳಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಆಧುನಿಕ ಯಂತ್ರವಾದ ಟ್ರಾಕ್ಟರ್‌ನಿಂದ ಉಳುಮೆ ಮಾಡಿ ಫಸಲು ತೆಗೆಯುತ್ತಾರೆ. ಬೆಳೆಯು ಸಂಪದ್ಭರಿತವಾಗಿ ಬೆಳೆಯಲು ದನದ ಗೊಬ್ಬರ, ರಾಸಾಯನಿಕ ಗೊಬ್ಬರ, ಕ್ರಿಮಿಕೀಟ ನಾಶಕಗಳನ್ನು ಬಳಸುವರು. ಹರದನಹಳ್ಳಿಯಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ ರಾಗಿ, ಜೋಳ, ಕಬ್ಬು, ಅರಿಶಿಣ, ಬಾಳೆ, ವಿಳ್ಯದೆಲೆ, ಅಡಿಕೆ, ಶುಂಠಿ ಇನ್ನು ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ಇದರ ಜೊತೆಗೆ ದ್ವಿದಳ ದಾನ್ಯಗಳಾದ ಹುರುಳಿ, ಹಲಸಂದೆ, ತೊಗರಿಬೇಳೆಯನ್ನು ಬೆಳೆಯುವರು. ಅರಿಶಿಣ, ಅಡಿಕೆ, ಶುಂಠಿಯನ್ನು ನಮ್ಮ ಹೊರ ರಾಜ್ಯವಾದ ತಮಿಳುನಾಡಿನ ಸತ್ತಿಮಂಗಲ, ಈರೋಡ್, ಕೊಯಮತ್ತೂರು ಜಿಲ್ಲೆಗಳ ವ್ಯಾಪಾರ ಕೇಂದ್ರಗಳಿಗೆ ರೈತರು ತೆಗೆದುಕೊಂಡು ಹೋಗಿ ಮಾರಟ ಮಾಡಿ ಹೆಚ್ಚು ಹೆಚ್ಚು ಲಾಭವನ್ನು ಗಳಿಸುತ್ತಿದ್ದಾರೆ. ದಂಡನಾಯಕರ ಆಳ್ವಿಕೆಯ ಕಾಲದಿಂದಲೂ ಹರದನಹಳ್ಳಿಯಲ್ಲಿ ವಿಳ್ಯದೆಲೆ, ಅಡಿಕೆಗೆ ಹೆಚ್ಚಿನ ಬೇಡಿಕೆಯಿದ್ದು ಅದು ಇಂದಿಗೂ ತನ್ನ ಬೇಡಿಕೆಯನ್ನು ಉಳಿಸಿಕೊಂಡಿದೆ. ಹಲವು ಮಂದಿ ಹರದನಹಳ್ಳಿಯ ರೈತರು ಹತ್ತಿರದ ಚಾಮರಾಜನಗರದ ಮಾರುಕಟೆಗಳಿಗೆ ತಮ್ಮ ಬೆಳಗಳನ್ನು ಮಾರಾಟ ಮಾಡುತ್ತಾರೆ. ಇಲ್ಲವೇ ಸ್ಥಳೀಯ ಮಧ್ಯವರ್ತಿಗಳಿಗೆ ಮಾರಾಟ ಮಡುತ್ತಾರೆ. ಸೇರು, ಕೊಳಗೆ, ಸ್ಕೇಲು, ಮಣ, ಟನ್‌ಗಳ ಅಳತೆ ಪ್ರಮಾಣಗಳಲ್ಲಿ ವಸ್ತುಗಳನ್ನು ಮಾರಾಟ ಮಾಡುತ್ತಾರೆ.

ಹರದನಹಳ್ಳಿಯಲ್ಲಿ ಆಳ್ವಿಕೆ ಮಾಡುತ್ತಿದ್ದ ದಂಡನಾಯಕರ ಕಾಲದಲ್ಲಿ ವಸ್ತುವಿನಿಮಯ ಪದ್ದತಿ ಅಸ್ಥಿತ್ವದಲ್ಲಿದ್ದು ಕಾಲಕ್ರಮೇಣ ನಾಣ್ಯ ಪದ್ದತಿಯನ್ನು ವಸ್ತುಗಳನ್ನು ಕೊಳ್ಳಲು, ಮಾರಾಟ ಮಾಡಲು ಬಳಸುವರು. ಹಿಂದೆ ಇಲ್ಲಿನ ಪ್ರಸಿದ್ದ ದೇವಾಲಯವಾದ ಶ್ರೀ

ದಿವ್ಯಲಿಂಗೇಶ್ವರ ದೇವಾಲಯದ ಮುಂದೆ ಮಾರುಕಟ್ಟೆ ಕೇಂದ್ರಗಳನ್ನು ಸ್ಥಾಪಿಸಿದ್ದರು. ಹೊರರಾಜ್ಯದ ವ್ಯಾಪಾರಿಗಳು ಹಾಗೂ ಚಾಮರಾಜನಗರ ಜಿಲ್ಲೆಗೆ ಸೇರಿದ ಗುಂಡ್ಲುಪೇಟೆ, ಯಳಂದೂರು, ಚಾಮರಾಜನಗರ ಮತ್ತು ಕೊಳ್ಳೇಗಾಲ ತಾಲ್ಲೂಕಿನ ಸುತ್ತಮುತ್ತಲಿನ ವ್ಯಾಪಾರಸ್ಥರು ಹರದನಹಳ್ಳಿಗೆ ಬರುತ್ತಿದ್ದು, ಹರದನಹಳ್ಳಿ ವ್ಯಾಪಾರದ ಪ್ರಮುಖ ಕೇಂದ್ರವಾಗಿತ್ತು.

ಹರದನಹಳ್ಳಿಯಲ್ಲಿ ವ್ಯವಸಾಯದ ಜೊತಗೆ ಕುರಿಗಳನ್ನು ಸಾಕುವುದು, ಕೋಳಿಗಳನ್ನು ಸಾಕುವುದು, ಮಡಿಕೆ ತಯಾರಿಸುವುದು, ಮರಗೆಲಸ ಮಾಡುವುದು, ಹಗ್ಗ ನೇಯುವುದು, ಬೀಡಿ ಕಟ್ಟುವುದು, ಗಂಧದ ಕಡ್ಡಿಯನ್ನು ತಯಾರಿಸುವುದು, ಇನ್ನೂ ಮುಂತಾದ ವಿವಿಧ ರೀತಿಯ ಉಪಕಸುಬು ಮಾಡುತ್ತಿದ್ದು ಉತ್ತಮವಾದ ಸಮೃದ್ಧಿಯಾದ ಜೀವನ ಮಾಡುತ್ತಿದ್ದರು.

ಹರದನಹಳ್ಳಿಯ ಜನರ ಇನ್ನೊಂದು ಮುಖ್ಯ ಕಸುಬು ಎಂದರೆ ಮೀನುಗಾರಿಕೆ, ಹರನದಹಳ್ಳಿಯ 2 ಪ್ರಸಿದ್ದ ಕೆರೆಗಳಾದ ಮರಗದ ಕೆರೆ ಮತ್ತು ಬಂಡಿಕೆರೆಗಳಲ್ಲಿ ನೀರು ಯತೇಚ್ಚವಾಗಿದ್ದ ಕಾಲದಲಿ, ಆ ಕೆರೆಯಲಿ ವಿವಿಧ ಜಾತಿಯ ಮೀನುಗಳನ್ನು ಹಿಡಿದುಕೊಂಡು ಅವುಗಳನ್ನು ಹರದನಹಳ್ಳಿಯ ಸುತ್ತಮುತ್ತಲಿನ ಗ್ರಾಮಗಳಿಗೆ ಸೈಕಲ್‌ಗಳ ಮೂಲಕ, ಬಸ್‌ಗಳ ಮೂಲಕ ತೆಗೆದುಕೊಂಡು ಹೋಗಿ ಮಾರಾಟ ಮಾಡಿ ಹೆಚ್ಚು ಹೆಚ್ಚು ಹಣವನ್ನು ಗಳಿಸುತ್ತಿದ್ದು ಜೀವನದಲ್ಲಿ ಯಾವುದೇ ರೀತಿಯ ಕಷ್ಟಗಳು ಬರದಂತೆ ಉತ್ತಮ ಜೀವನ ನಡೆಸುತ್ತಿದ್ದರು.

ಆದರೆ ಕಾಲಕ್ರಮೇಣ ಹರದನಹಳ್ಳಿಯ ಮರಗದ ಕೆರೆ ಮತ್ತು ಬಂಡಿಕೆರೆಯ ಸಮೀಪದಲ್ಲಿ ಎಣ್ಣೆಹೊಳೆ ಜಲಾಶಯ ಹಾಗೂ ಸುವರ್ಣವತಿ ಜಲಾಶಯವನ್ನು ನಿರ್ಮಿಸಿದ್ದರಿಂದ ಈ ಕೆರೆಗಳ ನೀರಿನ ಪ್ರಮಾಣ ತೀರ ಕಡಿಮೆಯಾಗಿದ್ದು ಕೆರೆಗಳೆಲ್ಲಾ ಭತ್ತಿ ಹೋಗಿರುವುದರಿಂದ ಹರದನಹಳ್ಳಿಯ ರೈತರು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದು, ಮೀನುಗಾರಿಕೆಯು ಸಹ ನಾಶವಾಗಿ, ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಲ್ಲಿನ ರೈತರು ಜೀವನ ನಿರ್ವಹಣೆಗಾಗಿ ಸದ್ಯದ ಪರಿಸ್ಥಿತಿಯಲ್ಲಿ ಹೊರ ರಾಜ್ಯಗಳಿಗೆ ಇಲ್ಲವೇ ಹರದನಹಳ್ಳಿಯ ಸುತ್ತ ಮುತ್ತಲಿನ ಗ್ರಾಮಗಳಿಗೆ ಕೂಲಿಗಾಗಿ ಹೋಗುತ್ತಿದ್ದು, ಇಲ್ಲಿನ ಜನರ

ಜೀವನ ಸ್ಥಿತಿ ತೀರ ಹದಗೆಟ್ಟಿದ್ದು ಇತರ ಪಟ್ಟಣಗಳಿಗೆ ವಲಸೆ ಹೋಗಿದ್ದು ಕಾರ್ಖಾನೆಗಳಲ್ಲಿ ಸಣ್ಣಮಟ್ಟ ಕೆಲಸಗಳನ್ನು ಮಾಡುತ್ತಿದ್ದು ಪಟ್ಟಣ ಪ್ರದೇಶಗಳಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾರೆ.

ಹರದನಹಳ್ಳಿಯಲ್ಲಿರುವ ಕೆಲವು ರೈತರು ಕೊಳವೆ ಬಾವಿಗಳನ್ನು ಹೊಂದಿದ್ದು ಲಾಭದಾಯಕ ಬೆಳೆಯನ್ನು ಬೆಳೆಯುತ್ತಿದ್ದು ಆರ್ಥಿಕವಾಗಿ ಸಬಲರಾಗಿದ್ದಾರೆ. ಇವರು ಮಾತ್ರ ತೆಂಗು, ಅಡಿಕೆ, ಬಾಳೆ, ವಿಳ್ಯದೆಲೆ, ಪದಾರ್ಥಗಳನ್ನು ಬೆಳೆಯುತ್ತಿದ್ದು ಹೆಚ್ಚು ಆದಾಯ ಗಳಿಸುತ್ತಿದ್ದಾರೆ. ಇನ್ನುಳಿದ ರೈತರು ಮಳೆಯನ್ನೇ ಆಶ್ರಯಿಸಿದ್ದು ಮಳೆಯನ್ನೇ ನಂಬಿಕೊಂಡು ಭೂಮಿಯನ್ನು ಉಳುಮೆ ಮಾಡಿ ವ್ಯವಸಾಯ ಮಾಡಿ ಸಾಕಷ್ಟು ಪ್ರಮಾಣದ ಲಾಭವನ್ನು ಗಳಿಸುತ್ತಿದ್ದಾರೆ.

ಹರದನಹಳ್ಳಿಯಲ್ಲಿ ಹೆಚ್ಚು ಪ್ರಮಾಣದ ಮಳೆಯಾದರೆ ಇಲ್ಲಿರುವ ಕೆರೆಗಳು ಹೆಚ್ಚು ಭರ್ತಿಯಾದರೆ ವರ್ಷ ಪೂರ್ತಿ ವ್ಯವಸಾಯ ಮಾಡಲು ಅನುಕೂಲವಾಗುತ್ತದೆ.

ಹರದನಹಳ್ಳಿಯಲ್ಲಿ ಮೈಸೂರು ಒಡೆಯರು ಹಾಗೂ ದಂಡನಾಯಕರ ಆಳ್ವಿಕೆಯ ಕಾಲದಲ್ಲಿ ರೈತರು ವ್ಯಾಪಾರಸ್ಥರು ತಾವು ಬೆಳದ ಪದಾರ್ಥಗಳನ್ನು ಮಾರಾಟ ಮಾಡಲು ಎತ್ತಿನ ಗಾಡಿಗಳನ್ನು ಬಳಸುತ್ತಿದ್ದರು. ಕ್ರಮೇಣವಾಗಿ ಬೈಸಿಕಲ್ ಹಾಗೂ ಇತರ ವಾಹನಗಳನ್ನು ಇತ್ತೀಚಿನ ದಿನಗಳಲ್ಲಿ ಇದರ ಮೂಲಕ ವಸ್ತುಗಳನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಾರೆ. ಹಿಂದಿನಿಂದಲೂ ರಸ್ತೆ ಸಾರಿಗೆಗೆ ಯೋಗ್ಯವಾಗಿದ್ದು ಹೊರ ರಾಜ್ಯದ ತಮಿಳುನಾಡಿಗೆ ಹೋಗುವಾಗ ಈ ಊರಿನ ಮೂಲಕವೇ ಹಾದು ಹೋಗಬೇಕಾಗಿದ್ದು ರಾಷ್ಟ್ರೀಯ ಹೆದ್ದಾರಿಯ ಮಾರ್ಗಗಳು ಇಲ್ಲಿವೆ.

ಹರದನಹಳ್ಳಿಯ ಜನರು ಇತ್ತೀಚಿಗೆ ಪ್ರಯಾಣ ಮಾಡಲು ಯತೇಚ್ಚವಾಗಿ ಸ್ಕೂಟರು, ಕಾರುಗಳನ್ನು ವಿಶೇಷವಾಗಿ ಬಳಸುವರು. ಇಲ್ಲಿನ ಜನರು ವ್ಯವಸಾಯ ಹಗೂ ವ್ಯಾಪರದ ಜೊತೆಗೆ ಹಸು, ಎಮ್ಮೆಗಳ ಹಾಲನ್ನು ಮಾರಾಟ ಮಾಡಿ ಹೆಚ್ಚು ಹಣಗಳಿಸುತ್ತಾರೆ. ಅಲ್ಲದೆ ಮೊಸರು, ಬೆಣ್ಣೆ, ತುಪ್ಪಗಳನ್ನು ಸ್ಥಳೀಯ ಜನರಿಗೆ ಮಾರಾಟ ಮಾಡುತ್ತಾರೆ. ಇಲ್ಲಿ ಹಾಲು

ಸಹಕರ ಸಂಘವಿದ್ದು ಹಸುಗಳಿಗೆ ಬೇಕಾದ ಬೂಸ, ಹಿಂಡಿ ಇನ್ನು ಮುಂತಾದ ಆಹಾರವನ್ನು ಇಲ್ಲೇ ಪಡೆಯುತ್ತಾರೆ.

ಹರದನಹಳ್ಳಿಯಲ್ಲಿ ಹಲವು ಸ್ತ್ರೀ ಸಂಘಗಳು ಇತ್ತೀಚೆಗೆ ಸ್ಥಾಪನೆಯಾಗಿದ್ದು ಆ ಸಂಘಗಳು ಹೆಚ್ಚು ಬಂಡವಾಳ ಹಾಕಿ ಯತೇಚ್ಚವಾಗಿ ಲಾಭಗಳಿಸಿ ವಿವಿಧ ವೃತ್ತಿಗಳನ್ನು ಮಾಡುವುದರ ಜೊತೆಗೆ ಸ್ತ್ರೀಸಂಘಗಳು ಆರ್ಥಿಕವಾಗಿ ಹೆಚ್ಚು ಪ್ರಬಲರಾಗಿದ್ದಾರೆ.

ಹರದನಹಳ್ಳಿಯು ಆರ್ಥಿಕ ಪರಿಸ್ಥಿತಿಯ ಮದ್ಯಮ ಹಂತದಲ್ಲಿದ್ದು, ಪ್ರಗತಿಯ ಹಾದಿಯಲ್ಲಿ ಇದ್ದು ವ್ಯಾಪಾರದ ಪ್ರಮಾಣ ಕಡಿಮೆಯಾಗಿರುವುದೇ ಹರದನಹಳ್ಳಿ ಹಿಂದುಳಿಯಲು ಪ್ರಮುಖ ಕಾರಣ. ಹರದನಹಳ್ಳಿ ಜನರು ಶ್ರಮಜೀವಿಗಳಾಗಿದ್ದು ಶ್ರಮಕ್ಕೆ ಸರಿಯಾದ ಪ್ರತಿಫಲ ದೊರೆಯುತ್ತಿಲ್ಲ.

ಶೈಕ್ಷಣಿಕ ವಿಚಾರಗಳು

ಹರದನಹಳ್ಳಿಯಲ್ಲಿ ಪುರಾತನ ಕಾಲದಿಂದಲೂ ಶಿಕ್ಷಣ ವ್ಯವಸ್ಥೆ ಅಸ್ಥಿತ್ವದಲ್ಲಿತುತ. ಒಟ್ಟು ಜನಸಂಖ್ಯೆಯಲ್ಲಿ ಶೇ. 80 ಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಅಕ್ಷರಸ್ಥರು, ವಿದ್ಯಾವಂತರನ್ನು ಹರದನಹಳ್ಳಿಯಲ್ಲಿ ಕಾಣುತ್ತೇವೆ. ಬಾಲಕೀಯರಿಗಿಂತ ಬಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣ ಪಡೆಯುತ್ತಿದ್ದು ಹೆಚ್ಚು ಹೆಚ್ಚು ಸರ್ಕಾರಿ ಉದ್ಯೋಗಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಹರದನಹಳ್ಳಿಯಲ್ಲಿ ಇತ್ತೀಚೆಗೆ ಆರ್ಥಿಕ ಸಮಸ್ಯೆಯಿದ್ದರೂ ಪೋಷಕರು ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿರುವುದು ನಿಜವಾಗಿಯೂ ತೃಪ್ತಿಕರ ವಿಷಯವಾಗಿದೆ.



ಹರದನಹಳ್ಳಿಯಲ್ಲಿ ಒಂದು ಕಿರಿಯ ಪ್ರಾಥಮಿಕ ಶಾಲೆಯಿದ್ದು ಅದಕ್ಕೆ 100ಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ. ಈಗಿನ ಈ ಶಿಕ್ಷಣದ ಕಟ್ಟಡವು ಮೈಸೂರಿನ ಮಹಾರಾಜರು ವಿಶ್ರಾಂತಿ ಪಡೆಯುತ್ತಿದ್ದ ಕಟ್ಟಡ ಎನ್ನಲಾಗಿದೆ. ಹಾಗೂ ದಂಡನಾಯಕರ ಆಳ್ವಿಕೆಯ ಕಾಲದಲ್ಲಿ ಈ ಕಟ್ಟಡದಲ್ಲಿ ಸೈನಿಕರು ವಾಸಿಸುವ ಮನೆಯಾಗಿತ್ತು.

ಚಾಮರಾಜನಗರದಿಂದ ಸತ್ಯಮಂಗಲಕ್ಕೆ ಹರದನಹಳ್ಳಿ ಮಾರ್ಗವಾಗಿ ಹಾದು ಹೋಗುವ ರಸ್ತೆ ಬದಿಗಳಲ್ಲಿ ಹರದನಹಳ್ಳಿಯಲ್ಲಿರುವ ಎಲ್ಲಾ ಶಿಕ್ಷಣ ಕೇಂದ್ರಗಳು ಗೋಚರವಾಗುತ್ತವೆ. ಇಲ್ಲಿನ ಶಾಲೆಗಳ ವಾತಾವರಣ ಅನುಕೂಲವಾಗಿದ್ದು ವಿದ್ಯಾರ್ಥಿಗಳಿಗೆ ಆಟ ಪಾಠ, ಹಾಗೂ ಇತರ ಮನರಂಜನೆಗೆ ಯಾವುದೇ ರೀತಿಯ ತೊಂದರೆಗಳು ಕಂಡುಬರುವುದಿಲ್ಲ. ಹರದನಹಳ್ಳಿಯ ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಹೆಚ್ಚಿನ ಆಸಕ್ತಿಯಿದ್ದು ವಿಶೇಷವಾಗಿ ಕ್ರಿಕೆಟ್, ವಾಲಿಬಾಲ್, ಪುಟ್‌ಬಾಲ್, ಕಬಡ್ಡಿ, ಖೋ ಖೋ, ಮುಂತಾದ ಆಟಗಳಲ್ಲಿ ತಾಲ್ಲೂಕು ಮಟ್ಟದ , ಹೋಬಳಿ ಮಟ್ಟದ ದಸರ ಮಟ್ಟದಲ್ಲಿ ನಡೆಯುವ ಕ್ರೀಡೆಗಳಲ್ಲಿ ಭಾಗವಹಿಸಿ ಹಲವು ಬಹುಮಾನಗಳನ್ನು ಪಡೆದುಕೊಂಡಿದ್ದಾರೆ.

ಹರದನಹಳ್ಳಿಯು ಇತರ ಸುತ್ತಮುತ್ತಲಿನ ಗ್ರಾಮಗಳಾದ ಬ್ಯಾಡಮೂಡ್ಲು, ಅಂಕನಶೆಟ್ಟಿಪುರ, ಚಿಕ್ಕಮೋಳೆಗಳಲ್ಲಿ ಇರುವ ಶಾಲೆಗಿಂತ, ವಿದ್ಯಾರ್ಥಿಗಳ ಸಂಖ್ಯೆಗಿಂತ



ಉತ್ತಮ ಗುಣಮಟ್ಟದ ಶಿಕಷಣವನ್ನು ಹರದನಹಳ್ಳಿಯಲ್ಲಿ ಸೌಲಭ್ಯವಿರುವುದರಿಮದ ಹರದನಹಳ್ಳಿ ಶಾಲೆಯ ಇತ್ತೀಚಿನ ಕ್ಲಸ್ಟರ್ ಮಟ್ಟದ ಸಮುದಾಯ ಕೇಂದ್ರವಾಗಿ ಮಾರ್ಪಟ್ಟಿದೆ.

ಹರದನಹಳ್ಳಿಯಲ್ಲಿರುವ ಶಾಲೆಗಳಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳು ಹಿತಕರವಾಗಿದೆ. ಅಂದರೆ ಶಾಲೆಯ ಕೊಠಡಿ, ಆಟದ ಮೈದಾನ, ದಕ್ಷತೆಯ ಶಿಕ್ಷಕರು, ಕಾಳಜಿಯಿಂದ ಅಕ್ಷರ ಕಲಿಸಲು ಆಸಕ್ತರಾಗಿದ್ದರೂ ವಿದ್ಯಾರ್ಥಿಗಳು ಶಾಲೆಯನ್ನು ಅರ್ಧಕ್ಕೆ ಬಿಟ್ಟು ವ್ಯಾಪಾರ ಅಥವಾ ಇತರ ಪಟ್ಟಣಗಳಿಗೆ ವಲಸೆ ಹೋಗಿ ಕಾರ್ಖಾನೆಗಳಲ್ಲಿ ಅಂಗಡಿಗಳಲ್ಲಿ, ಬಾರ್‌ಗಳಲ್ಲಿ, ಹೋಟೆಲ್‌ಗಳಲ್ಲಿ ಕಾರ್ಯನಿರ್ವಹಿಸುವುದು ನಿಜಕ್ಕೂ ದುಃಖಕರ ವಿಷಯವಾಗಿದೆ.

ಹರದನಹಳ್ಳಿಯಲ್ಲಿರುವ ಸರ್ಕಾರಿ ಶಾಲೆಗಳ ಸಂಖ್ಯೆ ಸುಮಾರು 5 ಇದ್ದು ಅವುಗಳೆಂದರೆ ಕಿರಿಯ ಪ್ರಾಥಮಿಕ ಶಾಲೆ, ಹಿರಿಯ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಉರ್ದು ಶಾಲೆ ಹಾಗೂ ಬಂಡಿಗೆರೆಗೆ ಸೇರಿದ ಹಿರಿಯ ಪ್ರಾಥಮಿಕ ಶಾಲೆ ಹಗೂ ಸರ್ಕಾರದಿಂದ ಅನುಮತಿ ಪಡೆದುಕೊಂಡು ಸ್ಥಾಪನೆಯಾಗಿರುವ ಒಂದು ಖಾಸಗಿ ಕಾನ್ವೆಂಟ್.

ಹರದನಹಳ್ಳಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಒಟ್ಟು 353 ವಿದ್ಯಾರ್ಥಿಗಳಿದ್ದು ಅದರಲ್ಲಿ ಒಂದರಿಂದ ಏಳನೇ ತರಗತಿಯವರೆಗೆ ಓದುವ ಬಾಲಕರ ಸಂಖ್ಯೆ 190 ಹಾಗೂ ಬಾಲಕಿಯರ ಸಂಖ್ಯೆ 163 ಇದ್ದು, ಸುಮಾರು 10 ಮಂದಿ ಶಿಕ್ಷಕರು ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈಗಿನ ಸರ್ಕಾರದಿಂದ ನೀಡುವ ಮದ್ಯಾಹ್ನದ ಬಿಸಿಯೂಟವನ್ನು ಇಲ್ಲಿ ನೀಡಲಾಗುತ್ತಿದ್ದು 3 ಮಂದಿ ಅಡಿಗೆಭಟ್ಟರು ಅಡಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಹರದನಹಳ್ಳಿಯ ಪ್ರೌಢಶಾಲೆಯಲ್ಲಿ ಎಂಟರಿಂದ ಹತ್ತನೇ ತರಗತಿವರೆಗೆ 420 ಒಟ್ಟು ವಿದ್ಯಾರ್ಥಿಗಳಿದ್ದು ಅವರಲ್ಲಿ 250 ಬಾಲಕರು, 170 ಬಾಲಕಿಯರು ವಿದ್ಯಾಭ್ಯಾಸ ಮಾಡುತ್ತಿದ್ದು, ಬಾಲಕರಿಗಿಂತ ಬಾಲಕಿಯರು ಚನ್ನಾಗಿ ಓದುತ್ತಿದ್ದು ಹೆಚ್ಚು ಹೆಚ್ಚು ಅಂಕಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಈ ಶಾಲೆಯಲ್ಲಿ ಒಟ್ಟು 10 ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದು ಇವರು ಸರ್ಕಾರದಿಂದ ನೇಮಕಗೊಂಡ ಶಿಕ್ಷಕರಾಗಿರುತ್ತಾರೆ.

ಸರ್ಕಾರಿ ಉರ್ದು ಶಾಲೆಯಲ್ಲಿ ಒಟ್ಟು 29 ವಿದ್ಯಾರ್ಥಿಗಳಿದ್ದು 18 ಬಾಲಕರು 11 ಬಾಲಕಿಯರು ವಿದ್ಯಾಭ್ಯಾಸ ಮಾಡುತ್ತಿದ್ದು. ಸರ್ಕಾರದಿಂದ ನೇಮಕಗೊಂಡ ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಹರದನಹಳ್ಳಿಗೆ ಸೇರಿದ ಬಂಡಿಗೆರೆಯಲ್ಲಿ 460 ವಿದ್ಯಾರ್ಥಿಗಳಿದ್ದು 280 ಬಾಲಕರು, 160 ಬಾಲಕಿಯರು ವಿದ್ಯಾಭ್ಯಾಸ ಮಾಡುತ್ತಿದ್ದು ಸರ್ಕಾರದಿಂದ ನೇಮಕಗೊಂಡ 7 ಉಪಾಧ್ಯಾಯರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಶಾಲೆಯಲ್ಲಿಐ ಸಹ ಇತ್ತಚಿಗೆ ಸರ್ಕಾರ ರೂಪಿಸಿರುವ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯಿದೆ.

ಸಕಾರಿ ಶಾಲೆಗಳ ಜೊತೆಗೆ ಸರ್ಕಾರದಿಂದ ಅನುಮತಿ ಪಡೆದುಕೊಂಡು ಸ್ಥಾಪನೆಯಾಗಿರುವ ಆಸರೆ ಕಾನ್ವೆಂಟ್, ಈ ಕಾನ್ವೆಂಟ್‌ನಲ್ಲಿ 95 ವಿದ್ಯಾರ್ಥಿಗಳಿದ್ದು 65 ಬಾಲಕರು 30 ಬಾಲಕಿಯರು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಕಾನ್ವೆಂಟ್‌ನಲ್ಲಿ 3 ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದು. ಸರ್ಕಾರದಿಂದ ಯಾವುದೇ ರೀತಿಯ ಸೌಲಭ್ಯವನ್ನು ಈ ಕಾನ್ವೆಂಟ್ ಪಡೆದುಕೊಂಡಿಲ್ಲ.

ಹರದನಹಳ್ಳಿಯಲ್ಲಿ ಈ ಎಲ್ಲಾ ಶಿಕ್ಷಣ ಕೇಂದ್ರಗಳ ಜೊತೆಗೆ ಒಟ್ಟು 8 ಅಂಗನವಾಡಿ ಕೇಂದ್ರಗಳೂ ಸಹ ಇಲ್ಲಿ ಕಂಡುಬರುತ್ತದೆ.

ಹರದನಹಳ್ಳಿಯ ಎಲ್ಲಾ ಶಾಲಾ ಕೇಂದ್ರಗಳಲ್ಲಿ ಉತ್ತಮ ಕೊಠಡಿ, ಕಪ್ಪುಹಲಗೆ, ಶೌಚಾಲಯ, ಆಟದ ಮೈದಾನ ಉತ್ತಮ ಪೀಠೋಪಕರಣಗಳು ಸುಸಜ್ಜಿತ ಸ್ಥಿತಿಯಲ್ಲಿವೆ. ಸರ್ಕಾರದ ಇತ್ತೀಚಿನ ಶಿಕ್ಷಣ ಕಾನೂನಿನ್ವಯ ಪ್ರತಿ ಶಾಲೆಗಳಲ್ಲಿಯೂ ಎಸ್.ಡಿ.ಎಂ.ಸಿ ಸದಸ್ಯರುಗಳಿದ್ದು, ಇವರಿಂದ ಶಿಕ್ಷಕರೊಂದಿಗೆ ಉತ್ತಮ ಸಂಬಂಧ ಹೊಂದಿದ್ದಾರೆ. ಪೋಷಕರು ಸಹ ಶಿಕ್ಷಕರೊಂದಿಗೆ ಅನ್ಯೋನ್ಯವಾದ ಸಂಬಂಧವನ್ನಿಟ್ಟುಕೊಂಡಿರುವುದರಿಂದ ಹರದನಹಳ್ಳಿ ಶಾಲೆಗಳ ಶಿಕ್ಷಣದ ಪ್ರಗತಿ ಹಾದಿಯಲ್ಲಿ ನಡೆಯುತ್ತಿವೆ.

ಹರದನಹಳ್ಳಿಯ ವಿದ್ಯಾರ್ಥಿಗಳು ಪ್ರೌಢಶಾಲೆ ಮುಗಿದ ನಂತರ ಮುಂದಿನ ವಿದ್ಯಾಭ್ಯಾಸಕ್ಕಾಗಿ ಹತ್ತಿರದ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಅಮಚವಾಡಿ, ಅರಕಲವಾಡಿ ಪಟ್ಟಣಗಳಿಗೆ ಹೋಗುತ್ತಾರೆ. ಹಲವು ವಿದ್ಯಾರ್ಥಿಗಳು ತಾಂತ್ರಿಕ ವೃತ್ತಿನಿರತ

ಕೋರ್ಸ್‌ಗಳನ್ನು ಹೆಚ್ಚು ಹೆಚ್ಚಾಗಿ ಅಧ್ಯಯನ ಮಾಡುತ್ತಿವುದು ನಿಜಕ್ಕೂ ಕುತೂಹಲಕಾರಿ ವಿಷಯವಾಗಿದೆ.

ಹರದನಹಳ್ಳಿಯಲ್ಲಿ ಆಡಳಿತಾತ್ಮಕ ವಿವರಗಳು:

ಚಾಮರಾಜನಗರ ಜಿಲ್ಲೆಯ ಹರದನಹಳ್ಳಿಯಲ್ಲಿ ಕ್ರಿ.ಶ. 10ನೇ ಶತಮಾನದಲ್ಲಿ ಪಾಳೆಗಾರರ ಆಡಳಿತ ಪದ್ದತಿ ರೂಢಿಯಲ್ಲಿತ್ತು. ಬೀಮನ ಮಗನಾದ ಪೆರುಮಾಳ ದಣ್ಣಾಯಕನು ದಂಡನಾಯಕನಾಗಿ ಅಧಿಕಾರ ವಹಿಸಿಕೊಂಡಿದ್ದನು. ಈತನ ಮೂಲದ ಬಗ್ಗೆ ಯಾವುದೇ ಇತಿಹಾಸದ ಆಧಾರಗಳು ಲಭ್ಯವಾಗಿಲ್ಲ.

ಪೆರುಮಾಳ ದಣ್ಣಾಯಕನಿಗೆ ಮಾಧವ ದಣ್ಣಾಯಕ ಮತ್ತು ಲಕ್ಷ್ಮೀನಾರಾಯಣ ಎಂಬ ಎರಡು ಗಂಡು ಪುತ್ರರಿದ್ದರ ಹಲವು ವರ್ಷಗಳ ಕಾಲ ಪೆರುಮಾಳ ದಣ್ಣಾಯಕನು ದಕ್ಷತೆಯಿಂದ ಆಡಳಿತ ನಡೆಸಿದ್ದು, ಹರದನಹಳ್ಳಿಗೆ ಡಕಾಯಿತರಿಂದ ಯಾವುದೇ ರೀತಿಯ ತೊಂದರೆಗಳು ಉಂಟಾಗದಂತೆ ಸೈನ್ಯದ ಸಹಾಯದಿಂದ ಈ ಗ್ರಾಮವನ್ನು ರಕ್ಷಣೆ ಮಾಡಿದನು. ಸುಮಾರು 50 ವರ್ಷಗಳಿಗೂ ಹೆಚ್ಚು ಕಾಲ ಆಡಳಿತ ಮಾಡಿದನು. ಒಂದು ದಾನಶಾಸನದಲ್ಲಿ "ರಾವುತ್ತರಾಯ" ಎಂಬ ಬಿರುದು ಕಂಡು ಬಂದಿದ್ದು, ಪೆರಮಾಳ ದಣ್ಣಾಯಕನಿಗೆ ಇದ್ದಂತಹ ಬಿರುದು ಎಂದು ಹೇಳಲಾಗಿದೆ.

ಮಾಧವ ದಣ್ಣಾಯಕ:

ಹರದನಹಳ್ಳಿಯಲ್ಲಿ ಆಳ್ವಿಕೆ ಮಾಡಿದ ಪ್ರಮುಖ ದಂಡನಾಯಕ ಹಗೂ ವಿಜಯನಗರ ಆಳ್ವಿಕೆ ಕಾಲದಲ್ಲಿ ಪಾಳೆಗಾರನಾಗಿ ಆಳ್ವಿಕೆ ಮಾಡುತ್ತಿದ್ದವನೆಂದರೆ ಮಾಧವ ದಣ್ಣಾಯಕ, ಈತನು ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲದಲ್ಲಿ ಹರದನಹಳ್ಳಿಯ ಕೋಟೆಯನ್ನು ಸೈನಿಕರ ಸಹಾಯದಿಂದ ರಕ್ಷಿಸಿದನು. ಅಲ್ಲದೆ ಹರದನಹಳ್ಳಿಯ ಕೋಟೆಗೆ ಯಾವುದೇ ಹಾನಿಕಾರವಾಗದಂತೆ ನೋಡಿಕೊಂಡನು. ಮಾದವ ದಣ್ಣಾಯಕ ದೇವರ ಬಗ್ಗೆ ಅಪಾರ ಶ್ರದ್ದೆ, ಭಕ್ತಿಯನ್ನು ಹೊಂದಿದ್ದು ಚಾಮರಾಜನಗರದ ಸಮೀಪ ಗ್ರಾಮವಾದ ತೆರಕಣಾಂಬಿಯಲ್ಲಿ ಒಂದು ಅಲ್ಲಾಳನಾಥ ದೇವಾಲಯವನ್ನು ನಿಮಿಸಿದರು. ಅಲ್ಲದೆ ಈ ಅಲ್ಲಾಳನಾಥ ದೇವರು ಅವನ ಮನೆ ದೇವರು ಸಹ ಆಗಿತ್ತು. ಶ್ರೀ ಅಲ್ಲಾಳನಾಥ ಅಥವಾ ಗೋಪಿನಾಥ ಇದರ

ಇನ್ನೊಂದು ಹೆಸರಾಗಿದ್ದು ಈ ದೇವಸ್ಥಾನದ ಅಭಿವೃದ್ಧಿಗಾಗಿ ಅದರ ಸುತ್ತಲಿನ ಗ್ರಾಮವಾದ ಕಿಲಗೆರೆ ಗ್ರಾಮವನ್ನು ದಾನವನ್ನಾಗಿ ನೀಡಿದನು. ಇದೇ ವೇಳೆಯಲ್ಲಿ ಹರದನಹಳ್ಳಿಯಲಿ ಪ್ರಸಿದ್ಧ ಶ್ರೀ ದಿವ್ಯಲಿಂಗೇಶ್ವರ ದೇವಾಲಯವನ್ನು ನಿರ್ಮಿಸುವ ಯೋಜನೆಯನ್ನು ಕೈಗೊಂಡು ಭವ್ಯವಾದ ವಿಜಯನಗರ ಶೈಲಿಯ ದ್ವಾರಗೋಪುರ ಹಾಗೂ ಹೊಯ್ಸಳರ ಶೈಲಿಯ ಲಕ್ಷಣಗಳನ್ನೊಳಗೊಂಡ ಶ್ರೀ ದಿವ್ಯಲಿಂಗೇಶ್ವರ ದೇವಾಲಯವನ್ನು ಮಾಧವ ದಣ್ಣಾಯಕ ನಿರ್ಮಿಸಿದನು. ಮಾಧವನ ದಣ್ಣಾಯನಿಗೆ ಕೊಂಗಮಾರಿ ಹೊಯ್ಸಳ, ರಾಜ್ಯಲಕ್ಷ್ಮೀರಕ್ಷಾ ಪ್ರಕಾರ, ಏಕದಶಿವ್ರತನಿರತ ಎಂಬ ಬಿರುದುಗಳನ್ನು ಹೊಂದಿದು ಕೇತೆಯ ದಣ್ಣಾಯಕ ಹಾಗೂ ಸಿಂಗಯದ ದಣ್ಣಾಯಕ ಎಂಬ ಹೆಸರಿನ ಇಬ್ಬರು ಗಂಡು ಮಕ್ಕಳಿದ್ದರು. ಒಟ್ಟಿನಲ್ಲಿ ಮಾಧವ ದಣ್ಣಾಯಕನ ಆಳ್ವಿಕೆ ಇತರ ಆಳ್ವಿಕೆಗಳಿಗಿಂತ ಉತ್ತಮವಾಗಿದ್ದು, ಎಲ್ಲಾ ಕ್ಷೇತ್ರಗಳಲ್ಲಿಯೂ ತನ್ನದೇ ಆದ ಹಲವು ಪ್ರಮುಖ ಪ್ರಗತಿಯನ್ನು ಹರದನಹಳ್ಳಿ ಸಾಧಿಸಿತು. ಈತನ ನಂತರ ಅಧಿಕಾರಕ್ಕೆ ಬಂದ ಕೇತೆಯ ದಣ್ಣಾಯಕ, ಸಿಂಗಯದ ದಣ್ಣಾಯಕರ ಬಗ್ಗೆ ಯಾವುದೇ ಆಧಾರಗಳು ಲಭ್ಯವಿಲ್ಲ.

ಹರದನಹಳ್ಳಿಯಲ್ಲಿ ಆಳ್ವಿಕೆ ಮಾಡಿದ ದಂಡನಾಯಕರ ಜೊತೆಗೆ ಸ್ತ್ರೀಯರು ಸಹ ದಂಡನಾಯಕಿಯರಾಗಿ ಆಳ್ವಿಕೆ ಮಾಡಿರುವುದನ್ನು ಸಹ ನಾವು ಹರದನಹಳ್ಳಿಯಲ್ಲಿ ಕಾಣಬಹುದು. ದಂಡನಾಯಕನಾದ ಅಲ್ಲಪ್ಪದಣ್ಣಾಯಕ ಮರಣ ಹೊಂದಿದ ನಂತರ ಆತನ ಪತ್ನಿಯಾದ ಚಾಮವೆ ದಂಡನಾಯಕಿಯಾಗಿ ಅಧಿಕಾರವಹಿಸಿಕೊಂಡು ತನ್ನ ಆಳ್ವಿಕೆಯ ಅವಧಿಯಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಳು ಎಂದು ಊರಿನ ಯಜಮಾನರು ಹೇಳುತ್ತಾರೆ.

ಈತನ ನಂತರ ಬಸವಯ್ಯ ದಣ್ಣಾಯಕ, ಇಮ್ಮಡಿ ದೇವರಾಯ, ಹರಿಯಪ್ಪ ದಣ್ಣಾಯಕ, ದೇವದಣ್ಣಾಯಕ, ವಿಜಯನಗರದ ಅರಸು, ಮೈಸೂರಿನ ರಾಜರುಗಳು ಇಲ್ಲಿ ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ.

8. ಹರದನಹಳ್ಳಿಯ ಧಾರ್ಮಿಕ ಆಚಾರ ವಿಚಾರಗಳು (ಹಬ್ಬದ ವೈಶಿಷ್ಟ್ಯ)

ಹಬ್ಬಗಳು ಇಂದು ಕಾಣಿಸಿಕೊಂಡಂತವಲ್ಲ. ಶತಶತಮಾನಗಳಿಂದ ಹಬ್ಬಗಳ ಆಚರಣೆ. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಕಂಡುಬರುತ್ತದೆ. ಹಬ್ಬಗಳನ್ನು ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ಸಾಂಪ್ರದಾಯಗಳನ್ನು ಸಡಿಲಗೊಳಿಸಿಕೊಂಡು ಕೆಲವು ಸಂಪ್ರಾದಾಯಗಳನ್ನು ಬಿಗಿಗೊಳಿಸಿಕೊಂಡು ಬಂದಿದೆ. ಹಬ್ಬಗಳ ಪ್ರದೇಶದಿಂದ ಪ್ರದೇಶಕ್ಕೆ ಕಾಲದಿಂದ ಕಾಲಕ್ಕೆ ತನ್ನದೇ ಆದ ವಿಭಿನ್ನ ಸ್ವರೂಪಗಳನ್ನು ಪಡೆದುಕೊಂಡಿದೆ. ಹಬ್ಬಗಳು ಮನುಷ್ಯನ ಹುಟ್ಟನಿಂದಲೇ ಪ್ರಾರಂಭವಾಗುತ್ತದೆ. ಭಿನ್ನ ಕಾಲ ದೇಶಗಳಲ್ಲಿ ಹಬ್ಬಗಳು ತನ್ನದೇ ಆದ ವೈಶಿಷ್ಟತೆಗಳನ್ನು ವೈಭವಗಳನ್ನು ಮೈಗೂಡಿಸಿಕೊಂಡು ಬಂದಿವೆ. ಭಾರತ ಎಂಬ ಜಾತ್ಯಾತೀತ ರಾಷ್ಟ್ರದೊಳಗೆ ಅನೇಕ ಧರ್ಮಗಳು, ಅನೇಕ ಪಂಗಡಗಳು ಅನೇಕ ಜನಾಂಗಗಳು, ನೆಲೆಸಿದ್ದು ಇಲ್ಲಿ ವಿಭಿನ್ನ ಆಚರಣೆಗಳನ್ನು ನೋಡುತ್ತೇವೆ. ಕ್ರಿಸ್ತ ಪೂರ್ವದಿಂದಲೂ ಗಮನಿಸುತ್ತಾ ಹೋದರೆ ಭಾರತದಲ್ಲಿ ದೈವ ಪ್ರಿಯರು ಸಾಕಷ್ಟು ದೇವರನ್ನು ಆರಾಧಿಸುವ ಕಲೆ ಭಾರತೀಯರಿಗೆ ಜನ್ಮಸಿದ್ದ. ಸಿಂಧೂ ಬಯಲಿನ ನಾಗರೀಕತೆಯಲ್ಲಿ ಮಾತೃ ದೇವತೆಯ ಉಲ್ಲೇಖವು ಸೂರ್ಯ ಚಂದ್ರರಿಗೆ ಪೂಜೆ ಸಲ್ಲಿಸುವ ಬಗ್ಗೆ, ಅನೇಕ ರಾಜಮನೆತನಗಳಿಗೆ ಅನೇಕ ದೇವಾಲಯಗಳನ್ನು ನಿರ್ಮಾಣ ಮಾಡಿರುವುದು. ಕಮ್ಮಟಗಳ ನಿರ್ಮಾಣ ಇವೆಲ್ಲವೂ ಪ್ರಾರಂಭದ ದೈವಿ ಆಚರಣೆಗಳು. ಭಾರತದೊಳಗೆ ಇಂತಹ ಹಬ್ಬದ ಆಚರಣೆಗಳು, ಭಾರತದೊಳಗೆ ಇಂತಹ ಹಬ್ಬದ ಆಚರಣೆಗಳು ಬಹಳಷ್ಟು ಬೆಳೆದುಬಂದಿದೆ. ಇದರ ಮಧ್ಯ ನಾವು ಆಸ್ತಿಕರು ಮತ್ತು ನಾಸ್ತಿಕರು ಎಂಬ ಎರಡು ಭಾಗ ಮಾಡಿಕೊಂಡಿದ್ದು ದೇವರನ್ನು ನಂಬುವವರನ್ನು **ಆಸ್ತಿಕ**ರೆಂದು ದೇವರನ್ನು ನಂಬದಿರುವವರನ್ನು **ನಾಸ್ತಿಕ**ರೆಂದು ವಿಂಗಡಿಸಲಾಗಿದೆ.

ಭಾರತದಲ್ಲಿ ವೈಚಾರಿಕ ಪ್ರಜ್ಞೆಯಿದ್ದು ಇತ್ತೀಚಿನ ದಿನಗಳಲ್ಲಿ ಭಾರತೀಯರಿಗೆ ವೈಚಾರಿಕ ಪ್ರಜ್ಞೆ ಹೆಚ್ಚಾಗಿರುವುದು ಗಮನಾರ್ಹ, ಆಧುನಿಕ ಸಾಹಿತ್ಯವೇ ಈ ವೈಚಾರಿಕ ಪ್ರಜ್ಞೆಯನ್ನು ಮೂಡಿಸುವುದರಲ್ಲಿ ಸಂದೇಹವಿಲ್ಲ. ಒಂದು ಭೌಗೋಳಿಕ ಪ್ರದೇಶದಲ್ಲಿ ಆಸ್ತಿಕ ನಾಸ್ತಿಕ ಎಲ್ಲರೂ ಒಟ್ಟಾಗಿ ಆಚರಿಸುವ ಹಬ್ಬಗಳು, ಜಾತ್ರೆಗಳು, ಉರುಸುಗಳು ನಮ್ಮಲ್ಲಿವೆ.

ಸ್ವತಂತ್ರ್ಯ ಪೂರ್ವ ಕಾಲದಲ್ಲಿ ಬಾಲಗಂಗಾಧರ ತಿಲಕರು ದೇಶದ ಐಕ್ಯತೆಯನ್ನು ಜನರಲ್ಲಿ ಮೂಡಿಸುವುದಕ್ಕಾಗಿ ಗಣೇಶ ಉತ್ಸವವನ್ನು ಹಮ್ಮಿಕೊಂಡಿದ್ದುದು ಇತಿಹಾಸ. ಜಾತ್ರೆ ಉತ್ಸವಗಳಲ್ಲಿ ವಿಭಿನ್ನ ಧರ್ಮ ಜಾತಿಗಳಿಗೆ ದೊಡ್ಡ ದೊಡ್ಡ ಘರ್ಷಣೆಗಳಾಗಿರುವುದು ಇದೆ. ಹಿಂದೂ, ಮುಸ್ಲಿಂ, ಕ್ರೈಸ್ತ ಎಂಭ ಬೇಧಭಾವವಿಲ್ಲದೆ ಎಲ್ಲಾ ಸೇರಿ ಹಬ್ಬಗಳು, ಜಾತ್ರೆಗಳು, ಉತ್ಸವಗಳು ಕಂಡುಬಂದಿವೆ. ಈ ಹಬ್ಬಗಳ ಆಚರಣೆಯ ಅಧ್ಯಯನಕ್ಕೂ ಕೂಡ ಸಾಂಸ್ಕೃತಿಕ ಅಧ್ಯಯನದ ಹಿನ್ನೆಲೆಯಲ್ಲಿ ಮಾಡಬೇಕಾಗುತ್ತದೆ. ಭಾರತದ ಪ್ರತಿ ಹಳ್ಳಿಯಲ್ಲಿ ಬೆಳಕಿಗೆ ಬಾರದ ಎಷ್ಟೋ ಹಬ್ಬಗಳು, ಧಾರ್ಮಿಕ ಆಚಾರ ವಿಚಾರಗಳು ಇವೆ. ಅಂತಹುಗಳನ್ನು ಹುಡುಕಿ ಹೊರ ತೆಗೆದು ತೋರಿಸುವ ಕೆಲಸವನ್ನು ಅಧ್ಯಯನದಿಂದ, ಅಧ್ಯಾಪಕನು ಮಾಡಬೇಕಾಗುತ್ತದೆ. ಒಂದು ಪುಟ್ಟ ಗ್ರಾಮವಾಗಿದ್ದರೂ ಅಲ್ಲಿನ ದೈವಿಕ ಆಚರಣೆಗಳು ನೂರಾರು ಇರುತ್ತವೆ. ಮಗು ಹುಟ್ಟಿದಾಗ ಅವನಿಗೆ ಅನ್ನ ತಿನ್ನಿಸುವುದು, ವಿದ್ಯಾಭ್ಯಾಸಕ್ಕೆ ಕಳುಹಿಸುವಾಗ ಹೀಗೆ ಬೆಳೆದ ಹಬ್ಬಗಳು ದೊಡ್ಡ ದೊಡ್ಡ ಸ್ವರೂಪದಲ್ಲಿ ವಿಶಾಲ ಅರ್ಥದಲ್ಲಿ ಬಳಕೆಯಾಗುತ್ತವೆ. ಇಂತಹ ಆಚಾರ ವಿಚಾರಗಳಲ್ಲಿ ಎಲ್ಲಾ ಹಳ್ಳಿಗಳಲ್ಲಿ ಸರ್ವೆ ಸಾಮಾನ್ಯ. ನಮ್ಮ ಅಧ್ಯಯನ ವಿಷಯವಾದ ಚಾಮರಾಜನಗರ ಜಿಲ್ಲೆಯ ಹರದನಹಳ್ಳಿಯ ಗ್ರಾಮದಲ್ಲಿಯು ಅನೇಕ ಧಾರ್ಮಿಕ, ಆಚಾರ ವಿಚಾರಗಳು ಹಬ್ಬಹರಿದಿನಗಳು ನಡೆದುಬಂದಿವೆ.

ಶೈವ, ವೈಷ್ಣವ ಮತ್ತು ನಾಯಕಜನಾಂಗದ ಸಂಘರ್ಷಗಳಿಂದ ಹುಟ್ಟಿಕೊಂಡ ಆಚಾರಣೆಗಳು ಕಂಡುಬಂದಿವೆ. ಶೈವರಿಗೆ ಮುಖ್ಯವಾಗಿ ದಿವ್ಯಲಿಂಗೇಶ್ವರ ದೇವಾಲಯ, ವೈಷ್ಣವ ಧರ್ಮಿಯರಿಗೆ ಗೋಪಾಲ ಕೃಷ್ಣಸ್ವಾಮಿ ದೇವಾಲಯ, ನಾಯಾಕರಿಗೆ ಮಾರಮ್ಮನ ದೇವಾಲಯ ಉಪ್ಪಾರ ಜನಾಂಗಕ್ಕೆ ಕಾಳಮ್ಮನ ದೇವಾಲಯ ಪ್ರಮುಖವಾಗಿದ್ದರು ಈ ಗ್ರಾಮದಲ್ಲಿ ಎಲ್ಲಾ ಜನಾಂಗದವರು ಸೌಹಾರ್ದಯುತವಾಗಿ ಒಗ್ಗಟ್ಟಿನಿಂದ ಎಲ್ಲಾ ಧಾರ್ಮಿಕ ಆಚಾರಣೆಗಳನ್ನು ನಡೆಸಿಕೊಡುವುದನ್ನು ನೋಡಬಹುದು.

ನಾವು ಮೊದಲೇ ನೋಡಿದಂತೆ ದಿವ್ಯ ಲಿಂಗೇಶ್ವರ ದೇವಾಲಯದ ನಿರ್ಮಾಣಕ್ಕೂ ಮೊದಲು ಈ ದೇವಾಲಯಕ್ಕೆ ಪೂಜೆ ಪುರಸ್ಕಾರಗಳು ನಡೆಯುತ್ತಿದ್ದವು, ಈ ದೇವರ ಮಹಿಮೆಯಿಂದ ಅಡಿಕೆಗಳು ಅಳಲೆ ಕಾಯಿಗಳಾಗಿದ್ದು ಅದರಿಂದ ದೇವಾಲಯದ

ನಿರ್ಮಾಣದ ಪ್ರತೀತಿ ಇದೆ. ದಿವ್ಯ ಲಿಂಗೇಶ್ವರ ದೇವಸ್ಥಾನದ ಗರ್ಭಗುಡಿಯ ಮುಂಭಾಗದಲ್ಲಿ ಸತ್ಯವನ್ನು ಒಪ್ಪಿಕೊಳ್ಳುವ, ಪ್ರಮಾಣ ಮಾಡುವ ಪರಿಪಾಠವಿತ್ತು. ದಿವ್ಯ ಎಂಬ ಶಬ್ಧವು ದಿಬ್ಯ ಎಂಬ ಶಬ್ದದಿಂದ ನಿಷ್ಪನ್ನಗೊಂಡಿದೆ. ದಿವ್ಯ ಎಂದರೆ ಪ್ರಮಾಣೀಕರಿಸುವುದು ಸತ್ಯವನ್ನು ಒಪ್ಪಿಕೊಳ್ಳುವುದು ಎಂದರ್ಥ. ಇಂತಹ ಆಚರಣೆಯನ್ನು ಪ್ರಾರಂಭದಲ್ಲೇ ಕಾಣಬಹುದು. ಈ ಅಂಶದಿಂದ ಅಳಲೇಶ್ವರನಿಗೆ ದಿವ್ಯಲಿಂಗೇಶ್ವರ ಎಂಬ ಹೆಸರು ಬಂದಿತೆಂದು ಇಲ್ಲಿನ ಅರ್ಚಕರ ಮಾತುಗಳಿಂದ ತಿಳಿಯುತ್ತದೆ. ದಿವ್ಯಲಿಂಗೇಶ್ವರ ದೇವಾಲಯದ ಬಲ ಭಾಗದಲ್ಲಿ ಯೋಗಶಾಲೆ ಇರುವುದನ್ನು ನೋಡಿದರೆ ಹಿಂದಿನಿಂದಲೂ ಇಲ್ಲಿ ಯಜ್ಞ ಯಾಗಾದಿಗಳು ನಡೆಯುತ್ತಿದ್ದು ದೇವರಿಗೆ ಅವಿಸ್ಸನ್ನು ಅರ್ಪಿಸುವ ಅಂಶಗಳು ಬೆಳಕಿಗೆ ಬರುತ್ತವೆ.

ದೇವಸ್ಥಾನದ ಮುಂಭಾಗದಲ್ಲಿ ದೀಪ ಕಂಬವಿದ್ದು ಶಿವರಾತ್ರಿ ಸಂದರ್ಭದಲ್ಲಿ ಇಲ್ಲಿ ಜನಸಮುದಾಯವು ಸೇರಿ ವಿಜ್ರಂಭಣೆಯಿಂದ ಆ ದೀಪದ ಕಂಬದಲ್ಲಿ ದೀಪವನ್ನು ಒತ್ತಿಸುತ್ತಿದ್ದರು. ದೇವಸ್ಥಾನದ ಒಳಗಡೆ ಬಲಭಾಗದಲ್ಲಿ ಹದಿನಾರು ನಾಗರ ಕಲ್ಲುಗಳನ್ನು ಪ್ರತಿಸ್ಥಾಪನೆ ಮಾಡಿದ್ದಾರೆ. ಹಿಂದೆ ಮಕ್ಕಳಾಗದವರು ಇಲ್ಲಿಗೆ ಬಂದು ಹರಕೆಯನ್ನು ಹೊತ್ತು ಮಕ್ಕಳಾದ ಮೇಲೆ ಇಲ್ಲಿ ನಾಗರ ಕಲ್ಲುಗಳನ್ನು ಸ್ಥಾಪಿಸಿದ್ದಾರೆ. ಪ್ರತಿ ಶ್ರಾವಣ ಶನಿವಾರ ಇಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಆಷಾಡ ಮಾಸದಲ್ಲಿ ಇಲ್ಲಿ ಅರಿಕೆಗಳನ್ನು ತೀರಿಸಲು ಜನರು ಸಾಗರೋಪಾದಿಯಲ್ಲಿ ಬರುತ್ತಾರೆ. ವಿಶೇಷ ಪೂಜೆ ಪುರಸ್ಕಾರಗಳು ನಡೆಯುತ್ತವೆ. ಭಕ್ತಾದಿಗಳಿಗೆ ಪ್ರಸಾದ ನೀಡುತ್ತಾರೆ. ಆಗಸ್ಟ್ ತಿಂಗಳಲ್ಲಿ ವಿಶೇಷವಾಗಿ ಪ್ರದೋಸ ಪೂಜೆ ಮಾಡುತ್ತಾರೆ. ಲಿಂಗಕ್ಕೆ ಹಾಲು ಮೊಸರು ತುಪ್ಪವನ್ನು ಹಾಕಿ ತೊಳೆದು ಪೂಜೆ ಮಾಡುತ್ತಾರೆ. ಅಲ್ಲಿ ಇರುವ ನಂದೀಶನ ವಿಗ್ರಹ ಗರ್ಭಗುಡಿ ನೂರ ಐದು ಅಡಿ ಅಂತರದಲ್ಲಿ ಇದೆ. ಈ ನಂದೀಶನಿಗೆ ದಿನನಿತ್ಯ ಪೂಜೆ ಪುರಸ್ಕಾರಗಳು ನಡೆಯುತ್ತವೆ. ದೇವಸ್ಥಾನದ ಹಿಂದೆ ಅಷ್ಟ ಲಿಂಗಗಳಿದ್ದು ಶಿವರಾತ್ರಿ ಹಬ್ಬದಂದು ವಿಶೇಷ ಪೂಜೆಗಳು ನಡೆಯುತ್ತವೆ. ಇಡೀ ರಾತ್ರಿ ಅಷ್ಟ ಲಿಂಗಗಳಿಗೆ ಬಿಲ್ವ ಪತ್ರೆ ಹೂವುಗಳನ್ನು ಹಾಕಿ ಪೂಜೆ ಮಾಡಿ ಜಾಗರಣೆ ಮಾಡುವ ಪರಿಪಾಠವಿದೆ. ಹಿಂದೆ ದಕ್ಷಿಣಮೂರ್ತಿ ವಿಗ್ರಹವಿದ್ದು ಅದನ್ನು ವಿಶಿಷ್ಟವಾದ ರೀತಿಯಲ್ಲಿ ಪೂಜೆ ಮಾಡುವರು. ಶಿವರಾತ್ರಿ ಹಬ್ಬದಂದು ಭಕ್ತಾದಿಗಳು ಬಂದು ತಮ್ಮ ಹರಕೆಯನ್ನು ತೀರಿಸುತ್ತಾರೆ. ಅಲ್ಲದೆ ಪ್ರಸಾದಗಳ ವಿನಿಯೋಗವು ನಡೆಯುತ್ತದೆ. ಕರ್ನಾಟಕ ರಾಜ್ಯಾದ್ಯಂತ

ಭಕ್ತಾದಿಗಳು ಇಲ್ಲಿಗೆ ಬಂದು ಪೂಜೆಯನ್ನು ಸಲ್ಲಿಸುತ್ತಾರೆ. ಚಾಮರಾಜನಗರ ಜಿಲ್ಲೆಗೆ ಸೇರಿದ ಉದ್ಯಮಿಗಳು, ಅಧಿಕಾರಿಗಳು, ಇಲ್ಲಿನ ಪ್ರಸಾದ ಆಯೋಜನೆಯನ್ನು ವಹಿಸುತ್ತಾರೆ.

ಯುಗಾದಿಯ ಸಂದರ್ಭದಲ್ಲಿ ಇಲ್ಲಿ ವಿಜೃಂಬಣೆಯ ರಥೋತ್ಸವ ನಡೆಯುತ್ತದೆ. ಊರಿನ ಪ್ರಮುಖರು, ಯುವಕರು, ಯುವತಿಯರು, ಮಕ್ಕಳು ವಯೋವೃದ್ದರು ಇಲ್ಲಿ ಪಾಲ್ಗೊಂಡು ರಥೋತ್ಸವನ್ನು ನಡೆಸಿಕೊಡುತ್ತಾರೆ. ದಿವ್ಯಲಿಂಗೇಶ್ವರ ದೇವರ ರಥವು ಊರಿನ ಎಲ್ಲಾ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ದೇವಸ್ಥಾನದ ಮುಂಭಾಗ ನಿಲ್ಲುತ್ತದೆ. ಪಾಳೆಗಾರರ ಆಡಳಿತದಲ್ಲಿಯೇ ಇಲ್ಲಿ ರಥೋತ್ಸವ ನಡೆಯುತ್ತಿತ್ತು ಎಂಬ ವಿಚಾರವು ಅಲ್ಲಿನ ಜನರಿಂದ ತಿಳಿಯುತ್ತದೆ. ಅಂದು ಭಕ್ತಾದಿಗಳು ನೇತೃತ್ವವಹಿಸಿ ಊಟೋಪಚಾರ ಪ್ರಸಾದವನ್ನು ಸ್ವೀಕರಿಸುತ್ತಾರೆ.

ಈ ರಥೋತ್ಸವದ ದಿನ ಜಾನಪದ ಕಲಾತಂಡಗಳು, ಜಾನಪದ ಕಲೆಗಳನ್ನು ಪ್ರದರ್ಶಿಸುವುದು ಇಲ್ಲಿನ ವಾಡಿಕೆ. ಡೊಳ್ಳುಕುಣಿತ, ಕರಡಿ ಮಜ್ಜಲು, ವೀರಗಾಸೆ, ಕತ್ತಿವರಸೆ, ಕೋಲಾಟ, ಪೌರಾಣಿಕ ನಾಟಕಗಳು, ಗೊರವರ ಕುಣಿತ ಇವೆಲ್ಲ ಜನಪದ ಕಲೆಗಳು ಅಂದು ಅನಾವರಣಗೊಳ್ಳುತ್ತದೆ. ಚಾಮರಾಜನಗರ ಮತ್ತು ಅದರ ಸುತ್ತಮುತ್ತಲಿನ ಭಾಗಗಳಿಂದ ಅನೇಕ ಜಾನಪದ ತಂಡಗಳು ಇಲ್ಲಿ ಬಂದು ಭಾಗವಹಿಸುತ್ತವೆ.

ರಥೋತ್ಸವದ ಹಿಂದಿನ ದಿನ ಇಲ್ಲಿ ಕುಸ್ತಿ ಸ್ಪರ್ಧೆ ಗುಂಡು ಎತ್ತುವುದು, ಗೀತ ಸ್ಪರ್ಧೆಗಳು, ನೃತ್ಯ ಸ್ಪರ್ಧೆಗಳು, ಯುವತಿಯರಿಗೆ ರಂಗೋಲಿಸ್ಪರ್ಧೆಗಳನ್ನು ಆಯೋಜಿಸಲಾಗುತ್ತದೆ. ಒಟ್ಟಾರೆಯಾಗಿ ಇಲ್ಲಿನ ದಿವ್ಯಲಿಂಗೇಶ್ವರ ರಥೋತ್ಸವ ಶಿವನ ಒಡ್ಡೋಗಲವೆ ಸರಿ.

ಇಲ್ಲಿನ ವೇಣುಗೋಪಾಲಸ್ವಾಮಿ ದೇವಾಲಯವು ಶೈವ ಮತ್ತು ವೈಷ್ಣವರ ಸಂಘರ್ಷಣೆಯಿಂದ ತಲೆಯತ್ತಿತು. ವೈಷ್ಣವರ ಪ್ರಾಬಲ್ಯ ಈ ದೇವಾಲಯವನ್ನು ಸೂಚಿಸುತ್ತದೆ. ವೈಷ್ಣವ ಜನಾಂಗ ಇಲ್ಲಿ ಬಂದು ಶ್ರೀ ಗೋಪಾಲಕೃಷ್ಣ ದೇವರಿಗೆ ಪೂಜೆ ಸಲ್ಲಿಸುವುದು, ಅರಿಕೆ ಸಲ್ಲಿಸುವುದು ವಾಡಿಕೆಯಾಗಿದೆ. ಶ್ರಾವಣ ಎಂದರೆ ವೈಷ್ಣವರಿಗೆ ತುಂಬಾ ಪ್ರಿಯವಾದುದು. ಶ್ರಾವಣ ಶನಿವಾರಗಳಲ್ಲಿ ಇಲ್ಲಿ ವಿಶೇಷ ಪೂಜೆಗಳು ನಡೆಯುತ್ತದೆ. ಭಕ್ತಾದಿಗಳು ಹೆಚ್ಚಿನ

ಸಂಖ್ಯೆಯಲ್ಲಿ ಬಂದು ಪಾಲ್ಗೊಂಡು ಪ್ರಸಾದಗಳನ್ನು ಸ್ವೀಕರಿಸುತ್ತಾರೆ. ಪಡಿ ಬೇಡುವುದು ಇಲ್ಲಿನ ವಿಶೇಷ. ಆಷಾಡ ಶುಕ್ರವಾರಗಳಂದು ಇಲ್ಲಿ ವಿಶೇಷ ಪೂಜೆ ನಡೆಯುತ್ತಿದ್ದು ಭಕ್ತಾದಿಗಳು ಉದ್ಯಮಿಗಳು ಆದಿನ ಪೂಜೆ ಮತ್ತು ಪ್ರಸಾದದ ಹೊಣೆ ಹೊರುತ್ತಾರೆ. ಇತ್ತೀಚೆಗೆ ಇಲ್ಲಿ ವೈಭವಯುತವಾದ ಆಚರಣೆಗಳು ಅಷ್ಟಾಗಿ ಕಂಡುಬರುವುದಿಲ್ಲ. ವೈಷ್ಣವರು ಮದುವೆ ಮುಂಜಿಗಳನ್ನು ಈ ದೇವಾಲಯದಲ್ಲಿ ಮಾಡುತ್ತಾರೆ. ಅದಕ್ಕಾಗಿ ವಿಶೇಷ ದಕ್ಷಿಣೆಯನ್ನು ಅರ್ಚಕರಿಗೆ ನೀಡಬೇಕಾಗುತ್ತದೆ. ಅಲ್ಲದೇ ಅನ್ನ ಸಂತರ್ಪಣೆ ನಡೆಯುತ್ತದೆ. ಗೋಕುಲಾಷ್ಟಮಿ ದಿವಸ ಇಲ್ಲಿ ವೇಣುಗೋಪಾಲ ಸ್ವಾಮಿಯ ರಥೋತ್ಸವ ಜರುಗುವುದು. ಉತ್ಸವ ಹೊರಡುವ ಮುನ್ನ ಒಬ್ಬ ವ್ಯಕ್ತಿ ಒಂದು ತೆಂಗಿನ ಕಾಯಿಯನ್ನು ಕಟ್ಟಿಕೊಂಡು ಚಕ್ರಾಕಾರವಾಗಿ ತಿರುಗಿಸುತ್ತಿದ್ದಾಗ ಅಲ್ಲಿ ಪಾಲ್ಗೊಂಡಿರುವ ಯಾರಾದರು ಭಕ್ತರೊಬ್ಬರು ತೆಂಗಿನ ಕಾಯಿಯನ್ನು ಹೊಡೆಯಬೇಕು. ತೆಂಗಿನ ಕಾಯಿಯನ್ನು ಹೊಡೆಯುವುದರ ಮೂಲಕ ರಥೋತ್ಸವಕ್ಕೆ ಚಾಲನೆ ಸಿಗುತ್ತದೆ. ನಂತರ ಊರಿನ ಪ್ರಮುಖ ಬೀದಿಗಳಲ್ಲಿ ರಥೋತ್ಸವ ನಡೆಯುತ್ತದೆ. ರಥೋತ್ಸವಕ್ಕೆ ಅಲ್ಲಿನ ಜನರು ವಿಶೇಷ ಪೂಜೆಪುರಸ್ಕಾರ ನಡೆಸುತ್ತಾರೆ. ನಂತರ ರಥೋತ್ಸವದ ಮುಂದೆ ಅನೇಕ ಜಾನಪದಗಳು ಪ್ರದರ್ಶನವಾಗುತ್ತದೆ.

ದಿವ್ಯ ಲಿಂಗೇಶ್ವರ ದೇವಾಲಯದ ರಥೋತ್ಸವ ಜರಗುವಂತೆ ಸ್ಪರ್ಧೆಗಳು ಆಟೋಟಗಳು ಜಾನಪದ ಕಲೆಗಳು ಎಲ್ಲವೂ ಇಲ್ಲಿ ಅನಾವರಣಗೊಳ್ಳುತ್ತದೆ. ಅಂದು ವೈಷ್ಣವ ಧರ್ಮೀಯರು ಮಾತ್ರ ಈ ಉತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದರು. ಈಗ ಊರಿನ ಎಲ್ಲಾ ಜನಾಂಗದವರೂ ಸೇರಿ ಉತ್ಸವ ನಡೆಸುವುದು ಇಲ್ಲಿನ ವಿಶೇಷವಾಗಿದೆ. ಪ್ರಮುಖ ಬೀದಿಗಳಲ್ಲಿ ಹೊರಟ ರಥೋತ್ಸವ ನಂತರ ದೇವರ ಮುಂದೆ ನಿಲ್ಲುತ್ತದೆ. ನಂತರ ಉತ್ಸವ ಮೂರ್ತಿಯನ್ನು ದೇವಸ್ಥಾನದ ಒಳಗೆ ತೆಗೆದುಕೊಂಡು ಹೋಗಿ ನಂತರ ಅಲ್ಲಿನ ಭಕ್ತಾದಿಗಳಿಂದ ವಿಶೇಷ ಪೂಜೆಗಳು ನಡೆಯುತ್ತವೆ. ತುಂಬಾ ದೊಡ್ಡದಾದ ವಿಶಾಲವಾದ ಹಜಾರವನ್ನು ಈ ದೇವಸ್ಥಾನ ಹೊಂದಿರುವುದರಿಂದ ಇಲ್ಲಿ ಪ್ರಸಾದ ವಿನಿಯೋಗಕ್ಕಾಗಲಿ ಭೋಜನಕ್ಕಾಗಲಿ, ವಿಶ್ರಾಂತಿಗಾಗಲಿ ಅಷ್ಟೊಂದು ಕೊರತೆ ಕಂಡುಬರುವುದಿಲ್ಲ. ಇದರ ಪಕ್ಕದಲ್ಲೇ ಒಂದು ಹನುಮಂತನ ಗುಡಿಯಿದೆ. ಗೋಪಾಲ ಕೃಷ್ಣನಿಗೆ ಪೂಜೆ ಸಲ್ಲಿಸಿದ ನಂತರ ಹನುಮಂತನಿಗೆ ವಿಶೇಷ ಪೂಜೆ ನಡೆಯುತ್ತದೆ. ಹನುಮಂತನಿಗೆ ಇಷ್ಟವಾದಂತಹ ತಿಂಡಿ ತಿನಿಸುಗಳನ್ನು ನೈವೇದ್ಯಕ್ಕೆ ಇಡುತ್ತಾರೆ. ಶ್ರೀ ಕೃಷ್ಣ ಜನ್ಮಾಷ್ಟಮಿಯಂದು ಮಜ್ಜಿಗೆ ಪಾನಕಗಳನ್ನು

ವಿತರಿಸಲಾಗುತ್ತದೆ. ಅಲ್ಲದೆ ಕೃಷ್ಣನಿಗೆ ಪ್ರಿಯವಾದ ಅವಲಕ್ಕಿಯನ್ನು ವಿತರಿಸುತ್ತಾರೆ. ಬೆಲ್ಲದ ಪಾನಕ ಅವಲಕ್ಕಿಯ ಸವಿ ಮರೆಯಲಾಗದಂತಹದು. ಈದಿನ ದೇವರಿಗೆ ಆಭರಣಗಳು, ಮುತ್ತು ರತ್ನಗಳು ಒಡವೆ ವೈಡೂರ್ಯಗಳನ್ನು ತೊಡಿಸಿರುವ ದೃಶ್ಯ ನೋಡುವುದು ಮನೋಹರವಾಗಿದೆ. ಭಕ್ತಾದಿಗಳು ತಮ್ಮ ಅರಕೆಯನ್ನು ತೀರಿಸುವ ಪದ್ದತಿ ಇಂದೂ ರೂಡಿಯಲ್ಲಿದೆ.

ಮಾರಿಹಬ್ಬಗಳು:

ಮಾರಿ ಮಸಣಿಗಳು ನಮ್ಮ ಗ್ರಾಮದಲ್ಲಿನ ವೈಶಿಷ್ಠ ಪೂರ್ಣವಾದ ದೇವತೆಗಳು ಪ್ರತೀ ಊರಿಗೂ ಒಂದು ಗ್ರಾಮದೇವತೆ ಇರುವಂತೆ ಹರದನಹಳ್ಳಿಯ ಗ್ರಾಮಕ್ಕೂ ಒಂದು ಗ್ರಾಮದೇವತೆ ಇದೆ. ಇದು ಇತ್ತೀಚೆಗೆ ನಿರ್ಮಾಣಗೊಂಡಂತಹ ಮಾರಮ್ಮನ ದೇವಾಲಯ, ಈ ದೇವಾಲಯದಲ್ಲಿ ಎರಡು ಮಾರಮ್ಮ ದೇವತೆಗಳನ್ನು ಪ್ರತಿಸ್ಥಾಪನೆ ಮಾಡಲಾಗಿದೆ. ಬಲಗಡೆ ದಂಡಿನ ಮಾರಮ್ಮ ಮತ್ತು ಎಡಭಾಗದಲ್ಲಿ ಈ ಗ್ರಾಮದ ಗ್ರಾಮದೇವತೆಯಾದ ಮುಡುಕು ಮಾರಮ್ಮನ ಪ್ರತಿಮೆಗಳಿವೆ. ಇಲ್ಲಿ ವಿಶೇಷ ಪೂಜೆಗಳು ನಡೆಯುತ್ತಿದ್ದು. ಸುತ್ತಮುತ್ತಲಿನ ಗ್ರಾಮದ ಜನರು ಬಂದು ಪೂಜೆ ಸಲ್ಲಿಸುತ್ತಾರೆ. ಮಕ್ಕಳಿಗೆ ಸಾಂಕ್ರಾಮಿಕ ಕಾಯಿಲೆಗಳು ಬಂದಾಗ, ಜನರಿಗೆ ಬಾಧೆ ಕಾಣಿಸಿಕೊಂಡಾಗ ಊರಿಗೆ ಕೆಡಕಾದಾಗ ಇಲ್ಲಿ ವಿಶೇಷ ಪೂಜೆಗಳು ನಡೆಯುತ್ತದೆ. ಪ್ರತೀ ದಿನ ಬೆಳಗ್ಗೆ ಈ ದೇವಸ್ಥಾನದಲ್ಲಿ ತಮ್ಮಡಿಗಳು ಪೂಜೆ ಮಾಡುತ್ತಾರೆ. ಪ್ರತಿ ಗ್ರಾಮದಲ್ಲಿಯೂ ನಡೆಯುವಂತೆ ಈ ಗ್ರಾಮದಲ್ಲಿ ಗ್ರಾಮದೇವತೆ ಹಬ್ಬ ಅಥವಾ ಮಾರಿ ಹಬ್ಬ ನಡೆಯುತ್ತದೆ. ಯುಗಾದಿಗೂ ಮೊದಲು ಗ್ರಾಮಸ್ಥರೆಲ್ಲಾ ಸೇರಿ ಮಾರಿಹಬ್ಬದ ದಿನವೊಂದನ್ನು ನಿಗದಿಪಡಿಸುತ್ತಾರೆ. ಪ್ರಾಯಶಃ ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ಈ ಹಬ್ಬ ನಡೆಯುತ್ತದೆ. ಮಂಗಳವಾರವೇ ಹಬ್ಬದ ದಿನವಾಗಿರುವುದು ಇಲ್ಲಿನ ವಿಶೇಷ. ಇಲ್ಲಿ ನಾವು ಗಮನಿಸಬೇಕಾದ ಒಂದು ಅಂಶ ಹಬ್ಬದ ಮೂರು ದಿನದ ಹಿಂದೆ ತಮ್ಮಡಿಗೆ ಮೈಮೇಲೆ ದೇವರು ಬರುತ್ತದೆ ಆಗ ಊರಿನ ಪ್ರಮುಖರು ಒಂದು ಆಡು ಮರಿಯನ್ನು ಬಲಿಕೊಡುತ್ತಾರೆ. ಹೀಗೆ ಬಲಿಕೊಟ್ಟ ಮರಿಯ ರಕ್ತವನ್ನು ಬಸಿದುಕೊಂಡು ಅದನ್ನು ಭತ್ತದ ಕಾಳುಗಳಿಗೆ ಮಿಶ್ರಣ ಮಾಡಿ ಬಲಿಕೊಟ್ಟಂತಹ ಆಡು ಮರಿಯನ್ನು ಸೊಂಟಕ್ಕೆ ಕಟ್ಟಿಕೊಂಡು ಊರಿನ ಪ್ರಮುಖ ಬೀದಿಗಳಲ್ಲಿ ಮಾರಮ್ಮನ ಹೆಸರನ್ನು ಕೂಗುತ್ತಾ ಭತ್ತದ

ಕಾಳುಗಳನ್ನು ಎರಚುತ್ತಾರೆ. ಇದನ್ನು ಆ ಊರಿಗೆ ಬಂದಿರುವ ಮಾರಿ ಮಸಣೀಯರು ಸಂತೃಪ್ತರಾಗುತ್ತಾರೆ ಎನ್ನುವ ವಾಡಿಕೆಯಿದೆ. ಇದು ಪ್ರತೀ ಗ್ರಾಮದಲ್ಲಿಯೂ ನಡೆಯುತ್ತದೆ. ಇದನ್ನು ಕರಕ್ಲು ಎಂದು ಕರೆಯುತ್ತಾರೆ.

ಈ ಹಬ್ಬದ ಆಚರಣೆ ಸಂದರ್ಭದಲ್ಲಿ ಊರಿನಲ್ಲಿರುವ ಜನರು ಹಬ್ಬ ಮುಗಿಯುವ ತನಕ ಊರು ಬಿಟ್ಟು ಹೋಗಬಾರದು. ಹೋದರೆ ಮಾರಿ ಊರಿಗೆ ಕೆಡಕನ್ನು ಉಂಟು ಮಾಡುತ್ತಾಳೆ ಎಂಬ ನಂಬಿಕೆ ಅವರದು. ಅಕಸ್ಮಾತ್ ಆ ಸಂದರ್ಭದಲ್ಲಿ ಯಾರಾದರೂ ಮರಣಹೊಂದಿದರೆ ಮತ್ತೊಮ್ಮೆ ಊರನ್ನು ಬಿಟ್ಟು ಹೊರಗೆ ಹೋದವರು ಕರಕ್ಲಿಗೆ ತಗಲುವ ವೆಚ್ಚವನ್ನು ಭರಿಸಬೇಕಾಗುತ್ತದೆ.

ಮಾರಿಹಬ್ಬದ ಮತ್ತೊಂದು ವಿಶೇಷವೆಂದರೆ ಮಡವನ್ನು ಬೇಯಿಸುವುದು. ಈ ಮಡಬೇಯಿಸುವುದನ್ನು ನೋಡಿದರೆ ತಮಿಳುನಾಡಿನ ಪೊಂಗಲ್ ಹಬ್ಬದ ಬಣ್ಣನೆ ಸಿಗುತ್ತದೆ. ಮಡ ಎಂದರೆ ಬೆಲ್ಲದ ಅನ್ನ ಇದನ್ನು ಹೊಸ ಮಡಿಕೆಯಲ್ಲಿಯೇ ಬೇಯಿಸಬೇಕು. ಮಾರಮ್ಮನ ಬಳಿ ಯಾವುದಾದರೂ ವಿಚಾರಕ್ಕೆ ಅರಕೆ ಹೊತ್ತವರು ಹೀಗೆ ಮಡವನ್ನು ಬೇಯಿಸುವುದುರ ಮೂಲಕ ಅರಕೆ ತೀರಿಸುತ್ತಾರೆ.

ಹಬ್ಬದ ಮತ್ತೊಂದು ವೈಶಿಷ್ಟ್ಯವೆಂದರೆ ಮಾರಮ್ಮನಿಗೆ ಪ್ರಾಣಿ ಬಲಿ ನೀಡುವುದು. ಸಾಯಂಕಾಲದ ಹೊತ್ತಿಗೆ ಮಾರಮ್ಮನ ಉತ್ಸವವನ್ನು ಏರ್ಪಡಿಸಲಾಗುತ್ತಿತ್ತು. ಊರಿನ ಪ್ರಮುಖ ಬೀದಿಗಳಲ್ಲಿ ಈ ದೇವರ ಉತ್ಸವ ಬರುವ ಸಂದರ್ಭದಲ್ಲಿ ಸತ್ತಿಗೆಯ ಮೇಲೆ ಕೋಳಿಗಳನ್ನು ಬಲಿಕೊಡುತ್ತಾರೆ. ಹೀಗೆ ಇಲ್ಲಿನ ಮಾರಿ ಹಬ್ಬಗಳಿಗೆ ಸುತ್ತುಮುತ್ತಲಿನ ಗ್ರಾಮದ ಭಕ್ತಾದಿಗಳು ಇಲ್ಲಿಗೆ ಬಂದು ಅರಕೆಗಳನ್ನು ತೀರಿಸಿ ಈ ಹಬ್ಬವನ್ನು ವಿಜೃಂಭಣೆಯಿಂದ ನೆರವೇರಿಸುತ್ತಾರೆ. ಬಂಧುಬಳಗದವರನ್ನು ಸ್ನೇಹಿತರನ್ನು ಕರೆದು ಔತನ ನೀಡುತ್ತಾರೆ. ಜನರು ಹೊಸ ಬಟ್ಟೆಬರೆಗಳನ್ನು ಹಾಕಿಕೊಂಡು, ಊರಿಗೆ ಚಪ್ಪರ ಹಾಕಿ ರಂಗೋಲಿ ಅಲಂಕಾರ ಧ್ವನಿವರ್ಧಕಗಳು, ಬೆಳಕಿನ ವ್ಯವಸ್ಥೆಯನ್ನು ಮಾಡುತ್ತಾರೆ. ಹಬ್ಬದ ದಿನದಂದು ವಾದ್ಯಗೋಷ್ಟಿಗಳು ದಾಸಯ್ಯ ಪಂಗಡದವರು ಜಾಗಟೆಗಳನ್ನು ಭಾರಿಸುವುದು ಇಲ್ಲಿನ ಸಂಪ್ರದಾಯವಾಗಿದೆ.

ಕುಂಟಮ್ಮ ತಾಯಿಯ ಜಾತ್ರೆ:

ಹರದನಹಳ್ಳಿಯಲ್ಲರುವ ದೇವಾಲಯಗಳಲ್ಲಿ ಇದೂ ಕೂಡ ಒಂದು ಇಲ್ಲಿನ ಮಂಟೇಸ್ವಾಮಿ ದೇವರ ಪ್ರತಿಸ್ಥಾಪನೆಯಾಗಿದ್ದು ಪ್ರತಿ ವರ್ಷ ಇಲ್ಲಿ ಜಾತ್ರೆ ಮಹೋತ್ಸವ ನಡೆಯುತ್ತಿತ್ತು. ಮಂಟೇಸ್ವಾಮಿ ಚಾಮರಾಜನಗರ ಜಿಲ್ಲೆಯ ಪ್ರಸಿದ್ಧ ದೇವರಾಗಿದ್ದು, ಇಲ್ಲಿನ ಬಹಳಷ್ಟು ಕುಟುಂಬಗಳ ಮನೆದೇವರು ಮಂಟೇಸ್ವಾಮಿಯಾಗಿದೆ. ಜನಪದ ಕಾವ್ಯಗಳನ್ನು ನೋಡಿದರೆ ದಕ್ಷಿಣ ಕರ್ನಾಟಕದಲ್ಲಿ ಅದರಲ್ಲೂ ಚಾಮರಾಜನಗರ ಜಿಲ್ಲೆಯಲ್ಲಿ ಮಲೈಮಹದೇಶ್ವರ ಮತ್ತು ಮಂಟೇಸ್ವಾಮಿ ಎಂಬ ಇಬ್ಬರು ಮಹಾಪುರುಷರಿದ್ದುದು ತಿಳಿದುಬರುತ್ತದೆ. ಆ ಕಾರಣದಿಂದಾಗಿ ಇಲ್ಲಿ ಮಂಟೇಸ್ವಾಮಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಹಿಂದೆ ಮಂಟೇಸ್ವಾಮಿ ಜಾತ್ರೆಯನ್ನು ಲಿಂಗಾಯಿತ ಜನಾಂಗದವರು ನಡೆಸಿಕೊಂಡು ಬರುತ್ತಿದ್ದರು. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಈ ಜಾತ್ರೆಯು ವಿಜೃಂಬಣೆಯಿಂದ ನಡೆಯುತ್ತಿತ್ತು. ಜಾತ್ರೆಯ ಸಂದರ್ಭದಲ್ಲಿ ಕೊಂಡವನ್ನು ಹಾಯುವುದು ರೂಢಿಯಲ್ಲಿತ್ತು. ಹೀಗೆ ಇರಬೇಕಾದರೆ ಒಂದು ಜಾತ್ರೆಯ ಕೊಂಡೋತ್ಸವ ನಡೆಯುತ್ತಿದ್ದಾಗ ಆ ಸಂದರ್ಭದಲ್ಲಿ ಕೊಂಡವನ್ನು ಹಾಯುವ ಸಂದರ್ಭದಲ್ಲಿ ಕೊಂಡದಲ್ಲಿ ಹುಲಿಯ ಹೆಜ್ಜೆಗಳು ಗೋಚರಿಸಿದ್ದರಿಂದ ಭಯಭೀತರಾದ ಜನರು ಉತ್ಸವ ನಿಲ್ಲಿಸಿದರು. ಅಂದಿನಿಂದ ಹಲವು ವರ್ಷಗಳ ಕಾಲ ಈ ಆಚರಣೆ ನಿಂತುಹೋಗಿತ್ತು. ಆದರೆ ಇತ್ತೀಚೆಗೆ ನಾಯಕ ಜನಾಂಗದವರು ಕುಂಟಮ್ಮ ತಾಯಿಯನ್ನು ಪ್ರತಿಸ್ಥಾಪಿಸಿ 1999ರಲ್ಲಿ ಆ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಕೊಂಡೋತ್ಸವವನ್ನು ಆಚರಿಸುತ್ತಾರೆ. ಈ ಹಬ್ಬವನ್ನು ಆಚರಿಸುವಾಗ ಕಂಡಾಯವನ್ನು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಟು ಪೂಜೆ ಸಲ್ಲಿಸುತ್ತಾರೆ. ಇದಾದ ಕೆಲವು ದಿನಗಳ ನಂತರ ಮನುಷ್ಯರ ಮೈಮೇಲೆ ಕುಂಟಮ್ಮ ತಾಯಿ, ಮಂಟೇಸ್ವಾಮಿ, ಕೋಟೆ ಬಸಪ್ಪ, ಕಾಳಮ್ಮ ತಾಯಿ ದೇವರು ಬಂದು ಜನರ ಕಷ್ಟ ಕಾರ್ಪಣ್ಯಗಳನ್ನು ತೊಡೆಯುತ್ತದೆ ಎಂಬುದು ಇಲ್ಲಿನ ಪ್ರತೀತಿ.

ಅಂದು ಹಬ್ಬದ ದಿವಸ ಊರಿನ ಬೀದಿಗಳಲ್ಲಿ ಹಸಿರು ತೋರಣ ರಂಗೋಲಿಗಳಿಂದ ಸಿಂಗರಿಸಿದ್ದು ಉತ್ಸವಕ್ಕೆ ಪೂಜೆಗಳನ್ನು ನೆರವೇರಿಸುತ್ತಾರೆ. ದೇವರ ಮುಂದೆ ಅನೇಕ ಕಲಾತಂಡಗಳು ತಮ್ಮ ಕಲೆಗಳನ್ನು ಪ್ರದರ್ಶಿಸುತ್ತಾರೆ. ದೊಣ್ಣೆವರಸೆ, ಕತ್ತಿವರಸೆ, ಕಂಸಾಳೆ,

ಗೊರವರ ಕುಣಿತ, ಗಾಡಿಗೊಂಬೆ, ಇನ್ನೂ ಮುಂತಾದ ಕಲಾ ಪ್ರದರ್ಶನಗಳು ಜರಗುತ್ತವೆ. ಈ ದೇವಸ್ಥಾನದ ಮುಂಭಾಗದಲ್ಲಿ 20 ಅಡಿ ಉದ್ದದ ಬೆಂಕಿಯ ಕೊಂಡವನ್ನು ಹಾಕಿರುತ್ತಾರೆ. ಇಲ್ಲಿ ಮೊದಲು ಕುರಿಮರಿಯು ಕೊಂಡವನ್ನು ಹಾಯ್ದುಹೊಗುತ್ತಿದ್ದು ನಂತರ ದೇವರಿಗೆ ಇದನ್ನು ಬಲಿಕೊಟ್ಟು ನಂತರ ಮೈಮೇಲೆ ದೇವರು ಬಂದ ಮನುಷ್ಯ ಕೊಂಡವನ್ನು ಹಾಯುತ್ತಾನೆ. ಹೀಗೆ ಅಂದಿನ ಜಾತ್ರೆಯ ಕಾರ್ಯಕ್ರಮಗಳು ಮುಕ್ತಾಯಗೊಳ್ಳುತ್ತವೆ. ಜಾತ್ರೆಯ ಸಂಜೆ ವೇಳೆಯಲ್ಲಿ ನಾಟಕ ಪ್ರದರ್ಶನವನ್ನು ಏರ್ಪಡಿಸಿರುತ್ತಾರೆ. ಈ ನಾಟಕವನ್ನು ಇಲ್ಲಿನ ಗ್ರಾಮಸ್ಥರೇ ಕಲಿತು ಪ್ರದರ್ಶನ ಮಾಡುವುದು ಇಲ್ಲಿನ ಕಲಾವಂತಿಕೆಯ ಪ್ರತಿಬಿಂಬ.

ಬಿಳಿಗಿರಿರಂಗನ ಜಾತ್ರೆ:

ಚಾಮರಾಜನಗರ ಜಿಲ್ಲೆಗೆ ಸೇರಿದ ಬಿಳಿಗಿರಿರಂಗನ ಬೆಟ್ಟದ ಪ್ರಸಿದ್ಧ ದೇವರು ಶ್ರೀ ಬಿಳಿಗಿರಿ ರಂಗನಾಥಸ್ವಾಮಿ, ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ನಡೆಯುವ ಬಿಳಿಗಿರಿರಂಗನಾಥ ಜಾತ್ರೆಯಲ್ಲಿ ಬಿಳಿಗಿರಿರಂಗಸ್ವಾಮಿಯ ಒಕ್ಕಲಿನವರು ಈ ಜಾತ್ರೆಗೆ ವಿವಿಧ ಕಡೆಗಳಿಂದ ಆಗಮಿಸಿರುತ್ತಾರೆ. ಹಾಗೆಯೇ ಈ ಗ್ರಾಮದಿಂದ ಅನೇಕ ಜನರು ಇಲ್ಲಿಗೆ ಹೋಗಿದ್ದು ಜಾತ್ರೆ ಮುಗಿಸಿ ಬಂದಂತ ಜನರು ಗ್ರಾಮಕ್ಕೆ ಹಿಂದಿರುಗುವ ಸಂದರ್ಭದಲ್ಲಿ ಬೇಟೆಮಣೆಯನ್ನು ಹಾಡುವ ಪರಿಪಾಠವಿದೆ. ಬೇಟೆಮಣೆ ಎಂದರೆ ಬಿಳಿವಸ್ತ್ರವೊಂದನ್ನು ನೆಲಕ್ಕೆ ಹಾಸಿ ಅದರ ಮೇಲೆ ಕಡ್ಲೆಪುರಿ ತೆಂಗಿನ ಕಾಯಿಯ ಚೂರುಗಳು, ಬೆಲ್ಲದ ಚೂರುಗಳನ್ನು ಹಾಕಿ ಅದರ ಸುತ್ತ ಎಂಟರಿಂದ ಹತ್ತು ಜನರು ಕೂಗಾಡುತ್ತಾ ಸುತ್ತುವರಿಯುತ್ತಾರೆ. ಹೀಗೆ ಬೇಟೆಮಣೆಯನ್ನು ಹಾಕಿ ಊರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸುತ್ತಾರೆ ನಂತರ ಇವರಿಗೆ ಊರಿನ ಜನರು ವಿಶೇಷ ಪೂಜೆಗಳನ್ನು ಮಾಡುತ್ತಾರೆ. ಆದರೆ ಇಂದು ಇಂತಹ ಆಚರಣೆಗಳು ಕಣ್ಮರೆಯಾಗಿವೆ.

ಮಳೆಬಾರದಿದ್ದರೆ ಹಬ್ಬ:

ನಾವು ಮೊದಲೇ ಹೇಳಿದಂತೆ ಹರದನಹಳ್ಳಿಯಲ್ಲಿ ಬಸವನ ಕಂಬವನ್ನು ಕಾಣುತ್ತೇವೆ. ಇದನ್ನು ದೊರೆಬಸಪ್ಪ ಎಂಬ ಹೆಸರಿನಿಂದ ಕರೆಯುವುದು ವಾಡಿಕೆಯಾಗಿದೆ. ಊರಿನಲ್ಲಿ ಮಳೆ ಸರಿಯಾಗಿ ಬಾರದಿದ್ದಾಗ, ದೊರೆಬಸಪ್ಪನಿಗೆ ಪೂಜೆ ಸಲ್ಲಿಸಿದರೆ ಮಳೆ ಬರುತ್ತದೆ ಎಂಬ

ನಂಬಿಕೆ ಈ ಊರಿನ ಜನರದು. ದೊರೆಬಸಪ್ಪನ ವಿಗ್ರಹಕ್ಕೆ ಇಲ್ಲಿನ ಜನರು 101 ಬಿಂದಿಗೆ ನೀರಿಗೆ 101 ನಿಂಬೆಹಣ್ಣಿನ ರಸವನ್ನು ಮಿಶ್ರಣಮಾಡಿ ಬಸವನ ವಿಗ್ರಹಕ್ಕೆ ಸುರಿದು ಪೂಜೆ ಸಲ್ಲಿಸುತ್ತಾರೆ. ಈ ಪೂಜೆಯು ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಇಲ್ಲಿಗೆ ಬಂದಂತಹ ಭಕ್ತಾದಿಗಳಿಗೆ ಸಪ್ಪೆ ರೊಟ್ಟಿ ಮತ್ತು ಮೊಸರನ್ನು ಹಂಚುತ್ತಾರೆ ಹಿಂದಿನಿಂದಲೂ ಈ ವಾಡಿಕೆ ಬೆಳೆದುಬಂದಿದೆ. ಹಿಂದಿನ ಕಾಲದಲ್ಲಿ ಹೀಗೆ ಪೂಜೆ ಮುಗಿಸಿ ಮನೆ ಸೇರುವ ಹೊತ್ತಿಗೆ ಮಳೆ ಬರುತ್ತಿತ್ತು ಎಂದು ಇಲ್ಲಿನ ಗ್ರಾಮಸ್ಥರು ತಿಳಿಸುತ್ತಾರೆ. ಇಂದು ಈ ಪದ್ದತಿ ಹರದನಹಳ್ಳಿಯಿಂದ ದೂರವಾಗಿದೆ. ಇದಕ್ಕೆ ನಾಗರೀಕತೆಯು ಒಂದು ಕಾರಣ.

9. ಹರದನಹಳ್ಳಿಯ ಇನ್ನಿತರ ವಿಚಾರಗಳು

ಚಲನಚಿತ್ರ: ಹರದನಳ್ಳಿಯಲ್ಲಿ ಪ್ರಸಿದ್ದ ಕಲಾವಿದರೆಂದರೆ **ಘಟಂ ಕೃಷ್ಣ.** ಇವರು ರಂಗನಾಯಕ ಮತ್ತು ಬೆಳಗಮ್ಮನವರ ಪುತ್ರನಾಗಿ 1944ರಲ್ಲಿ ಜನಿಸಿದರು. ಚಾಮರಾಜನಗರದಲ್ಲಿ ಇವರನ್ನು ಘಟಂ ಕೃಷ್ಣ ಎಂದು ಕರೆಯುವುವರು; ಹಾಗೂ ರಾಜ್ಯದ ಅಥ್ಲೆಟ್ ಕ್ರಿಡಾಪಟು ಕೂಡ ಹೌದು. 2002ನೇ ಸಾಲಿನಲ್ಲಿ ಕರ್ನಾಟಕ ನಾಟಕ ಅಕಾಡಮಿ ಪ್ರಶಸ್ತಿ ಪಡೆದ ಘಟಂ ಕೃಷ್ಣರವರು ಬಾಲ್ಯದಿಂದಲೇ ರಂಗಭೂಮಿಯಲ್ಲಿ ಅಭಿನಯಿಸುವ ಹವ್ಯಾಸವನ್ನು ಬೆಳೆಸಿಕೊಂಡವರು ನಂತರ ಮೈಸೂರಿನ **"ಶ್ರೀ ರಂಗ ಮಿತ್ರಮಂಡಲ"** ನಟ–ನಿರ್ಮಾಪಕ ಎಂ ಪಿ ಶಂಕರ್‌ರವರ ಭರಣಿ ಕಲಾಮಂಡಲಯಲ್ಲಿ ಪಳಗಿದರು. ಹಳ್ಳಿಗಳಿಗೆ ಹೋಗಿ ತಬಲ, ನಾಟಕ, ಘಟಂ ನುಡಿಸುವ ಕಲೆಯನ್ನು ಹೇಳಿಕೊಡುತ್ತದ್ದರು.

ದಿ॥ ಕೊಟ್ಟಪ್ಪನವರ ದಾನಶೂರಕರ್ಣ ನಾಟಕ್ಕೆ ದಿ॥ ಗುರುರಾಜ ನಾಯ್ಡು ಹರಿಕಥೆಗೆ ಕೃಷ್ಣರವರ ಹಲವಾರು ವರ್ಷಗಳಿಂದ ಘಟಂ ಸೇವೆಯನ್ನು ಸಲ್ಲಿಸುತ್ತಿದ್ದರು. ದಿ॥ ಮೈಸೂರು ಲೋಕೇಶ್‌ರವರ ಕಂಪನಿಯಲ್ಲಿ ನಟರಾಗಿ ವಾದ್ಯ ಕಲಾವಿದರಾಗಿ ಹೆಸರುವಾಸಿಯಾಗಿದ್ದರು. ಅನೇಕ ಹವ್ಯಾಸ ಸಂಸ್ಥೆಯಲ್ಲಿ ಆಹ್ವಾನಿತ ಕಲಾವಿದನಾಗಿ ಸಾವಿರಾರು ನಾಟಕದಲ್ಲಿ ತೊಡಗಿ ತಮ್ಮ ಅಭಿನಯದಲ್ಲಿ ಜನ ಮೆಚ್ಚುಗೆ ಪಡೆದಿದ್ದಾರೆ.

ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದು ಇವರು ಎಇಒ ಆಗಿ ನಿವೃತ್ತಿ ಹೊಂದಿದ್ದು ಇವರ ಚಲನಚಿತ್ರಕ್ಕೆ ಮೊದಲು ಪಾದರ್ಪಣೆ ಮಾಡಿದ್ದು ಡಾ॥ ರಾಜಕುಮಾರ ಅಭಿನಯದ ಚಿತ್ರವಾದ ಭಾಗ್ಯದ ಬಾಗಿಲು ಇದರಲ್ಲಿ ಹುಚ್ಚನ ಪಾತ್ರ, ನಂತರ ಪುಟ್ಟಣ್ಣ ಕಣಗಲ್‌ರವರ ಕಪ್ಪುಬಿಳುಪು, ಶರಪಂಜರ, ನಾರಿ ಮುನಿದರೆ ಮಾರಿ, ಜಯ ವಿಜಯ, ಋತುಗಾನ, ಗಂಧರ್ವ, ಸಂಸಾರಕ್ಕೆ ಸವಾಲ್. ಮತ್ತು ನಿಗೂಢರಾತ್ರಿಗಳು ಎಂಬ ಸಿನಿಮಾದಲ್ಲಿ ಅಭಿನಯಿಸಿದ್ದಾರೆ. ಕಿರುತೆರೆಯಲ್ಲಿ ಬೀದಿ ಮಕ್ಕಳು, ಹೆಣ್ಣು, ಅಂಕುಶ, ದರ್ಶನಗಳಲ್ಲಿ ನಟಿಸಿದ್ದಾರೆ. ಇವರಿಗೆ ಹಾಸ್ಯರಾಜ್ಯ ಎಂಬ ಬಿರುದನ್ನು ನೀಡಿ ಸಂಘ ಸಂಸ್ಥೆಗಳು ಗೌರವಿಸಿವೆ.

ಚಿತ್ರ ನಿರ್ದೇಶಕ ಹ.ಸೂ. ರಾಜಶೇಖರ್

ಹರದನಹಳ್ಳಿಯ ಸೂರ್ಯನಾಯಕ ಮತ್ತು ಮಹದೇವಮ್ಮ ದಂಪತಿಗಳಿಗೆ ರಾಜಶೇಖರ ಜನಿಸಿದರು. ಬಾಲ್ಯದಿಂದಲೇ ಕಲೆಯಲ್ಲಿ ಹೆಚ್ಚಿನ ಆಸಕ್ತಿಯಿದ್ದು ಶಾಲಾ ಕಾಲೇಜಿನಲ್ಲಿ ನಾಟಕ ಮಾಡುವುದು, ಏಕಾಭಿನಯ ಪಾತ್ರದಲ್ಲಿ ಅಭಿನಯಿಸುವುದು ಅವರ ಹವ್ಯಾಸಗಳಾಗಿದ್ದವು ಹರದನಹಳ್ಳಿಯಲ್ಲಿ **ತ್ಯಾಗಿ** ಎಂಬ ಸಾಮಾಜಿಕ ನಾಟಕದಲ್ಲಿ ಪ್ರಮುಖ ನಾಯಕನ ಪಾತ್ರದಲ್ಲಿ ಅಭಿನಯಿಸಿದ್ದು ಇದನ್ನು ಗಮನಿಸಿದಲ್ಲಿ ಈ ಊರಿನವರೇ ಆದ ಘಟಂ ಕೃಷ್ಣರವರು ರಾಜಶೇಖರವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಇವರನ್ನು ಶೂಟಿಂಗ್ ಕೆಲಸಕ್ಕೆ ಸೇರಿಸಿದ್ದರು.

ರಾಜಶೇಖರ್ ನಿರ್ದೇಶನ ಮಾಡಿದ ಮೊದಲ ಚಿತ್ರ ಗಂಧರ್ವ ಮೊದಲ ಚಿತ್ರ 50 ದಿನ ಪೂರೈಸಿದ ನಂತರ ಕರ್ಪೂರ ಚಲನಚಿತ್ರವನ್ನು ನಿರ್ದೇಶಿಸಿ ಕರ್ನಾಟಕದ ಮುಖ್ಯಮಂತ್ರಿ ಜೆ.ಹೆಚ್. ಪಟೇಲ್‌ರಿಂದ ರಾಜ್ಯ ಪ್ರಶಸ್ತಿ ಪಡೆದು ಅಲ್ಲದೇ ನಟಸಾರ್ವಭೌಮ ಡಾ॥ರಾಜ್‌ಕುಮಾರ್‌ರವರ ಪೂರ್ಣಿಮ ಎಂಟರ್ ಪ್ರೈಸಸ್‌ನಲ್ಲಿ ಎರಡು ಚಿತ್ರಗಳನ್ನು ನಿರ್ದೇಶನ ಮಾಡಿದ್ದಾರೆ. ರಾಜಶೇಖರ್‌ರವರು ಸರಳ ಜೀವಿಯಾಗಿದ್ದು ನಿರ್ದೇಶಕನೆಂಬ ಗರ್ವವಿಲ್ಲದೆ ಹರದನಹಳ್ಳಿಗೆ ಬಂದಾಗ ತಮ್ಮ ಹಳೆಯ ಸ್ನೇಹಿತರನ್ನು ಪ್ರೀತಿ ವಿಶ್ವಾಸದಿಂದ ಮಾತನಾಡಿಸುತ್ತಾರೆ. ಅದು ಅಲ್ಲದೇ ದೂರದರ್ಶನ ವಾಹಿನಿಯಲ್ಲಿ ಬರುವ ಧಾರವಾಹಿಗಳನ್ನು ನಿರ್ದೇಶನ ಮಾಡುತ್ತಿದ್ದಾರೆ.


ಹರದನಹಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರ



ಚಾಮರಾಜನಗರ ಜಿಲ್ಲೆಗೆ ಸಮೀಪದ ಹರದನಹಳ್ಳಿ ಗ್ರಾಮದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದು ಇದನ್ನು 2002ರಲ್ಲಿ ರೇಷ್ಮೇ ಜವಳಿಖಾತೆ ಸಚಿವರು, ಹಾಗೂ ಚಾಮರಾಜನಗರ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದ ಎಂ. ಮಹದೇವ್ ರವರು ಇದನ್ನು ಉದ್ಘಾಟಿಸಿದರು. ಇದು ಸ್ಥಾಪನೆಯಾಗಿ ಸುಮಾರು 6 ವರ್ಷಗಳಾಗಿದ್ದು. ಈ ಆಸ್ಪತ್ರೆಯಲ್ಲಿ ಒಬ್ಬ ಮಹಿಳಾ, ಒಬ್ಬ ಪುರುಷ ವೈದ್ಯರುಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹರದನಹಳ್ಳಿ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳಾದ ಅಂಕಶೆಟ್ಟಿಪುರ, ಬ್ಯಾಡಮೂಡ್ಲು, ಬಂಡಿಗೆರೆಯಿಂದ ಹಲವು ವಿವಿಧ ಕಾಯಿಲೆಯ ರೋಗಿಗಳು ಬಂದು ಇಲ್ಲಿ ಚಿಕಿತ್ಸೆ ಪಡೆಯುತ್ತಾರೆ.

ಗ್ರಾಮ ಪಂಚಾಯಿತಿ:

ಹರದನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು ಗ್ರಾಮ ಪಂಚಾಯಿತಿಯಲ್ಲಿ ಸದಸ್ಯರು ಅಧ್ಯಕ್ಷರುಗಳಾಗಿ ಕಂಡುಬರುತ್ತಾರೆ. ಇವರು ಸ್ಥಳೀಯ ಜನರಿಂದ ಚುನಾವಣೆಯ ಮೂಲಕ ಆಯ್ಕೆಯಾಗುತ್ತಾರೆ. ಇವರು ಸರ್ಕಾರದಿಂದ ಬರುವ ಎಲ್ಲಾ ಅನುದಾನಗಳನ್ನು



ಆರ್ಥಿಕ ಸಹಾಯವನ್ನು ಪಡೆದುಕೊಂಡು ಚರಂಡಿಗಳ ನಿರ್ಮಾಣ, ಬೀದಿ ದೀಪಗಳ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ ಇನ್ನು ಮುಂತಾದ ಸಾರ್ವಜನಿಕ ಕೆಲಸವನ್ನು ಮಾಡಿಸಿಕೊಡುತ್ತಾರೆ. ರಾಜಕೀಯವಾಗಿ ಇಲ್ಲಿನ ಜನರು ತೀರಾ ಹಿಂದುಳಿದಿದ್ದು, ಕೇವಲ ಒಂದು ಭಾರಿ ತಾಲೋಕು ಪಂಚಾಯಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದರು. ಅದನ್ನು ಹೊರತು ಪಡಿಸಿ ಯಾವುದೇ ರೀತಿಯ ರಾಜಕೀಯ ಬೆಳವಣಿಗೆಯಾಗಿಲ್ಲ.

10 ಉಪಸಂಹಾರ

ಹಿಂದೆ ನೋಡಿದಂತಹ ಹರದನಹಳ್ಳಿಯ ಸಾಂಸ್ಕೃತಿಕ ಅಧ್ಯಯನದಲ್ಲಿ ಆ ಗ್ರಾಮದ ಸಂಸ್ಕೃತಿಯು ಅನಾವರಣಗೊಂಡಿದೆ ಎಂದು ಭಾವಿಸಿರುತ್ತೇನೆ ಇಂತಹ ಗ್ರಾಮದಲ್ಲಿನ ಎಲ್ಲಾ ಅಂಶಗಳು ಅಂದರೆ ಅಧ್ಯಯನದಿಂದ ತಿಳಿದು ಬಂದಂತಹ ಅಷ್ಟು ವಿಷಯಗಳು ಅಲ್ಲಿನ ಜನರ, ಅಲ್ಲಿನ ವಿದ್ಯಾವಂತರ ಮಾತುಗಳಲ್ಲೂ ಮತ್ತು ನಾನು ಅಭ್ಯಾಸಿಸಿದ ಕೃತಿಗಳಿಂದ ತಿಳಿದು ಬಂದಂತಹ ವಿಷಯಗಳಾಗಿವೆ.

ಹರದನಹಳ್ಳಿ ಗ್ರಾಮ ಒಂದು ವಿಶಿಷ್ಟ ಸಂಪ್ರದಾಯವನ್ನು ಸಂಸ್ಕೃತಿಯನ್ನು ಹೊಂದಿಕೊಂಡು ಬಂದಂತಹದ್ದು ಇಲ್ಲಿನ ಜನರ ಜೀವನ ವ್ಯವಸ್ಥೆಗಳು ಬೇರೆ ಗ್ರಾಮಗಳಲ್ಲಂತಲ್ಲ ಸ್ವಲ್ಪ ಭಿನ್ನವಾಗಿರುವುದನ್ನು ಕಾಣುತ್ತೇವೆ ಇಲ್ಲಿ ತನ್ನದೆ ಆದ ಸಂಸ್ಕೃತಿ ಹೊಂದಿರುವುದು ಒಂದು ವಿಶೇಷ ಅಂಶವಾಗಿದೆ.

ಚಾಮರಾಜನಗರ ಜಿಲ್ಲೆಯಲ್ಲೆ ಒಂದು ವಿಶೇಷ ವಾದಂತಹ ಗ್ರಾಮ ಇದು ಆ ಕಾರಣದಿಂದಾಗಿಯೇ ನಮ್ಮ ಅಧ್ಯಯನದ ವಸ್ತುವಾದದ್ದು ನಾವು ಅಧ್ಯಯನದ ಆಂತರ್ಯದಲ್ಲಿ ಹೇಳಿದಂತೆ ಇಲ್ಲಿ ಅನೇಕ ದೇವಾಲಯಗಳನ್ನು ಕಾಣುತ್ತೇವೆ ಅದರಲ್ಲಿ ವೀರ ಶೈವ ಧರ್ಮದ ಉನ್ನತಿಯ ಪ್ರತೀಕ ಶ್ರೀ ದಿವ್ಯಲಿಂಗೇಶ್ವರ ದೇವಾಲಯದ ನಿರ್ಮಾಣದ ವಾಸ್ತು ಶೈಲಿ ತುಂಬಾ ಮನಮೋಹಕ .ದಕ್ಷಿಣ ಕರ್ನಾಟಕದಲ್ಲೂ ವೀರಶೈವರ ಪ್ರಾಬಲ್ಯವನ್ನು ಇದು ಗುರುತ್ತಿಸುತ್ತದೆ. ಇಲ್ಲಿಯೆ ಮತ್ತೊಂದು ಅಂಶವನ್ನು ಗಮನಿಸಬಹುದು ಅದೆಂದರೆ ಶ್ರೀ ಮಲೈಮಹಾದೇಶ್ವರ ಸ್ವಾಮಿ. ಮತ್ತು ತಿಪ್ಪೇಸ್ವಾಮಿ ಇವರಿಗೂ ಇಲ್ಲಿಯೇ ದೀಕ್ಷೆ ಆಗಿತ್ತು ಎಂಬುದು ಶ್ರೀ ಮಲೈ ಮಹಾದೇಶ್ವರ ದೇವಾಲಯ ದಕ್ಷಿಣ ಕರ್ನಾಟಕದಲ್ಲೆ ಬಹಳ ಪ್ರಸಿದ್ಧಿ ಯನ್ನು ಪಡೆದು ಕೊಂಡಿದೆ .ಇಂತಹ ವಿಷಯ ವಸ್ತು ನಮ್ಮ ಅಧ್ಯಯನದಿಂದಲೇ ತಿಳಿದು ಬಂದಿದೆ ಎಂಬುದು ಸ್ತುತ್ಯರ್ಹವಾದದ್ದು.

ಶ್ರೀ ದಿವ್ಯಲಿಂಗೇಶ್ವರ ದೇವಾಲಯದ ವಾಸ್ತು ಶೈಲಿ ಅದರ ನಿರ್ಮಾಣ ವ್ಯವಸ್ಥೆಗಳು ನಕ್ಷತ್ರಕಾರದ ಜಗಲಿಯ ಮೇಲೆ ದೇವಾಲಯದ ನಿರ್ಮಾಣ ಎಲ್ಲವನ್ನು ಗಮನಿಸಿದರೆ ಇದು ಹೊಯ್ಸಳರ ಕಾಲದ್ದೆ ಎಂಬ ನಿರ್ಧಾರವನ್ನು ತಾಳಬಹುದಾಗಿದೆ ಇಲ್ಲಿನ ಪ್ರಮುಖ ದೇವರು ಶ್ರೀ ದಿವ್ಯಲಿಂಗೇಶ್ವರ ಬಹಳ ಪ್ರಸಿದ್ದ ವಾದಂತಹದ್ದು ಈ ದೇವಾಲಯದ ನಿರ್ಮಾಣ ಕಾಲ ಕ್ರಿ.ಶ, 13ನೇ ಶತಮಾನ ಎಂದು ಗುರುತಿಸಲಾಗಿದೆ ಆ ಕಾಲಕ್ಕಾಗಲೇ ಇಲ್ಲಿನ ಪ್ರದೇಶ ಶೈವ ಧರ್ಮದ ಪ್ರಭಾವಕ್ಕೆ ಒಳಗಾಗಿತ್ತು ಇಲ್ಲಿನ ಶ್ರೀ ದಿವ್ಯ ಲಿಂಗೇಶ್ವರದ ಲಿಂಗವು ಉದ್ಭವಲಿಂಗ ಎಂಬ ಪ್ರತೀತಿಯು ಇದೆ, ಇಂದು ಇದರ ರಾಜಗೋಪುರ ಮಳೆಯಿಂದ ನಾಶವಾಗಿರುವುದನ್ನು ಕಾಣಬಹುದು.

ಶ್ರೀಗೋಪಾಲ ಕೃಷ್ಣ ದೇವಾಲಯವು ಹರದನಹಳ್ಳಿಯ ಪ್ರಸಿದ್ದ ದೇವಾಲಯಗಳಲ್ಲಿ ಒಂದು ಇದು ವೈಷ್ಣವ ಜನಾಂಗದ ಪ್ರಾಬಲ್ಯದ ಸಂಕೇತವಾಗಿ ನಿಲ್ಲುತ್ತದೆ. ವೀರಶೈವ ಮತ್ತು ವೈಷ್ಣವರ ವರ್ಗ ಸಂಘರ್ಷವೇ ಈ ದೇವಾಲಯಕ್ಕೆ ಅಡಿಪಾಯ ವೀರಶೈವರ ಗೋಸಲಮಠವನ್ನು ನಾಶಗೊಳಿಸಿ ಶ್ರೀ ಗೋಪಾಲ ಕೃಷ್ಣ ದೇವಾಲಯದ ನಿರ್ಮಾಣವಾಯಿತು ಇದು ನೆಡೆದದ್ದು ಮೈಸೂರಿನ ಜಯ ಚಾಮರಾಜೇಂದ್ರ ಅರಸರ ಆಡಳಿತಕ್ಕೆಒಳಪಟ್ಟ ಸಂದರ್ಭದಲ್ಲಿ ಗೋಸಲಮಠ ಇಲ್ಲಿನ ವಿದ್ಯಾಕೇಂದ್ರವಾಗಿತ್ತೆಂಬುದು ಮತ್ತೊಂದು ವಿಶೇಷಾಂಶ ಇಲ್ಲಿನ ಬಡಜನತೆಗೆ ಇದೊಂದು ವರದಾನವಾಗಿ ಪರಿಣಮಿಸಿತ್ತು ಇಂದು ಇದು ನಾಶವಾಗಿದೆ ಧರ್ಮಗಳ ಸಂಘರ್ಷದ ತುಳಿತಕ್ಕೆ ಈ ವಿದ್ಯಾಕೇಂದ್ರ ಸಂಪೂರ್ಣ ಶಿಥಿಲ ಗೊಂಡದ್ದು ವಿಪರ್ಯಾಸ ಗೋಸಲ ಮಠದ ನಿರ್ಮಾಣಕ್ಕೆ ಕಾರಣತಾದವರು ಶ್ರೀ ತೋಂಟದ ಸಿದ್ದಲಿಂಗೇಶ್ವರ ಯತಿಗಳು. ಇವರ ಜನ್ಮಸ್ಥಳ ಇದೇ ಹರದನಹಳ್ಳಿ .ಇಂದಿಗೂ ಇವರು ಜನಿಸಿದ ಮನೆಯನ್ನು ನೋಡಬಹುದು.

ಇಲ್ಲಿನ ಮಾರಮ್ಮ ದೇವಾಲಯ ಆಧುನಿಕ ವಾಗಿ ನಿರ್ಮಾಣವಾದರೂ ಸುತ್ತಲಿನ ಗ್ರಾಮಗಳಿಗೆ ಅತಿ ಪ್ರಸಿದ್ದಿ ಪ್ರತಿ ಗ್ರಾಮಕ್ಕೂ ಗ್ರಾಮದೇವತೆ ಇರುವಂತೆ

ಈ ಗ್ರಾಮದ ಗ್ರಾಮದೇವತೆ ಮುಡುಕುಮಾರಮ್ಮ ಸದಾ ಈಕೆ ಗ್ರಾಮವನ್ನು ಕಾಯುತ್ತಿದ್ದು ಇಲ್ಲಿ ಸಾಂಕ್ರಾಮಿಕ ರೋಗಗಳು ಸಾವು ನೋವುಗಳು ಕೆಟ್ಟ ಕಾಯಿಲೆಗಳು ಬರದಂತೆ ತಡೆಯುತ್ತಾಳೆ ಎಂಬುದು ಈ ಜನರ ನಂಬಿಕೆ ಯಾಗಿದೆ ಪ್ರತಿವರ್ಷ ಮಾರಮ್ಮನ ಜಾತ್ರೆ ವಿಶೇಷವಾಗಿ ನಡೆಯುತ್ತದೆ ಇದನ್ನು ಇಲ್ಲಿನ ನಾಯಕ ಜನಾಂಗದವರು ನಿರ್ವಹಿಸಿ ಕೊಂಡು ಬರುತ್ತಿದ್ದಾರೆ ಕಾಳಮ್ಮನ ದೇವಾಲಯವು ಉಪ್ಪಾರ ಜನಾಂಗ ನಿರ್ವಹಿಸಿ ಕೊಂಡುಬಂದಿರುವ ದೇವಾಲಯ ಇಲ್ಲಿಯು ಅನೇಕ ಪೂಜೆ ಪುನಸ್ಕಾರಗಳು ನೆಡೆಯುತ್ತಿದ್ದು ಇದಕ್ಕೂ ತನ್ನದೆ ಆದ ಇತಿಹಾಸ ಹೊಂದಿರುವುದನ್ನು ಅಧ್ಯಯನ ದೊಳಗೆ ವಿವರವಾಗಿ ತಿಳಿಸಿದ್ದೆನೆ.

ಮಂಟೇಸ್ವಾಮಿ ದೇವಾಲಯವು ಬಹು ಮುಖ್ಯ ದೇವಾಲಯಗಳಲ್ಲಿ ಒಂದು ಎಂದು ಹೇಳಿಕೊಂಡರು ಇಂದು ಇಲ್ಲಿ ಕುಂಟಮ್ಮ ತಾಯಿಯ ವಿಗ್ರಹವೊಂದನ್ನು ಕೂಡ ಪ್ರತಿಷ್ಠಾಪಿಸಲಾಗಿ ಎರಡು ದೇವತೆಗಳನ್ನೊಳಗೊಂಡ ದೇವಾಲಯವಾಗಿದೆ, ಹಿಂದೆ ಇಲ್ಲಿ ಜಾತ್ರೆ ನಡೆಯುತ್ತಿದ್ದು ಕೊಂಡ ಹಾಯುವ ಅಂಶಗಳು ಸಿಗುತ್ತವೆ ಮತ್ತೆ ನಿಂತ ಬಗೆ ಆರಂಭವಾದಬಗೆ ಎಲ್ಲವು ಅಧ್ಯಯನದಲ್ಲಿ ತಿಳಿಸಿಕೊಟ್ಟಿದ್ದೇನೆ.

ಹಿಂದೆ ಈ ಹರದನಹಳ್ಳಿ ಗ್ರಾಮದ ಸುತ್ತ ಕೋಟೆಯನ್ನು ಕಟ್ಟಲಾಗಿತ್ತು ಎಂಬ ಪ್ರತ್ತೀತಿ ಇದೆ ಆದರೆ ಇಂದು ಅಂತಹ ಯಾವುದೇ ಕುರುಹುಗಳು ಇಲ್ಲದಂತೆ ನಾಶಹೊಂದಿದೆ .ಈ ಕೋಟೆಯ ಸುತ್ತ ಮರಗದ ಕೆರೆ ಹರಡಿದ್ದು ಯಾವಾಗಲೂ ನೀರಿನಿಂದ ಕೂಡಿರುತಿತ್ತು ಇಂದು ಮರಗದ ಕೆರೆಯು ಬತ್ತಿ ಹೋಗಿದೆ

ಬಂಡಿಕೆರೆಯು ಇಲ್ಲಿ ಇದ್ದು ಇಂದು ನೀರಿಲ್ಲದೆ ಇದೇಒಂದು ಪುಟ್ಟಗ್ರಾಮವಾಗಿ ಮಾರ್ಪಟ್ಟಿರುವುದು ಗಮನಾರ್ಹ ಇಂದು ಕೋಟೆಯನ್ನು ಕೆಡವಿ ಗ್ರಾಮ ಬೆಳೆಯುತ್ತ ಬಂದಿರ ಬಹುದೆಂಬ ಊಹೆಯು ಮಾಡಬಹುದಷ್ಟೆ.

ಹರದನಹಳ್ಳಿ ಕಳ್ಳ ಕಾಕರ ಭೀತಿಯ ಹಿನ್ನೆಲೆಯಲ್ಲಿ ಮೈಸೂರು ಅರಸರು ಇಲ್ಲಿಗೆ ಒಬ್ಬ ಸಮರ್ಥ ನಾಯಕನನ್ನು ಆಡಳಿತಕ್ಕೆ ನಿಯೋಜಿಸುತ್ತಾರೆ . ಆತನೇ ಮಾಧವ ದಣ್ಣಾಯಕ ಈತನ ಆಳ್ವಿಕೆಯ ನಂತರವೇ ಇಲ್ಲಿ ನಾಯಕ ಜನಾಂಗ ಪ್ರಧಾನವಾಗಿ ಬೆಳೆಯಿತ್ತೆಂಬುದನ್ನು ಇಲ್ಲಿಯ ಇತಿಹಾಸ ಹೇಳುತ್ತದೆ ಮಾಧವದಣ್ಣಾಯಕನು ಎಲ್ಲ ಕಳ್ಳ ಕಾಕರನ್ನು ಸೆದೆ ಬಡಿದು ತನ್ನ ಆಳ್ವಿಕೆ ಮಾಡುತ್ತಾನೆ ಇದರ ವಿವರವು ಕೂಡ ನಮ್ಮ ಅಧ್ಯಯನದೊಳಗೆ ಇದೆ. ಅವನ ವಂಶಸ್ಥರು ನಂತರದ ದಿನಗಳಲ್ಲಿ ಆಡಳಿತ ಸೂತ್ರವನ್ನು ಹಿಡಿದು ಹರದನಹಳ್ಳಿಯ ಪ್ರಸಿದ್ಧಿಗೆ ಕಾರಣಕರ್ತರಾಗಿದ್ದಾರೆ.

ಇಲ್ಲಿ 62 ಶಾಸನಗಳನ್ನು ಇಂದಿಗೂ ನೋಡಬಹುದು ಇವುಗಳಲ್ಲಿ ಬುಹುಪಾಲು ದಾನ ಶಾಸನಗಳೆ ಇವೆಲ್ಲದರ ಕಾಲ 13 ನೇ ಶತಮಾನದಿಂದ 16 ನೇ ಶತಮಾನದನಡುವೆ ಕೆತ್ತಲಾದಂತಹವು ಇದರ ಎಲ್ಲ ವಿವರಗಳು 'ಎಫಿಗ್ರಾಫಿಯ ಕರ್ನಾಟಕದಲ್ಲಿ ಸೇರಿವೆ

ಹರದನಹಳ್ಳಿ ಯಲ್ಲಿ ವಿಶೇಷವಾದ ಮತ್ತೊಂದು ಅಂಶ ಬಸವನ ಕಂಬ ಇದು 15 ಅಡಿ ಎತ್ತರದ ಕಲ್ಲಿನ ಕಂಬದ ಮೇಲೆ ಪ್ರತಿಷ್ಠಾಪನೆ ಗೊಂಡಂತಹದ್ದು ಮಳೆಬರದಿದ್ದರೆ ಇಲ್ಲಿ ಹಬ್ಬಗಳನ್ನು ನೆಡೆಸಲಾಗುತ್ತದೆ.

ದೊಡ್ಡ ಕಲ್ಯಾಣಿ ಮತ್ತು ಚಿಕ್ಕ ಕಲ್ಯಾಣಿ(ಗೋಮುಖ)ಇಲ್ಲಿನ ಎರಡು ಪ್ರಮುಖ ಕೊಳಗಳು ದೊಡ್ಡ ಕಲ್ಯಾಣಿಯು ಶ್ರೀ ತೋಂಟದ ಸಿದ್ದಲಿಂಗ ಯತಿಗಳು ಸ್ನಾನ ಮಾಡುತಿದ್ದಂತಹ ಪ್ರದೇಶವಾಗಿದೆ. ಚಿಕ್ಕ ಕಲ್ಯಾಣಿಯಲ್ಲಿ ಬಸವನ ವಿಗ್ರಹವು ಒಂದು ಕಲ್ಲಿನ ಕಂಬದಮೇಲೆ ಪ್ರತಿಷ್ಠಾಪನೆ ಮಾಡಲಾಗಿದೆ ಇದು ಮೂರು ಮೂಲೆಗಳನ್ನು ಒಳಗೊಂಡಂತಹ ಕೊಳ ಅದಕ್ಕಾಗಿ ಇದನ್ನು ತ್ರಿಮೂಲ ಕೊಳ ಎಂತಲು ಕರೆಯುವ ವಾಡಿಕೆ ಇತ್ತು.

ಇಂತಹ ಎಲ್ಲ ವಿಚಾರಗಳನ್ನು ನನ್ನ ಹರದನಹಳ್ಳಿಯ ಸಾಂಸ್ಕೃತಿಕ ಅಧ್ಯಯನದಲ್ಲಿ ತಿಳಿಸಲಾಗಿದೆ ಇಂದಿನ ವರೆವಿಗೂ ಇದರ ಅಭಿವೃದ್ದಿ ಬಗ್ಗೆ ಸರ್ಕಾರ ಯಾವುದೇರೀತಿಯ ಯೋಜನೆಗಳನ್ನು ರೂಪಿಸಿಲ್ಲ ಇದೊಂದು

ಪ್ರವಾಸ ಸ್ಥಳಕ್ಕೆ ಉತ್ತಮ ಪ್ರದೇಶವಾಗಿದೆ ಹೊಯ್ಸಳರ ಕಾಲದ ಪ್ರತೀಕವಾಗಿ ನಿಲ್ಲುತ್ತದೆ.

ಸಾಂಸ್ಕೃತಿಕ ಅಧ್ಯಯನ ಒಂದು ಪ್ರದೇಶದ ಒಟ್ಟಾರೆ ಸಂಸ್ಕೃತಿಯನ್ನು ಅಧ್ಯಯನ ಮಾಡುವುದರ ಮೂಲಕ ಅಲ್ಲಿನ ವಿಶೇಷ ಮತ್ತು ಮುಚ್ಚಿಹೋದ ಅಂಶಗಳನ್ನು ಹೊರತೆಗೆದು ತೋರಿಸುನ ಪ್ರಯತ್ನ ಮಾಡುತ್ತದೆ ಅಂತಹ ಪ್ರಯತ್ನ ಒಂದು ಗ್ರಾಮದ ಸಂಸ್ಕೃತಿಯು ತಿಳಿಯಲ್ಪಡುತ್ತದೆ ಅಂತಹ ಕೆಲಸವನ್ನು ಹರದನಹಳ್ಳಿಯ ಸಾಂಸ್ಕೃತಿಕ ಅಧ್ಯಯನ ಸ್ವಲ್ಪ ಮಟ್ಟಿಗಾದರು ಮಾಡಿದೆ ಎಂದು ಬಾವಿಸಿದ್ದೇನೆ.

ಒಂದು ಪ್ರದೇಶದ ಸಂಸ್ಕೃತಿಯ ಅಧ್ಯಯನ ಸುಲಭಸಾಧ್ಯವಾದುದ್ದಲ್ಲ ಅವಿರತ ಶ್ರಮ ಇರಬೇಕಾಗುತ್ತದೆ ಹರದನಹಳ್ಳಿಯ ಸಂಸ್ಕೃತಿಯ ಸಂಪೂರ್ಣ ವಿವರವನ್ನು ಇಲ್ಲಿ ನೀಡಲು ಸಾಧ್ಯ ವಾಗದಿದ್ದರು ಅಲ್ಲಿ ಪ್ರಚಲಿತದಲ್ಲಿರುವ ಅಂಶಗಳು ಇಲ್ಲಿ ನಮೂದಾಗಿವೆ.

ಅಡಿ ಟಿಪ್ಪಣಿ

1) ಹರದನಹಳ್ಳಿ ದರ್ಶನ–ಹರದನಹಳ್ಳಿ ನಂಜುಂಡಸ್ವಾಮಿ

ಪುಟ–18

2) ಹರದನಹಳ್ಳಿ ದರ್ಶನ–ಹರದನಹಳ್ಳಿ ನಂಜುಂಡಸ್ವಾಮಿ

ಪುಟ–19

3) ಕನ್ನಡ ವಿಶ್ವಕೋಶ– ಮೈಸೂರು ವಿಶ್ವ ವಿದ್ಯಾನಿಲಯ

(ಸಂಪುಟ –01)ಪುಟ–1568

4) ಹರದನಹಳ್ಳಿ ದರ್ಶನ– ಹರದನಹಳ್ಳಿ,ನಂಜುಂಡಸ್ವಾಮಿ

ಪುಟ–33

5) ಗೋಸಲ ಪೀಠದ ಪರಂಪರೆ–ಎಚ್.ಗಂಗಾಧರನ್

ಪುಟ–4

6) ಗೋಸಲ ಪೀಠದ ಪರಂಪರೆ– ಹೆಚ್.ಗಂಗಾಧರನ್

ಪುಟ–27

ಅಧ್ಯಯನಕ್ಕೆ ಪೂರಕ ಮಾಹಿತಿ ನೀಡಿದವರು

ಮಹೇಶ ಬಾಬು.ಪಿಎಂ.ಎ.,ಬಿ.ಇಡಿ	– ಕನ್ನಡ ಉಪನ್ಯಾಸಕರು, ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ.
ರಾಮಣ್ಣ. ಬಿಎಬಿ.ಇಡಿ	– ಉಪ ಪ್ರಾಂಶುಪಾಲರು, ಸರ್ಕಾರಿ ಪದವಿ ಪೂರ್ವ ಕಾಲೇಜು, ತೆರಕಣಾಂಬಿ
ನಂಜುಂಡಸ್ವಾಮಿ, ಎಂ.ಎ	– ಕನ್ನಡ ಉಪನ್ಯಾಸಕರು, ಸರ್ಕಾರಿ ಪದವಿ ಕಾಲೇಜು, ಚನ್ನರಾಯ ಪಟ್ಟಣ
ಟೈಟಸ್, ದೈಹಿಕ ಶಿಕ್ಷಕರು	– ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹರದನಹಳ್ಳಿ.
ಕೆಂಪಣ್ಣ ನಾಯ್ಕ	– ಮಾರಮ್ಮ ದೇವಸ್ಥಾನದ ಅರ್ಚಕರು
ವೇಣು	– ಶ್ರೀ ದಿವ್ಯಲಿಂಗೇಶ್ವರ ದೇವಸ್ಥಾನದ ಅರ್ಚಕರು, ಹರದನಹಳ್ಳಿ
ಮಂಜುನಾಥ್.ಬಿ	– ಪೋಲೀಸ್ ಇಲಾಖೆ, ಚಾಮರಾಜನಗರ
ಬಸವಯ್ಯ.ಬಿ	– ನ್ಯಾಯಾಂಗ ಇಲಾಖೆ, ಚಾಮರಾಜನಗರ
ವಿಜಯ್ ಕುಮಾರ.ಎನ್	
ಮೋಹನ್ ಬಾಬು	
ಉಮೇಶ್	
ನಾರಾಯಣ	

ಪರಾಮರ್ಶನ ಕೃತಿಗಳು

1) ಎಪಿಗ್ರಾಫಿಯಾ ಕರ್ನಾಟಿಕ (ಸಂಪುಟ- 4)

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

2) ಕನ್ನಡ ವಿಶ್ವಕೋಶ (ಸಂಪುಟ - 1),

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

3) ಹರದನಹಳ್ಳಿ ದರ್ಶನ,

ನಂಜುಂಡಸ್ವಾಮಿ.

4) ಇತಿಹಾಸ,

ಹೆಚ್.ಆರ್.ಕೆ. ಕೆ.ಎನ್.ಎ.

5) ಬಯಲು - ಮಲಯೂರು ಗುರುಸ್ವಾಮಿ